ಸಂಯುಕ್ತ ಪರಿಶೀಲನಾ ಸಮಿತಿಯ ಸದಸ್ಯರಾಗಿರಬೇಕೆಂದು ಹಾಗೂ ಸಮಿತಿಯ ವರದಿಯನ್ನು 25–4–92ರ ಒಳಗೆ ಸದನಕ್ಕೆ ಮಂಡಿಸಬೇಕೆಂಬ ವಿಚಾರವನ್ನು ಸಭೆಯು ಅಂಗೀಕರಿಸಬೇಕು.

(ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ)

68ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ

ವಿಷಯ :— ಇತ್ತೀಚೆಗೆ ನಾಗರಹೊಳೆ ಅರಣ್ಯದಲ್ಲಿ ಬೆಂಕಿ ದುರಂತದಿಂದಾದ ಹಾನಿಯ ಬಗ್ಗೆ ಚರ್ಚಿಸುವುದು

+ ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ವಿರೋಧ ಪಕ್ಷ ನಾಯಕರು):— ಮಾನ್ಯ ಅಧ್ಯಕ್ಷರೇ, ಏಶಿಯಾ ಖಂಡದ ಅತ್ಯಂತ ಪ್ರಸಿದ್ಧವಾದಂತಹ ನಿತ್ಯ ಹರಿದ್ವರ್ಣ ಅರಣ್ಯ ಮತ್ತು ಇಡೀ ದೇಶದಲ್ಲಿಯೇ ಹೆಸರಾಗಿರತಕ್ಕಂಥ ಒಂದು ಅಭಯಾರಣ್ಯದ ದುರಂತ ನಾಶವನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕಾಗಿ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ಕಳೆದ ತಿಂಗಳು 12ನೇ ತಾರೀಖು ಮತ್ತು 13ರ ಬೆಳಗಿನ ಮಧ್ಯೆ ನಡೆದ ಒಂದು ಘಟನೆ ಇಡೀ ರಾಷ್ಟ್ರದ ಗಮನ ಸೆಳೆಯುತಕ್ಕಂಥ ಒಂದು ದೊಡ್ಡ ದುರಂತಕ್ಕೆ ನಾಂದಿಯಾಯಿತು ಎನ್ನತಕ್ಕಂಥದ್ದರ ನಾವು ಇಲ್ಲಿ ಚರ್ಚೆ ಮಾಡುವಾಗ ಒಂದು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ನಾಗರಹೊಳೆ ಅಭಯಾರಣ್ಯದಲ್ಲಿ ನಡೆದ ಪ್ರಕರಣವನ್ನು ನೋಡುವುದಕ್ಕಾಗಿ ನಾನು ಹೋಗಿದ್ದೆ, ನಾವು ಅದೇ ಪರಿಸರದಿಂದ ಬಂದಿರುವವರು ಆದ್ದರಿಂದ ಹೆಚ್ಚು ಆಸಕ್ತಿಯಿಂದ ಅದನ್ನು ವೀಕ್ಷಣೆ ಮಾಡುವುದಕ್ಕೆ ಪ್ರಯತ್ನ ಪಟ್ಟೆ. ಇಲ್ಲಿ ಅಪರಾಧ ಯಾರಿಂದ ಆಯಿತು? ಹೇಗೆ ಆಯಿತು? ಇದಕ್ಕೆ ಹೊಣೆ ಯಾರು? ಈ ಶಾಸನ ಸಭೆಯಲ್ಲಿ ಇದಕ್ಕೆ ಉತ್ತರ ಯಾರು ಕೊಡಬೇಕು ಎನ್ನುವ ಪ್ರಶ್ನೆ ಇಲ್ಲಿ ಇದೆ. ಅರಣ್ಯ ಇಲಾಖೆಯ ಮಂತ್ರಿಗಳಿಗೆ ಅಷ್ಟೇ ಸೀಮಿತವಾದಂತಹ ಸಮಸ್ಯೆ ಇದಲ್ಲ. ಇದು ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಪಟ್ಟ ವಿಷಯ ಸಹ ಹೌದು. ಜೊತೆಗೆ ರಾಷ್ಟ್ರೀಯ ಅಭಯಾರಣ್ಯ ಆದ್ದರಿಂದ ಈ ಸಮಸ್ಯೆಯನ್ನು ಒಟ್ಟಾಗಿ ಇಡೀ ಸರ್ಕಾರ ತೀವ್ರ ಗಂಭೀರತೆಯಿಂದ ಆಲೋಚನೆ ಮಾಡಬೇಕೆಂದು ಹೇಳಿ ನಾನು ಪ್ರಸ್ತಾಪಕ್ಕೆ ಮುನ್ನ ನನ್ನ ಪೀಠಿಕೆ ಹೇಳುವುದಕ್ಕೆ ಪ್ರಯತ್ನ ಮಾಡಿದ್ದೇನೆ.

ಮಾನ್ಯ ಅಧ್ಯಕ್ಷರೇ, ಇಲ್ಲಿ ನಡೆದುದಾದರೂ ಏನು ? ಸ್ಥಳೀಯ ಜನಕ್ಕೆ ಅಲ್ಲಿ ಖಾಯಂ ಆಗಿ ಅರಣ್ಯ ಅಧಿಕಾರಿಯೊಬ್ಬರು ಇದ್ದರು. ಅವರ ಬಗ್ಗೆ ಸ್ಥಳೀಯ ಜನರಲ್ಲೇ ಒಂದು ರೀತಿಯ ಸಂಘರ್ಷ ಪ್ರಾರಂಭವಾಗಿತ್ತು. ಕಾರಣ ಏನೋ ಗೊತ್ತಿಲ್ಲ. ಸುಮಾರು 20 ವರ್ಷಗಳಿಂದ ಚಿನ್ನಪ್ಪ ಎನ್ನತಕ್ಕಂಥ ಅಧಿಕಾರಿ ಆ ಭಾಗದಲ್ಲಿ ಒಳ್ಳೆಯ ಕೆಲಸ ಮಾಡಿದ್ದರು. ಪರಿಸರ ಪ್ರೇಮಿ, ಎಲ್ಲಕ್ಕಿಂತಲೂ ಹೆಚ್ಚಾಗಿ ಅಲ್ಲಿ ಪೋಚರ್ಸ್ ಏನು ಇದ್ದಾರೆ, ಬೇಟೆ ಆಡತಕ್ಕಂಥ ಜನ ಇವರನ್ನು ನಿಯಂತ್ರಣದಲ್ಲಿ ತಂದಿದ್ದರು. ಇದು ಎಲ್ಲಾ ಸರಿ, ಆದರೆ ನನಗೆ ಆಶ್ಚರ್ಯ ಆದದ್ದು ಇಡೀ ಅರಣ್ಯ ಇಲಾಖೆಯಲ್ಲಿ ಚಿನ್ನಪ್ಪನ ಹೊರತುಪಡಿಸಿ ಮತ್ತೊಬ್ಬ ಪ್ರಾಮಾಣಿಕ ಅಧಿಕಾರಿ ಇಲ್ಲವೇನೋ ಎನ್ನುವ ರೀತಿಯಲ್ಲಿ ಎಲ್ಲ ಸರ್ಕಾರಗಳು ನಡೆದುಕೊಂಡಿರುವುದೇ ಈ ದುರಂತಕ್ಕೆ ಕಾರಣ. 20 ವರ್ಷಗಳಿಂದ ಆ ಅಧಿಕಾರಿಯನ್ನೆ ನೇಮಕ ಮಾಡಿದ್ದಾರೆ. ಒಂದೊಂದು ಸಾರಿ ಪ್ರಾಮಾಣಿಕತೆಗೂ ನಾವು ಬೆಲೆ ಕೊಡಬೇಕಾಗುತ್ತದೆ. ಅಂಥ ಬೆಲೆಯನ್ನು ಚಿನ್ನಪ್ಪ ಈ ಒಂದರಲ್ಲೇ ಗೆದಿದ್ದಾನೆ ಎಂದು ನನಗೆ ಗೊತ್ತು. ನಾಗರಹೊಳೆ ಆದಂತದ್ದೇ ಪ್ರಕರಣ, ಅದೇ ರೇಂಜಿನಲ್ಲಿ ಬರತಕ್ಕಂಥ ಬಂಡೀಪುರದಲ್ಲಿ ಏಕೆ ಆಗುವುದಿಲ್ಲ, ಅಥವಾ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇರುವಂಥ ಇನ್ನೊಂದು ಅಭಯಾರಣ್ಯದಲ್ಲಿ ಏಕೆ ಆಗುವುದಿಲ್ಲ, ಇಲ್ಲೇ ಏಕೆ ಆಗಿದೆ? ಯಾವ ಜನ ಹುಟ್ಟಿನಿಂದ ಅಲ್ಲಿ ಬಾಳಿ, ಬದುಕಿ ಅರಣ್ಯದ ಬದುಕನ್ನು ಜೊತೆಗೆ ಹೊಂದಿಕೊಂಡಿದ್ದರೋ ಆ ಜನ ಅರಣ್ಯಕ್ಕೆ ಬೆಂಕಿ ಹಚ್ಚುವಂಥ ಸ್ಥಿತಿಗೆ ಅವರ ಕೋಪ ಹೋಗಿದೆ ಎಂದರೆ ಇದರ ಹಿನ್ನೆಲೆಯನ್ನು ಕಂಡುಹಿಡಿಯಬೇಕಾಗುತ್ತದೆ. ಅಧ್ಯಕ್ಷರೇ, ಈ ಹಿನ್ನೆಲೆಯಲ್ಲಿ 1992ನೇ ಇಸವಿ ಫೆಬ್ರವರಿ ತಿಂಗಳ 12ರ ನಡು ರಾತ್ರಿಯಲ್ಲಿ ಚಿಪ್ಪ ಎನ್ನತಕ್ಕಂಥವನ ಸಾವು ಸಂಭವಿಸಿತು. ಈ ಸಾವು ಒಂದು ಕೊಲೆ, ಇದರ ಬಗ್ಗೆ ಯಾರಿಗೂ ಶಂಕೆ ಇಲ್ಲ. ಆದರೆ ಕೊಲೆ

ಯಾರಿಂದ ನಡೆಯಿತು ಎಂಬುದೇ ಇಲ್ಲಿರತಕ್ಕ ಮುಖ್ಯ ಪ್ರಶ್ನೆ ಈ ಕೊಲೆ ಯಾರಿಂದಲೇ ನಡೆದಿರಲಿ, ಕೊಲೆಗೆ ಯಾರೇ ಕಾರಣವಾಗಿರಲಿ, ಯಾವ ಸನ್ನಿವೇಶವೇ ಕಾರಣ ಆಗಿರಲಿ; ಈ ಅಭಯಾರಣ್ಯದ ಜವಾಬ್ದಾರಿಯನ್ನು ಹೊತ್ತಂಥ ಅಧಿಕಾರಿಗಳು ಈ ಸಾವಿನ ಸುದ್ದಿಯನ್ನು ತಿಳಿದೂ ಆ ವ್ಯಾಪ್ತಿಗೆ ಬರತಕ್ಕ ಕುಟ್ಟ ಪೋಲೀಸ್ ಸ್ಟೇಷನ್‌ಗೆ ಏತಕ್ಕೆ ದೂರನ್ನು ಸಲ್ಲಿಸಲಿಲ್ಲ? ಬಹುಶಃ ಅವರು ದೂರು ಸಲ್ಲಿಸದಿದ್ದರೆ, ಅದರ ಇನ್‌ವೆಸ್ಟಿಗೇಷನ್ ಸರಿಯಾದ ರೀತಿಯಲ್ಲಿ ನಡೆದು ಪೋಸ್ಟ್‌ಮಾರ್ಟಂ ಆಗಿ ಆ ಶವವನ್ನು ಅದರ ಸಂಬಂಧಿಕರಿಗೆ ಕೊಟ್ಟಿದ್ದುದ್ದಕ್ಕೆ ಈ ಪ್ರಕರಣ ನಡೆಯುವುದಕ್ಕೆ ಕಾರಣವೇ ಇರಲಿಲ್ಲ ಎಂಬುದು ನನ್ನ ಅಭಿಪ್ರಾಯ . ಈ ಜಿಲ್ಲೆಯಿಂದಲೇ ಬಂದಿರತಕ್ಕ ಅರಣ್ಯ ಮಂತ್ರಿಗಳು ಇಲ್ಲರುವುದರಿಂದ ಅವರೇ ಇದರ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲಬೇಕು. ಅಷ್ಟು ನಡು ರಾತ್ರಿಯಲ್ಲಿ ಆಗಂಥ ಕೊಲೆಯನ್ನು 13ನೇ ತಾರೀಖು ಮಧ್ಯಾಹ್ನದ ನಂತರ ಅಂದರೆ ಸುಮಾರು 14–15 ಗಂಟೆಗಳು ಕಳೆದಮೇಲೆ ಈ ದೇಹವನ್ನು ಚಿನ್ನಪ್ಪ ಎನ್ನತಕ್ಕ ಅರಣ್ಯಾಧಿಕಾರಿ ನೋಡಿದರು. ಈ ಹೆಣವನ್ನು ನೋಡಿದ ಮೇಲೆ ಏನು ಮಾಡಿದರು? ಇದಕ್ಕೆ ಪೂರ್ವಭಾವಿಯಾಗಿ ಬೆಳಿಗ್ಗೆ ಅರಣ್ಯಾಧಿಕಾರಿಗಳೇ ಈ ಶವವನ್ನು ನೋಡಿದರು, ಅದಕ್ಕೆ ಸಂಬಂಧಪಟ್ಟಂತೆ ಫೋಟೋಗಳನ್ನು ತೆಗೆದಿದ್ದರು ಎನ್ನತಕ್ಕದ್ದು ನಮಗೆ ಸಿಕ್ಕಿರುವಂತ ಸುದ್ದಿ. ಇದು ನಿಜವಾಗಿದ್ದರೆ ಇಷ್ಟೆಲ್ಲಾ ಮಾಡಿದವರು ಸಂಬಂಧಪಟ್ಟ ಪೋಲಿಸ್ ಸ್ಟೇಷನ್‌ಗೆ ಏತಕ್ಕೆ ದೂರು ಕೊಡಲಿಲ್ಲ? ಇದು ಮೊದಲನೇ ಪ್ರಶ್ನೆ. ಈಗ ಮಾನ್ಯ ಗೃಹ ಮಂತ್ರಿಗಳು ಇಲ್ಲ ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಈಗ ಮಾನ್ಯ ಅರಣ್ಯ ಇಲಾಖೆಯ ಮಂತ್ರಿಗಳೇ ಇರುವುದರಿಂದ ಅವರೇ ಈ ಪ್ರಶ್ನೆಗೆ ಉತ್ತರ ಕೊಡಬೇಕಾಗುತ್ತದೆ. ಕುಟ್ಟ ಪೋಲೀಸ್ ಸ್ಟೇಷನ್‌ಗೆ ಸಂಬಂಧಪಟ್ಟಂತೆ ಪೋಲೀಸ್ ಅಧಿಕಾರಿಗೆ ಈ ಸಂದೇಶ ತಲುಪಿದರೂ ಅದರ ಬಗ್ಗೆ ಅತ ಏನೂ ಕ್ರಮವನ್ನು ಕೈಗೊಳ್ಳಲಿಲ್ಲವೆ? ಹಾಗಾದರೆ ಪೋಲಿಸರು ಮತ್ತು ಅರಣ್ಯ ಇಲಾಖೆಗೂ ಇರತಕ್ಕ ಸಂಬಂಧ ಎಷ್ಟು ಸುಮಧುರವಾಗಿದೆ ಎಂಬುದನ್ನು ನಾವು ಇಲ್ಲಿ ಬಹಳ ದೀರ್ಘವಾಗಿ ಯೋಚನೆ ಮಾಡಬೇಕಾಗುತ್ತದೆ. ಇದಾದಮೇಲೆ ಅವತ್ತು ಸಂಜೆ ಶ್ರೀನಿವಾಸ್ ಎನ್ನತಕ್ಕ ಅರಣ್ಯ ವಿಭಾಗದ ಅಧಿಕಾರಿ ಡಿ.ಎಫ್.ಓ.ರವರನ್ನು ಕಾಂಟ್ಯಾಕ್ಟ್ ಮಾಡುತ್ತಾನೆ. ಡಿ.ಎಫ್.ಓ. ರವರು ಜಿಲ್ಲಾ ಪೋಲಿಸ್ ಅಧಿಕಾರಿಗಳನ್ನು ಮತ್ತು ಜಿಲ್ಲಾಧಿಕಾರಿಯವರನ್ನೂ ಸಂಪರ್ಕ ಮಾಡುತ್ತಾರೆ. ಅನಂತರ ಅವರು 14ನೇ ತಾರೀಖು ಟಿ.ಬಿ.ಗೆ ಬರುತ್ತಾರೆ. ಎಂದರೆ ಸುಮಾರು 48 ಗಂಟೆಕಾಲ ಶವ ಅಲ್ಲೇ ಬಿದ್ದಿತ್ತು. ಇದಕ್ಕೆ ಯಾರೂ ವಾರಸುದಾರರು ಇರಲಿಲ್ಲ, ಯಾರೂ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿರಲಿಲ್ಲ ಎನ್ನತಕ್ಕದ್ದು ಇಲ್ಲಿ ಸಾಬೀತಾಗುತ್ತದೆ. ಅವತ್ತಿನ ದಿವಸ ಚೆಪ್ಪನ ಸಾವಿಗೆ ಯಾರೂ ದಾಳೀಕರು ಇಲ್ಲ ಎಂದು ತಿಳಿದಮೇಲೆ ಜನರು ರೊಚ್ಚಿಗೆದ್ದರು. ಅಲ್ಲಿ ಸುತ್ತಮುತ್ತ ಇದ್ದಂಥ ಜನರು ಹೆಣ ಇಲ್ಲಿದ್ದರೂ ಯಾರೂ ಇದರ ಜವಾಬ್ದಾರಿಯನ್ನು ಹೊರುವುದಕ್ಕೆ ಸಿದ್ಧವಿಲ್ಲ ಎಂದು ಹೇಳಿದಾಗ ಸಹಜವಾಗಿ ಜನರು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಮಾಡಿದರು. ಅದನ್ನು ವ್ಯಕ್ತಮಾಡುವುದಕ್ಕೆ ಮುಂಚಿತವಾಗಿ ಶವ ಪರೀಕ್ಷೆ ಆಗಬೇಕಾಗಿತ್ತು. ಶವ ಪರೀಕ್ಷೆಗೆ ಮುಂಚಿತವಾಗಿ ಇನ್‌ಕ್ವೆಸ್ಟ್ ಆಯಿತು. ಆದರೆ ಆ ಇನ್‌ಕ್ವೆಸ್ಟ್‌ನ್ನು ಆ ದೇಹ ಎಲ್ಲಿ ಬಿದ್ದಿತ್ತೋ ಅಲ್ಲಿ ಮಾಡಿದರೋ ಅಥವಾ ಅಲ್ಲಿಂದ ಈಚೆಗೆ ಎಳೆದುಕೊಂಡು ಬಂದು ಮಾಡಿದರೋ ಅದು ನನಗೆ ಗೊತ್ತಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಹೇಳಬೇಕು. ಇನ್‌ಕ್ವೆಸ್ಟ್ ಆಗಿ ಶವ ಪರೀಕ್ಷೆ ಮಾಡಿ ಸಂಬಂಧಪಟ್ಟವರಿಗೆ ಒಪ್ಪಿಸುವುದಕ್ಕೆ ಮುಂಚಿತವಾಗಿ ನಡೆದಂಥ ಪ್ರಕಟಣೆ ಮತ್ತೊಂದು ಈ ದಾಂಧಲೆಗೆ ಕಾರಣವಾಯಿತು. ಅಲ್ಲಿ ಏನು ನಡೆಯಿತು? It was the direct responsibility of the police department. The police department having been in charge of the law and order, having known that it is a murder case, having done an inquest, should have taken the charge of the dead body till the post mortom is done. ಪೋಸ್ಟ್ ಮಾರ್ಟಂ ಆಗುವುದಕ್ಕೆ ಮುಂಚಿತವಾಗಗಿ ಈ ಶವವನ್ನು ಸಾರ್ವಜನಿಕರಿಗೆ ಪೋಲಿಸರು ಒಪ್ಪಿಸಿದ್ದಾರೆ. ತಮಗೆ ಏನೂ ಜವಾಬ್ದಾರಿ ಇಲ್ಲ ಎನ್ನತಕ್ಕ ರೀತಿಯಲ್ಲಿ ಸಾರ್ವಜನಿಕರಿಗೆ ಇದನ್ನು ಒಪ್ಪಿಸಿದ್ದಾರೆ. ಇದಕ್ಕೆ ಯಾರು ಕಾರಣ? ಸಾರ್ವಜನಿಕರ ಕೈಗೆ ಒಪ್ಪಿಸಿದಮೇಲೆ ಈ ಶವ ಪರೀಕ್ಷೆ ಎಲ್ಲಿ ಆಗುತ್ತದೆ ಎಂದರೆ

ಸಂಬಂಧಪಟ್ಟ ವ್ಯಾಪ್ತಿಗೆ ಬರುವಂಥ ಆಸ್ಪತ್ರೆಯಲ್ಲಿ ಆಗುವುದಿಲ್ಲ. ಈ ಶವವನ್ನು ಸಾರ್ವಜನಿಕರು ಚಿನ್ನಪ್ಪ ಎನ್ನತಕ್ಕ ಆರ್.ಎಫ್.ಒ. ಮನೆಗೆ ತರುತ್ತಾರೆ, ಅಲ್ಲಿಗೆ ಡಾಕ್ಟರು ಬಂದು ಆ ಶವ ಪರೀಕ್ಷೆಯನ್ನು ಮಾಡುತ್ತಾರೆ. ಯಾವ ಡಾಕ್ಟರು ಶವಪರೀಕ್ಷೆ ಮಾಡಿದರು, ಶವ ಏತಕ್ಕೆ ಅಲ್ಲಿಗೆ ಬಂತು ಎಂದು ನನಗೆ ಗೊತ್ತಿಲ್ಲ. ಪೋಲಿಸ್‌ನವರು ಶವಪರೀಕ್ಷೆಗೆ ಮುನ್ನ ಸಾರ್ವಜನಿಕರ ಕೈಗೆ ಈ ಶವವನ್ನು ಕೊಟ್ಟ ಕಾರಣವನ್ನು ನಾನು ಹೋಮ್ ಡೀಪಾರ್ಟ್‌ಮೆಂಟ್‌ನಿಂದ ವಿವರಣೆ ಪಡೆಯಲಿಕ್ಕೆ ಇಷ್ಟಪಡುತ್ತೇನೆ. ಇದು ಎರಡನೆಯದು. ಮತ್ತೊಂದು ಬಹಳ ಮುಖ್ಯವಾದ ಪ್ರಶ್ನೆ ನಾನು ಕೊಲೆಗೆ ಆಮೇಲೆ ಬರುತ್ತೇನೆ. ಇದು ರಾಷ್ಟ್ರೀಯ ಅಭಯಾರಣ್ಯ. ಆ ಕಾರಣ ಅಲ್ಲಿ ನಡೆಯತಕ್ಕಂಥ ಚಟುವಟಿಕೆಗೆ ನೇರ ಜವಾಬ್ದಾರಿ ಜಿಲ್ಲಾಧಿಕಾರಿಗಳು. ರಾಷ್ಟ್ರೀಯ ಅಭಯಾರಣ್ಯವಾದ ಕಾರಣ ಕೊಡಗೂ ಜಿಲ್ಲೆಯ ಜಿಲ್ಲಾಧಿಕಾರಿಗಳು ನೇರವಾಗಿ ಅದರಲ್ಲಿ ಜವಾಬ್ದಾರರಾಗುತ್ತಾರೆ. ಒಂದು ವೇಳೆ ಈ ಕೊಲೆಯನ್ನು ಅರಣ್ಯ ಇಲಾಖೆಯವರೇ ಮಾಡಿದ್ದರೆ ಅವರನ್ನು ಶಾಸನ ಎಕ್ಸ್‌ಕ್ಯೂಸ್ ಮಾಡುತ್ತದೆ. ಸಪ್ಟಂಬರ್ 1991 ರಲ್ಲಿ ಸರ್ಕಾರಿ ಆಜ್ಞೆ ಏನು ಹೊರಟಿದೆ ಇದರಲ್ಲಿ ಫಾರೆಸ್ಟ್ ಅಧಿಕಾರಿಗಳಿಗೆ ಒಂದು ಇಮ್ಯೂನಿಟಿ ಕೊಟ್ಟು ಸರ್ಕಾರ ಏನು ಹೊರಡಿಸಿದೆ ಆ ಆದೇಶದ ಪ್ರಕಾರ ಸಂಜೆ 6 ಗಂಟೆಯಿಂದ ಬೆಳಿಗೆ 6 ಗಂಟೆಗಳವರೆಗೆ 1990ನೇ ಇಸವಿ ಸಪ್ಟಂಬರ್ 20ನೇ ತಾರೀಖು ನೀವು ಹೊರಡಿಸತಕ್ಕಂಥ ಆಜ್ಞೆ ಪ್ರಕಾರ ಯಾರು ಬೇಕಾದರೂ ಅರಣ್ಯ ಇಲಾಖೆಯವರು ಮತ್ತು ಅಭಯಾರಣ್ಯಕ್ಕೆ ಸಂಬಂಧಪಟ್ಟವರು ಆ ಪ್ರದೇಶದಲ್ಲಿ ಓಡಾಡತಕ್ಕಂಥ ಜನರನ್ನು ಕಂಡರೆ ನೇರವಾಗಿ ಗುಂಡುಹಾಕಿ ಕೊಲ್ಲುವುದಕ್ಕೂ ಕೂಡ ಅವಕಾಶ ಇದೆ. ಒಂದು ವೇಳೆ ಇದು ಅರಣ್ಯ ಇಲಾಖೆಯವರಿಂದಲೇ ಆಗಿದ್ದರೆ ಇದರ ಲಾಭವನ್ನು ಪಡೆಯಲಿಕ್ಕೆ ಅರಣ್ಯ ಇಲಾಖೆಯವರು ಏತಕ್ಕೆ ಪ್ರಯತ್ನ ಮಾಡಲಿಲ್ಲ? when they have immunity they could have taken advantage of this liability and has said, yes, we have done it. ಅವರು ನಾವು ಮಾಡಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಅದಕ್ಕೂ ಎರಡೂ ಕಾರಣಗಳಿರಬಹುದು. ಹಿಂದೆ ಇಂಥದೇ ಒಂದು ಅಚಾತುರ್ಯ ಅರಣ್ಯ ಅದಿಕಾರಿಗಳಿಂದ ಆಗಿತ್ತು. ಆದ್ದರಿಂದ ಒಂದು ಸಾವು ಸಂಭವಿಸಿತ್ತು. ಅದರಲ್ಲಿ ಅರಣ್ಯ ಅಧಿಕಾರಿಗಳು ತಮ್ಮದು ತಪ್ಪು ಎಂದು ಒಪ್ಪಿಕೊಂಡರು. ಬಿಡುಗಡೆ ಕೂಡ ಆಗಿತ್ತು. ಆಗ ಈ ಶಾಸನ ಇರಲಿಲ್ಲ. ಅದಾದಮೇಲೆ ಈ ಶಾಸನ ಬಂತು If I am correct. ಅದಕ್ಕೆ ಮುಂಚೆ ಇದ್ದಂಥ ಶಾಸನದಲ್ಲಿ ರಕ್ಷಣೆ ಸಿಕ್ಕುವುದಾದರೆ ಈಗ ಏತಕ್ಕೆ ಮುಚ್ಚಿಟ್ಟರು? ಇದು ನಮ್ಮದಲ್ಲವೆಂದು ಹೇಳಿ? ನಾಮು ಅಂದುಕೊಳ್ಳುತ್ತೇನೆ., ಹಿಂದೆ ಆದಂಥ ಪ್ರಕರಣದಿಂದ ಸ್ಥಳೀಯ ಜನರು ಭಾವನೆಗಳನ್ನು ಕೆದರಿದ್ದರು. ಅಂಥದ್ದೇ ಮತ್ತೊಂದು ಪ್ರಕರಣ ಇಲ್ಲಿ ನಡೆಯಿತೆಂದು ಹೇಳಿ ಅದನ್ನು ಹೇಳಿದರೆ ಇಡೀ ಅರಣ್ಯ ಇಲಾಖೆಯೇ ಜನರು ರೊಚ್ಚಿಗೆದ್ದು ಸುಟ್ಟುಬಿಡಬಹುದು ಎನ್ನುವ ಭೀತಿಯಿಂದ ಅವರು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಏನಾದರೂ ನಾವು ಮಾಡಿಲ್ಲವೆಂದರೋ? ಇದು ಕೂಡ ಪರೀಕ್ಷೆಯಾಗಬೇಕು. ಈಗ ಅದು ಸಿ.ಒ.ಡಿ. ತನಿಖೆಯಲ್ಲಿದೆ. ಆದ್ದರಿಂದ ವಿಶೇಷವಾಗಿ ನಾನು ಹೇಳುವುದಿಲ್ಲ. ಹಾಗಲ್ಲದಿದ್ದರೆ ಅರಣ್ಯ ಇಲಾಖೆಯವರು ಮಾಡದಿದ್ದರೆ ಈ ಸಾವು ಸಂಬವಿಸಿದ್ದು ಯಾರಿಂದ?

(ಉಪಾಧ್ಯಕ್ಷಣಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಈ ಒಂದು ಕೊಲೆಗೆ ಅರಣ್ಯ ಇಲಾಖೆಯನ್ನು ಹೊರತುಪಡಿಸಿ, ಯಾರು ಮಾಡಿದರು, ಅದು ಮಾಡಿದ್ದರೆ ನೇರವಾಗಿ it clearly amounts to a murder committed by an unknown man which is to be investigated. It is the duty of the police and the district magistrate to take cognisance of the case. ಪೋಲಿಸ್ ಇಲಾಖೆಯವರು ಏತಕ್ಕೆ ಇದರ ಇನವೆಸ್ಟಿಗೇಷನ್ ಜವಾಬ್ದಾರಿಯನ್ನು ತೆಗೆದುಕೊಳ್ಳಲಿಲ್ಲ? ಇದು ಕೊಲೆ ಅರಣ್ಯ ಇಲಾಖೆಯವರು ನಮ್ಮದಲ್ಲವೆಂದರೆ ಕಾರಣ ಏನಾದರೂ ಹೇಳಿ ತಾವು? ಅದು ಹೌದು ಎನ್ನುವುದಾದರೆ ಇಲ್ಲಗೆ ಬರುವುದಿಲ್ಲ. ಅಲ್ಲವೆಂದರೆ ಪೋಲಿಸ್ ಇಲಾಖೆಯವರು ಅದರ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ.

Mr. Belliappa is a senior counsel Advocate who knows the Criminal Law much more than me. If the Forest Department disowner the death of this chippa, then the law and order takes its course, if., the Criminal law will immediately set into action. Why the police failed to do so? ಕುಟ್ಟಾ ಪೋಲಿಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಬರತಕ್ಕ ಸ್ಟೇಷನ್ ಅಧಿಕಾರಿ ಏತಕ್ಕೆ ಇದನ್ನು ಗಮನಿಸಲಿಲ್ಲ? ಚಿಪ್ಪನ ಸಾವು ಒಂದದು ವ್ಯಕ್ತಿಯ ಸಾವು.

SRI A.M. BELLIAPPA : Unfortunately the information that we received was, nobody complained to the Police Station for nearly about six to seven hours. Neither the Forest people did complain nor the *Villagers go and complained.* Under these circumseances, the police were in the dark.

ಶ್ರೀ ಡಿ. ಬಿ. ಚಂದ್ರೇಗೌಡ:– ಸ್ವಲ್ಪ ಅಟೆನ್ಷನ್ ಡೈವರ್ಟ್ ಆಯಿತು.

SRI BASAVARAJ RAYA REDDY: is it not the duty of the state. ಆಗುವುದಿಲ್ಲವೇ? ಯಾರೂ ಕಂಪ್ಲೇಟ್ ಕೊಡಬೇಕಾಗಿಲ್ಲ.

SRI A.M. BELLIAPPA : We do not dispute it. But..

SRI BASAVARAJ RAYAREDDY : Under Section 302 of the Criminal Procedure Code, there is no need to complain. It is the duty of the State to own the responsibility and take action.

SRI A.M. BELLIPAPPA: I agreed with you the state's responsibility is there. I do not for a moment dispute that. Unfortunately, when the police has not been given complaint, what can the police do? When neither the forest people nor the villagers had given any complaint to the police, under the circumstances, police kept quiet for six to seven hours. That is what I want to convince you.

ಶ್ರೀ ಡಿ.ಬಿ ಚಂದ್ರೇಗೌಡ:– ನಾನು ಪ್ರಾರಂಭಕ್ಕೆ ಅದನ್ನು ಹೇಳಿದೆ. 12ರ ರಾತ್ರಿ ನಡೆದಂತ ಕೊಲೆಯ ಸುದ್ದಿ 13ನೇ ತಾರೀಖು ಸಾಯಂಕಾಲ ಶ್ರೀನಿವಾಸನಿಗೆ ಸುದ್ದಿ ಮುಟ್ಟುತ್ತದೆ. ಮಧ್ಯಾಹ್ನದ ಸುಮಾರಿನಲ್ಲಿ ಚಿನ್ನಪ್ಪ ಎಂಬ ಅಧಿಕಾರಿ ಶವವನ್ನು ನೋಡುತ್ತಾನೆ. ಅದಕ್ಕಿಂತ ಮುಂದೆ ಬೆಳಗಿನ ಹೊತ್ತಿನಲ್ಲಿ ಫೋಟೋ ತೆಗೆದಿದ್ದರು. ಯಾರು ಅವರು? ಈ ಪ್ರಶ್ನೆ ಕೇಳಿದ್ದೇನೆ. ಇದೆಲ್ಲವನ್ನು ಇನ್‌ವೆಸ್ಟಿಗೇಷನ್‌ನಲ್ಲಿ ಹಾಕಬೇಕು. ಇದು ಒಂದು ಭಾಗ. ಜನರನ್ನು ಉದ್ರೇಕಗೊಳಿಸತಕ್ಕ ಪರಿಸ್ಥಿತಿ ಉಂಟಾಗಿದೆ. ಚಿಪ್ಪನ ಸಾವು ಒಬ್ಬ ವ್ಯಕ್ತಿಯ ಸಾವು; ನಾಗರಹೊಳೆ ಅರಣ್ಯ ನಾಶ ಇಡೀ ರಾಷ್ಟ್ರಕ್ಕೆ ಆದಂಥ ನಷ್ಟ ಮತ್ತು ಮಲೆನಾಡು ಪ್ರದೇಶದ ಈ ಒಂದು ಅರಣ್ಯ ಪ್ರದೇಶದಿಂದ ಬರತಕ್ಕ ನಮಗೆಲ್ಲ ಆದಂಥ ಒಂದು ಆಘಾತ. ನಾನು ಎಂದೆಂದೂ ಇದನ್ನು ಒಪ್ಪುವುದಿಲ್ಲ. ಕೊಡಗಿನ ಜನರಾಗಿ ಆ ಭಾಗದಿಂದ ಬರತಕ್ಕ ಜನ ಕಾಡಿಗೆ ಬೆಂಕಿ ಹಚ್ಚತಕ್ಕ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಯಾರು ಮಾಡಿದರು? ಅದಕ್ಕೆ ನಾನು ಹೇಳಿದೆ.

ಶ್ರೀ ಸಿ. ಬೈರೇಗೌಡ : ಊರೆಲ್ಲ ಜಂಗಮರೇ, ಆದರೆ ಕೋಳಿ ಮಾತ್ರ ಪತ್ತೆ ಇರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ ಕೋಳಿ ಹೊರಟು ಹೋಗಿದೆ, ಜಂಗಮರು ಇದ್ದಾರೆ. ಹಾಗಾದರೆ ಯಾರು ತಿಂದರು ?

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕೆ ನಾನು 'ಎತ್ತಿಗೆ ಜ್ವರ ಎಂದರೆ ಎಮ್ಮೆಗೆ ಬರೆ ಹಾಕಿದರು' ಎಂದು ಹೇಳಿದೆ. ಆದುದರಿಂದ ಈ ಕಿಡಿಗೇಡಿಗಳು, ವಿಚ್ಛಿದ್ರಕಾರಕ ಸಮಾಜ ಘಾತುಕ ಶಕ್ತಿಗಳು ಅಲ್ಲಿ ಕೆಲಸ ಮಾಡುತ್ತಿವೆ. ಆ ಸಮಾಜಘಾತುಕ ಶಕ್ತಿಗಳನ್ನು ಗುರುತಿಸತಕ್ಕ ಕೆಲಸ ಆಗಬೇಕು. ಚಿಪ್ಪನ ಸಾವಿನ ಸಂಬಂಧ, ಮತ್ತು ಅವರ ಜೊತೆ ಬಂದೂಕು ಇತ್ತು, ಆ ಬಂದೂಕು ಏನಾಯಿತು? ಅದರ ಮಾಲೀಕರು ಯಾರು? ಗನ್ ಲೈಸನ್ಸ್ ಯಾರ ಹೆಸರಲ್ಲಿದೆ ? ಇಲ್ಲದಿದ್ದರೆ ಬಂದೂಕು ಯಾರದ್ದು?

ಸಾಧ್ಯವಾದಷ್ಟು ಬೇಗ ಆ ಬಂದೂಕು ಮುಚ್ಚಿಡುವುದಕ್ಕೆ ಪ್ರಯತ್ನ ನಡೆಯಿತು. ಆದರೆ ಕ್ರಿಮಿನಲ್ ಲಾ ನಲ್ಲಿ ಒಂದು ಹೇಳುತ್ತಾರೆ. ಅಪರಾಧ ಮಾಡಿದವನು ಏನಾದರೂ ಒಂದು ಸುಳಿವು ಬಿಟ್ಟುಹೋಗುತ್ತಾನೆ. ಎಲ್ಲಾ ಹುಡುಕಿದರು. ಆದರೆ ಸತ್ತ ಹೆಣದ ಹಿಪ್‌ಪಾಕೆಟ್‌ನಲ್ಲಿ ಗುಂಡು ಇದ್ದವು. ಏನಾಯಿತು ಅವು? ಅಂದರೆ ಇಲ್ಲಿ ಈ ಗುಟ್ಟು ರಟ್ಟು ಮಾಡುವುದಕ್ಕೆ ನಿಮ್ಮಿಂದ ಸಾಧ್ಯವೇ? ಎಲ್ಲಾ ವಿಚಾರ ಇಲ್ಲಿ ಬಿಚ್ಚಿ ಹೇಳುವುದಿಲ್ಲ. ಹಿಪ್ ಪಾಕೆಟ್‌ನಲ್ಲಿ ಬಂದೂಕಿಗೆ ಅದು ಯಾವ ನಂಬರೋ, 20ನೇ ನಂಬರ್ ಎಂದು ಹೇಳುತ್ತಾರೆ, 16ನೇ ನಂಬರ್ ಎಂದ ಹೇಲುತ್ತಾರೆ. ಆ ಬಂದೂಕಿಗೆ ಸರಿಹೊಂದುವಂಥ ಕಾಟ್ರಿಡ್ಜಸ್ ಇದ್ದವು. ಅದು ಏನಾಯಿತು? ಇಲ್ಲಿ ನಾನು ಹೇಳತಕ್ಕ ಸಮಾಜಘಾತುಕ ಶಕ್ತಿಗಳು ಇವನನ್ನು ಬಲಿ ತೆಗೆದುಕೊಂಡಿವೆ. ಈ ಚಿಪ್ಪಿನ ಬಲಿ ಸಮಾಜಘಾತುಕ ಶಕ್ತಿಗಳಿಂದ ಆಗಿದೆ. ಆದ್ದರಿಂದ ಈ ಸಮಾಜಘಾತುಕ ಶಕ್ತಿಗಳನ್ನು ಗುರುತಿಸದ ಹೊರತು ಈ ಅರಣ್ಯವನ್ನು ಅಭಿವೃದ್ಧಿ ನಿರ್ಮಾಣ ಮಾಡಲಿಕ್ಕೆ ಸಾಧ್ಯವಿಲ್ಲ. ಆದರೆ ಅರಣ್ಯ ಸುಟ್ಟ ಕೂಡಲೇ ಮರಗಳೆಲ್ಲಾ ಸುಟ್ಟುಹೋಗಿವೆ ಎಂಬ ವಾದ ಏನು ಹೇಳುತ್ತಿದ್ದಾರೆ ಇದು ಸರಿಯಲ್ಲ.

ಶ್ರೀ ಎ.ಎಂ. ಬೆಳ್ಳಿಯಪ್ಪ : ಈಗ ಚಿಪ್ಪ ಸತ್ತಿದ್ದಾನೆ. It is a suspicious death. It must be a murder. ಅದರ ಸಮಾಜಘಾತುಕ ಶಕ್ತಿಗಳನ್ನು ಗುರುತಿಸಬೇಕು ಎಂದು ನೀವು ಹೇಳುತ್ತಾ ಇದ್ದೀರಿ. ಈ ಸಮಾಜಘಾತುಕ ಶಕ್ತಿಗಳು ಚಿಪ್ಪನನ್ನು ಫಾರೆಸ್ಟ್ ಏರಿಯಾದಲ್ಲಿ ಏತಕ್ಕೆ ಕೊಲ್ಲಬೇಕು? You want the Government to findout that the anti-social clements are responsible to bring the end ofd Chippa, that is, to kill Chippa. Why should those anti-social elements get into forest to kill Chippa?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಬೆಳ್ಳಿಯಪ್ಪನವರೆ, ನೀವು ಸಮಸ್ಯೆ ಅರ್ಥ ಮಾಡಿಕೊಂಡಿದ್ದೀರಿ ಎಂದು ತಿಳಿದುಕೊಂಡಿದ್ದೆ. ಈ ಚಿಪ್ಪಿನ ಕೊಲೆ ಸಮಾಜಘಾತುಕ ಶಕ್ತಿಗಳಿಂದ ಆಗಿದೆ ಎಂಬ ಶಂಕೆ ನಿಮಗೆ ಎಂಬುದು ಪ್ರಶ್ನೆ. ಸಮಾಜಘಾತುಕ ಶಕ್ತಿಗಳು ಚಿಪ್ಪನಂಥವರನ್ನು ಬಳಸಿಕೊಂಡಿದ್ದಾರೇ. ಅದೇ ಸಮಾಜಘಾತುಕ ಶಕ್ತಿಗಳು ತಾವು ಮಾಡುತ್ತಾ ಇರತಕ್ಕ ಸ್ಮಗ್ಲಿಂಗ್, ಗಂಧ ಹೊಡೆಯುವುದು, ಜೀಪ್ ಹೊಡೆಯುವುದು, ಇದೆಲ್ಲಾ ಮಾಡುತ್ತಿದ್ದಾರಲ್ಲ ಇದೇ ಶಕ್ತಿಗಳು ಚಿಪ್ಪನ ಸಾವಿನ ನೆಪವನ್ನು ಹಾಕಿ ಪ್ರಾಮಾಣಿಕ ಅಧಿಕಾರಿಗಳ ಮೇಲೆ ಹಲ್ಲೆಯನ್ನು ಮಾಡಿದ್ದಾರೆ. ಅರಣ್ಯ ರಕ್ಷಣೆಗೆ ಹಗಲು ರಾತ್ರಿ ದುಡಿದಿರುವ ಪ್ರಾಮಾಣಿಕ ವ್ಯಕ್ತಿಗಳನ್ನು ಹಲ್ಲೆ ಮಾಡಿರುವ ಶಕ್ತಿಗಳು ಇವರೇ. ಈ ಅರಣ್ಯ ಅಭಯಾರಣ್ಯ ಎಂದು ಹೇಳುವಾಗ ನಾನು ಕೇಳಿದೆ. ಕಾಡಿಗೆ ಬೆಂಕಿ ಬಿದ್ದರೆ ಮರ ಎಲ್ಲಾ ಸುಟ್ಟುಹೋಗುತ್ತದಾ ಎಂದು ಕಾಡಿಗೆ ಬೆಂಕಿ ಬೀಳುತ್ತದೆ ಎಲ್ಲಾ ಕಡೆ. ನಮ್ಮ ಕಡೆಯಂತೂ ಪ್ರತಿವರ್ಷ ಬೀಳುತ್ತದೆ. ಬೆಂಕಿ ಹಾಕಬೇಕು ಎಂದು ಅಲ್ಲ ಅದಕ್ಕೆ. ಪ್ರಾಣಿಗಳ ಓಡಾಟದಿಂದ, ಕಲ್ಲು ತಿಕ್ಕಾಟದಿಂದ ಬೆಂಕಿ ಬೀಳುತ್ತದೆ. ಆದಕ್ಕಾಗಿ ಫಾರೆಸ್ಟ್ ಇಲಾಖೆಯವರು ಜನವರಿ ಫೆಬ್ರವರಿ ತಿಂಗಳಲ್ಲಿ ರಸ್ತೆಗಳನ್ನು ರಿಪೇರಿ ಮಾಡುತ್ತಾರೆ. ಡಿಸೆಂಬರ್‌ನಲ್ಲಿ ನಮ್ಮ ಕಡೆ ಪ್ರಾರಂಭವಾಗುತ್ತದೆ. ಇಲ್ಲಿ ಯಾವಾಗ ಪ್ರಾರಂಭ ಮಾಡುತ್ತಾರೋ ನನಗೆ ಗೊತ್ತಿಲ್ಲ. ಒಂದು ವೇಳೆ ಬೆಂಕಿ ಬಿದ್ದರೂ ಅಷ್ಟಕ್ಕೆ ಸೀಮಿತವಾದ ಪ್ರದೇಶದಲ್ಲಿ ಸುಡುತ್ತದೆ. ಅದಕ್ಕಿಂತ ಆಚೆ ದಾಟುವುದಿಲ್ಲ. ಬೆಂಕಿ ಬಿದ್ದರೆ ಅರಣ್ಯದಲ್ಲಿ ಹತ್ತು ಇಪ್ಪತ್ತು ವರ್ಷಗಳ ಕಾಲದ್ದು ಸಣ್ಣಪುಟ್ಟದ್ದು ಸುಟ್ಟುಹೋಗಬಹುದು. ಮೊಟ್ಟೆ ಇಡತಕ್ಕ ಪ್ರಾಣಿಗಳ ಮೊಟ್ಟೆ ಸುಡಬಹುದು. ಪರಿಸರದಲ್ಲಿ ಓಡಾಡತಕ್ಕ ಹಾವು ಚೇಳು ಇಂಥ ಪ್ರಾಣಿಗಳು ಸಾಯಬಹುದು. ಆದರೆ ಮರವನ್ನೇ ಸುಡುತ್ತದೆಂದು ಹೇಳುತ್ತೀರಲ್ಲ ಅದು ಸರಿಯಲ್ಲ. ಇನ್ನೊಂದು ವರದಿ ನೋಡಿದೆ. ನಾಗರಹೊಳೆ ಅರಣ್ಯ ಸುಟ್ಟ ಮೇಲೆ ಉಪಗ್ರಹದ ಒಂದು ಚಿತ್ರ ಕೂಡ ತೆಗೆದಿದ್ದಾರೆ. ಸ್ವಾಮಿ, ನನ್ನ ಅನುಭವದಲ್ಲಿ ನಾನು ಹೇಳುತ್ತೇನೆ. ಈ ಅರಣ್ಯ ಇನ್ನು ವಾರ ಅಥವಾ ಹದಿನೈದು ದಿವಸದಲ್ಲಿ ಒಂದು ಮಳೆ ಬಂದರ ಚಿಗುರಿಕೊಳ್ಳುತ್ತದೆ. ಮರದ ಸ್ವಭಾವ, ಮರ ಸಾಯುವುದಿಲ್ಲ. ಆದರೆ ಆದಕ್ಕಿಂತಲೂ ತಡವಾದರೆ ಮರಗಳು ಕೆಲವು ಹೋಗುತ್ತವೆ. ಹಾಗಿದ್ದರೆ ಮರ ಎಲ್ಲಾ ಸುಟ್ಟಿವೆ ಎಂದು ಯಾರು ಪ್ರಭಾವ ಮಾಡುತ್ತಿದ್ದಾರೆ? ಇಲ್ಲೂ ಸಮಾಜಘಾತುಕ ಶಕ್ತಿಗಳಿದ್ದಾವೆ. ನೀವು ಕತ್ತರಿಸಿ ಹಾಕಿರುವರೇ ಅಥವಾ ಅವರಿಗೆ ಬೇಕಾದ ಮರಗಳು ಏನಿವೆಯೋ ಅವು ಸುಟ್ಟುಹೋಗಿವೆ ಎನ್ನುವ ನೆಪ ಹೇಳಿ

ಸಾಗಿಸತಕ್ಕ ಪ್ರಯತ್ನ ನಡೆಯುತ್ತಿದೆ. ಇದು ನಿಮ್ಮ ಗಮನದಲ್ಲಿ ಇರಬೇಕು. ಅದುದರಿಂದ ಈ ಜಂಜಾಟದ ಒಳಗಡೆ ಮೂಲಕ ಮತ್ತೊಂದು ಸಮಸ್ಯೆ ಬಂದಿದೆ. ಅಲ್ಲಿ ಹುಲಿ ಮತ್ತು ಚಿರತೆಗಳ ಸಂಶೋಧನೆ ಮಾಡತಕ್ಕ ಕಾರ್ಯ ನಡೆಯಿತು. ಆ ಸಂಶೋಧನೆಗೆ ಅವಕಾಶ ಏಕೆ ಕೊಟ್ಟರು ಎಂದರೆ, ಇದು ಒಂದು ವರ್ಜಿನ್ ಫಾರೆಸ್ಟ್ ಏಷ್ಯಾ ಖಂಡದಲ್ಲೇ ವರ್ಜಿನ್ ಫಾರೆಸ್ಟ್ ಇದು. ಯಾವಾಗಲೂ ಬೆಂಕಿ ಬಿದ್ದಿದ್ದೇ ಆಗಲೀ, ಮತ್ತೊಂದಾಗಲೀ ಆಗಿಲ್ಲ. ಅಲ್ಲಿ ಸಮಸ್ತ ಪ್ರಾಣಿಗಳ ಓಡಾಟಕ್ಕೆ ಬೇಕಾದ ಒಂದು ವ್ಯವಸ್ಥೆ ಇದೆ ಎಂದು ಅಲ್ಲಿ ಕಾರಂತರಿಗೆ ಸಂಶೋಧನೆ ಮಾಡಲು ಹುಲಿ ಮತ್ತು ಚಿರತೆಗಳಿಗೆ ರೇಡಿಯೋ ಕಾಲರ್ ಹಾಕಲು ಅನುಮತಿ ಕೊಟ್ಟಿದ್ದಾರೆ. ಇವತ್ತು ವಿಜ್ಞಾನಿಗಳು ಏನೇ ಹೇಳಲಿ, ಅನುಭವಿಗಳು ಏನೇ ಹೇಳಲಿ. ಆದರೆ ನನ್ನ ಅನುಭವವೇ ಬೇರೆ. ನಮ್ಮಲ್ಲಿ ಎಷ್ಟೋ ಜನರಿಗೆ ಇದು ಗೊತ್ತಿದೆ. ನಾವು ಸಾಕಿದ ನಾಯಿಗೆ ಬೆಲ್ಟ್ ಹಾಕಿದರೆ ಅದು ಕಿತ್ತುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತದೆ. ಅದನ್ನು ಹಾಕಲು ಬಿಡುವುದಿಲ್ಲ. ಏನಾದರೂ ಮಾಡಿ ಕಿತ್ತುಕೊಳ್ಳುತ್ತದೆ. ಇನ್ನು ರೇಡಿಯೋ ಕಾಲರ್ ಹಾಕಿದರೆ ಹುಲಿ ಮತ್ತು ಚಿರತೆಗಳು ಸಹಿಸುತ್ತವೆಂದರೆ ನನಗೆ, ಅರ್ಥವಾಗುವುದಿಲ್ಲ . ವಿಜ್ಞಾನಿಗಳು ಇದರ ಬಗ್ಗೆ ಉತ್ತರ ಹೇಳಬೇಕು. ನಾನು ನನ್ನ ಅನುಭವದ ಮಾತನ್ನು ಹೇಳಿದೆ. ಇವತ್ತು ಸಾರ್ವಜನಿಕರನ್ನು ವಂಚಿಸಿ ಈ ಪ್ರಯೋಗ ನಡೆಸುತ್ತಿದ್ದೀರಾ? ಇದನ್ನು ಹೇಳಬಹುದಾಗಿತ್ತು, ಜನರಿಗೆ ಇಂತಹ ಪ್ರಯೋಗ ನಡೆಯುತ್ತಿದೆ, ಇಂತಹ ವಿಷಯದ ಬಗ್ಗೆ ನಡೆಯುತ್ತಿದೆ ಎಂದ ಹೇಳಬೇಕಾಗಿತ್ತು ಇದನ್ನು ಸಾರ್ವಜನಿಕರಿಂದ ಮುಚ್ಚಿಟ್ಟು ಏನೋ ನಡೆಯುತ್ತಿದೆ ಎನ್ನುವ ಭೀತಿ ವಾತವರಣವನ್ನು ಅಲ್ಲಿ ಹುಟ್ಟಿಸಿದಿರಿ. ಇವತ್ತು ಅಲ್ಲಿ ಅದಕ್ಕೆ ಅನುಕೂಲಕರವಾದ ಅಧಿಕಾರಿ ಇದ್ದಾರೆ ಅವರ ಪ್ರಾಮಾಣಿಕತೆ ಬಗ್ಗೆ ನಾನು ಪ್ರಶ್ನೆ ಮಾಡಲ್ಲ. ಆದರೆ ನಮ್ಮ ಇಲಾಖೆಯಲ್ಲಿ ಇಂತಹವರನ್ನು ಬಿಟ್ಟರೆ ಬೇರೆಯವರು ಇಲ್ಲ ಎನ್ನುವಂತಹ ಭರವಸೆ ಅವರಿಂದ ಮೂಡುತ್ತದೆ. ಆದರೆ ಈ ಒಂದು ಪ್ರಯೋಗ ಏನಿದೆ ಇದು. ಸ್ಥಳೀಯ ಜನರಲ್ಲಿ ಒಂದು ರೀತಿಯ ವಾತಾವರಣವನ್ನು ಸೃಷ್ಟಿ ಮಾಡಿತು. ಇವರು ಏನ ಸ್ವರ್ಗಲೋಕದಿಂದ ಇಳಿದು ಬಂದಿದ್ದಾರಾ? ಇದನ್ನು ಸ್ಥಳೀಯ ಜನರಿಗೆ ಹೇಳಬೇಕಾಗಿತ್ತು. ಅದನ್ನು ಮುಚ್ಚಿಟ್ಟಿದ್ದರಿಂದ ಸ್ಥಳೀಯರಿಗೂ ಮತ್ತು ಇವರಿಗೂ ಘರ್ಷಣೆ ಆಗಿದೆ. ಚಿಪ್ಪನ ಸಾವು ಒಂದು ನೆಪ. ಈ ಎಲ್ಲ ಕಾರಣದಿಂದಾಗಿ ಬೆಂಕಿ ಹಚ್ಚಿದರು. ಯಾರು ಹಚ್ಚಿದರು? ಸ್ಥಳೀಯರು ಹಚ್ಚಿದರು ಎಂದು ಹೇಳುತ್ತಾರೆ. ಪಾಪ, ಕಾಡುಕುರುಬರು ಅಲ್ಲಿದ್ದಾರೆ. ಅವರನ್ನು ನಾನು ನೋಡಿದೆ. ಅವರು ಕೊನೆಗೆ ಏನೂ ಇಲ್ಲ ಎಂತಾದರೆ ಅವರು ಏನು ಮಾಡುತ್ತಾರೆ ಗೊತ್ತೇ? ಬಿದಿರಿಗೆ ದೊಡ್ಡ ಪ್ರಮಾಣದಲ್ಲಿ 60 ವರ್ಷಕ್ಕೆ ಒಂದು ಸಾರಿ ಕಟ್ಟೆ ರೋಗ ಎಂದು ಬರುತ್ತದೆ. ಅದನ್ನು ಅಕ್ಕಿರೋಗ ಎಂದೂ ಹೇಳುತ್ತೇವೆ. ಆ ಅಕ್ಕಿಯನ್ನು ಗುಡಿಸಿ ಅನ್ನ ಮಾಡಿ ತಿನ್ನತಕ್ಕ ಜನರು ಇವರು. ಕೆಳಗೆ ಬಿದ್ದಿರತಕ್ಕ ಬಿದಿರಕ್ಕಿಯಿಂದ ಅನ್ನ ಮಾಡತಕ್ಕ ಜನ, ಆ ಕಾಡಿಗೆ ಬೆಂಕಿ ಹಚ್ಚುತ್ತಾರೆ ಎಂದರೆ ಇದು ಅನುಭವದ ಮಾತು ಎಂದು ಹೇಳಬೇಕಾಗುತ್ತದೆ. ಅಥವಾ ಇನ್ನೇನೋ ಕಾರಣ ಇರಬಹುದು. ಮುಗ್ಧರು ತಮ್ಮನ್ನು ತಾವು ರಕ್ಷಣೆ ಮಾಡಿಕೊಳ್ಳುವುದಕ್ಕೆ ,ಅಧ್ಯವಿಲ್ಲವೆಂದು ಅವರ ಮೇಲೆ ಹೇಳುವುದು ಸರಿಯಲ್ಲ. ಅವರಿಗೆ ಒಂದು ಮನೆ ಕಟ್ಟುವುದಕ್ಕೆ ಆಗಿಲ್ಲ. ಅವರ ಸ್ಥಿತಿ ಬಗ್ಗೆ ಹೇಳುವುದು ಬಹಳ ಇದೆ. ಆದರೆ ಈ ವಿಷಯಕ್ಕೆ ಅದು ಸಂಬಂಧವಿಲ್ಲ. ಆದರೆ ಇಂತಹ ಮುಗ್ಧ ಜನರ ಬಗ್ಗೆ ನಾವು ಸುಸಂಸ್ಕೃತರು ಎಂದು ಹೇಳುವ ಜನ ನಾಗರೀಕರು ಎಂದು ಹೇಳುವ ಜನ ಏನಿದ್ದೇವೆ ನಮ್ಮ ಅನಾಗರೀಕತೆ ಸೋಂಕು ಅವರಿಗೆ ತಗ್ಗಲಿಲ್ಲ . ಅದು ತಾಗದೇ ಇರುವುದರಿಂದ ಇಂತಹ ಆಪಾದನೆ ಯಾರೇ ಮಾಡಿದರೂ ಅದು ಅಕ್ಷಮ್ಯ ಅಪರಾಧವೆಂದು ನಾನು ತಿಳಿಸುವುದಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಇಲ್ಲಿ ಒಂದು ವಿಚಿತ್ರ ವ್ಯವಸ್ಥೆ ಇದೆ. ಎಷ್ಟು ಇಲಾಖೆಗಳು? ಅರಣ್ಯ ರೆಗ್ಯುಲರ್ ಇಲಾಖೆ. ಅದಕ್ಕೆ ಡಿಎಫ಼ಓ ಇದ್ದಾರೆ. ಅವರ ಕೇಂದ್ರಸ್ಥಾನ ಹುಣಸೂರು. ಮತ್ತೊಬ್ಬರು ಇಲಾಖೆಯ ಆಫೀಸರ್. ಅವರ ಕೇಂದ್ರಸ್ಥಳ ಮಡಕೇರಿ. ಸ್ಥಳೀಯವಾಗಿ ಅರಣ್ಯ ಜವಾಬ್ದಾರಿ ನೋಡಿಕೊಳ್ಳತಕ್ಕದ್ದು, ಇದು ಅಭಯಾರಣ್ಯ ಆಗಿರುವುದರಿಂದ ವಿಶೇಷ ಅಧಿಕಾರ. ಇದು ಅಭಯಾರಣ್ಯ ಎನ್ನುವ ಕಾರಣಕ್ಕೆ ಜಿಲ್ಲಾಧಿಕಾರಿಗಳಿಗೆ ಜವಾಬ್ದಾರಿ. ಹೀಗೆಲ್ಲ ಒಂದು ವಿಚಿತ್ರವಾದ ವ್ಯವಸ್ಥೆ. ಈ ವ್ಯವಸ್ಥೆಯ ಪರಿಣಾಮವೇನು? ಜನ ಅರಣ್ಯಕ್ಕೆ ನುಗ್ಗಿದರೆ ಒಬ್ಬ ಪೋಲೀಸ್ ಅಧಿಕಾರಿ ಇದರ ಬಗ್ಗೆ

ಜವಾಬ್ದಾರಿಯನ್ನು ತೆಗೆದು ಕೊಳ್ಳುವುದಿಲ್ಲ . ಡಿಐಜಿ ಶ್ರೀನಿವಾಸನ್‌ರವರು 14ನೇ ತಾರೀಖು ಎರಡು ವ್ಯಾನು ಕಳುಹಿಸುತ್ತಾರೆ. ಆ ವ್ಯಾನಿನಲ್ಲಿ ಹೋಗಿದ್ದವರು ಸಿನಿಮಾ ನಾಟಕ ನೋಡುವುದಕ್ಕೆ ಹೋಗಿದ್ರಾ? ಅವರು ಎನು ಮಾಡುತ್ತ ಇದ್ದರು. ಇಷ್ಟೊಂದು ಜನ ದೊಡ್ಡ ಪ್ರಮಾಣದಲ್ಲಿ ಕಾಡನ್ನು ಪ್ರವೇಶ ಮಾಡಿದರೆ ಒಂದು ರೆಸಿಸ್ಟೆನ್ಸ್ ಭೇಡವೆ ? ಆ ಕಾವೇರಿ ಗೆಸ್ಟ್‌ಹೌಸ್‌ನಲ್ಲಿ 8–9 ಜನ ಫಾರೆಸ್ಟ್ ಅಧಿಕಾರಿಗಳಿಗೆ ಜನರು ಬೇಕಾಬಿಟ್ಟಿ ಹೊಡೆದಿದ್ದಾರೆ. ಬಹುಶಃ ಅಲ್ಲಿ ವಿಷ್ಣು ಎನ್ನತಕ್ಕ ಒಬ್ಬ ಮಾಜಿ ಮಂಡಲ ಪ್ರಧಾನರು ಇಲ್ಲದಿದ್ದರೆ ಪರಿಣಾಮ ಎನಾಗುತ್ತಿತ್ತು ಆ ದುರಂತ ನನಗೆ ಗೊತ್ತಿಲ್ಲ. ನನಗೆ ತಿಳಿದಹಾಗೆ.

ಶ್ರೀ ಎ.ಎಂ. ಬೆಳ್ಳಿಯಪ್ಪ : ನಾನು ಅಲ್ಲಿಗೆ ಹೋಗಿದ್ದೇನೆ. ನಾನು ಸಂಬಂಧಪಟ್ಟ ಮಂತ್ರಿಗಳು ನಮ್ಮ ಸ್ಪೋರ್ಟ್ಸ್ ಮಿನಿಸ್ಟರ್ ಎಲ್ಲಾ ಹೋಗಿದ್ದೇವೆ. ನಾವು ವಿಚಾರ ತಿಳಿದುಕೊಂಡು ಬಂದಿದ್ದೇವೆ. ಬಹುಶಃ ಮಾನ್ಯ ವಿರೋಧಪಕ್ಷದ ನಾಯಕರು ಹೇಳುತ್ತಿರುವುದು ಅಲ್ಲಿನ ಜಿಲ್ಲಾಧಿಕಾರಿಗಳು ಇದ್ದರು, ಎಸ್‌ಪಿಯವರು ಇದ್ದರು ಇಷ್ಟೆಲ್ಲ ಜನರು ಇದ್ದರೂ ಈ ತರಹ ಮಾಡುವಾಗ ಫಾರೆಸ್ಟ್ ಅಧಿಕಾರಿಗಳನ್ನು ಹೊಡೆಯುವ ಸಂದರ್ಭದಲ್ಲಿ ಆ ಸಮಯದಲ್ಲಿ ಪೋಲಿಸರು ಏನೂ ಮಾಡಲಿಲ್ಲವೆಂದು ಹೇಳುತ್ತಿದ್ದಾರೆ. ಬಹುಶಃ ನಾವು ತಿಳಿದ ಪ್ರಕಾರ ಸುಮಾರು 400–450 ಜನರು ಇದ್ದರು there were 400-450 people. They were all very much ready for attack ಅಂತಹ ಸಂದರ್ಭದಲ್ಲಿ ಒಂದು ವೇಳೆ ಪೋಲೀಸರ್‌ನವರು ಲಾಟಿ ಚಾರ್ಜ್ ಮಾಡಿದ್ದರೆ ಸ್ಥಿತಿ ಬಹಳ ಹಾಳಾಗಿ ಹೋಗಿಬಿಡುತ್ತಿತ್ತೆಂದರೆ ಬಹುಶಃ ನಾಗರಹೊಳೆಯ ಅಭಯಾರಣ್ಯ ಸುಟ್ಟಿದ್ದು ಮಾತ್ರವಲ್ಲ ಕೊಡಗೇ ಸುಟ್ಟು ಹೋಗುತ್ತಿತ್ತು. It would have gone from bad to worse. ಅಂತಹ ಸಂದರ್ಭದಲ್ಲಿ My feeling and sincere thinking is that they had excercised some sort of restraint and wisdom at that particular time to prevent this greater danger. Of course, we are sorry that what had happened, it we are sorry about that. ಅದು ಅಷ್ಟರಮಟ್ಟಿಗೆ ಆಗಿತ್ತು ಆ ದಂಧೆ Those miscreants should not have done it but the so-called officers Deputy Commissioner, Superintendent of Police and others who are there, suppose they had ordered something and they had not exercised that restraint, my feeling is, things would have been different.

ಶ್ರೀ ಬಿ.ಎಸ್. ಯಡಿಯೂರಪ್ಪ : ಆ ರೀತಿ ಮಾಡಿ ನಾಲ್ಕು ಜನ ಸತ್ತಿದ್ದರೆ ಪರವಾಗಿರಲಿಲ್ಲ ಕಾಡು ಉಳಿಯುತ್ತಾ ಇತ್ತು. ಇದು ಯಾರೋ ಬಬ್ಬ ಸಾವಿನ ಪ್ರಶ್ನೆಯಲ್ಲ. ಬಹಳ ಪ್ರಮುಖವಾದ ಸಂಗತಿ ಅಂದರೆ ದೊಡ್ಡ ಪ್ರಮಾಣದಲ್ಲಿ ಕಾಡು ನಾಶವಾಗಿದೆ. ಅದನ್ನು ಉಳಿಸುವುದಕೋಸ್ಕರ ಆ ಸಮಯದಲ್ಲಿ ಪೋಲೀಸ್ ಅಧಿಕಾರಿಗಳು ಸರಿಯಾದ ಕ್ರಮವನ್ನು ತೆಗೆದುಕೊಂಡಿದ್ದರೆ ಕಾಡು ಕಳ್ಳರು ಬಂದಾಗ ಧೈರ್ಯಮಾಡಿ ಅವರನ್ನು ಹಿಮ್ಮೆಟ್ಟಿಸಿದರೆ ಈ ಅನಾಹುತವಾಗುತ್ತಿರಲಿಲ್ಲ. ಅದು ಪ್ರಮುಖವಾದ ಸಂಗತಿ. ಹತ್ತಾರು ಜನ ಪೋಲೀಸ್‌ನವರು ಏತಕ್ಕೆ ಹೋದರು? ಪೋಲೀಸ್‌ನವರ ರಕ್ಷಣೆ ಇರಲಿಲ್ಲವೇ ನಿಮಗೆ?

SHRI BASAVARAJ RAYA REDDY: Deputy commissioner is a District Magistrate.

(Interruptions)

ಡಾ : ವೈ. ನಾಗಪ್ಪ : ಒಬ್ಬ ಸತ್ತಿರುವುದರಿಂದ ಈ ರೀತಿ ಡಿಸ್‌ಕಷನ್ ಆಗುತ್ತಿದೆ. ಹತ್ತಾರು ಜನ ಸತ್ತಿದ್ದರೆ ನಿಮ್ಮ ಡಿಸ್‌ಕಷನ್ ಬೇರೆ ರೀತಿಯೇ ಇರುತ್ತಿತ್ತು. ಒಬ್ಬ ಸತ್ತಿರುವುದರಿಂದ ಈ ರೀತಿ ಡಿಸ್‌ಕಷನ್ ಆಗುತ್ತಿದೆ. ಹತ್ತಾರು ಜನ ಸತ್ತಿದ್ದರೆ ಅದು ಬೇರೆ ರೀತಿ ಇರುತ್ತಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳಿದ್ದನ್ನು ಬೇರೆ ರೀತಿಯಲ್ಲಿ ಅರ್ಥ ಮಾಡಿಕೊಳ್ಳಬೇಡಿ. ನಾನು ಹೇಳಿದ ಉದ್ದೇಶವನ್ನು ತಾವು ಅರ್ಥಮಾಡಿಕೊಳ್ಳಲಿಕ್ಕೆ ಪ್ರಯತ್ನ ಪಡಲಿಲ್ಲ.

ಡಾ: ವೈ ನಾಗಪ್ಪ : ನಾನು ಅರ್ಥಮಾಡಿಕೊಂಡೇ ಹೇಳಿದ್ದು.

ಶ್ರೀ ಎಂ. ನಾರಾಯಣಸ್ವಾಮಿ : ಈ ಸರ್ಕಾರ ಉಳಿಸಿಕೊಳ್ಳುವುದಕ್ಕೋಸ್ಕರ ಮಾನ್ಯ ಸಚಿವರು ನಾಗರಹೊಳೆ ಸುಟ್ಟಿದ್ದು ಅಲ್ಲ ಇಡೀ ಕೊಡಗೇ ಸುಟ್ಟುಹೋಗುತ್ತಿತ್ತು ಎಂದು ಹೇಳಿದರು. ನಿಮ್ಮ ಸರ್ಕಾರ ಇದ್ದರೆ ಇಡೀ ರಾಜ್ಯವೇ ಸುಟ್ಟುಹೋಗುತ್ತದೆ.

ಡಾ: ವೈ ನಾಗಪ್ಪ : ಈಗ ತಾವು ಚಿಪ್ಪ has been murdered, ಅಂತ ಹೇಳುತ್ತೀರಿ. Was it proved by post-mortem examination and inquest report? Whether it is a suicide or homicide?

ಶ್ರೀ ಡಿ.ಬಿ. ಚಂದ್ರೇಗೌಡ :–ಡಾಕ್ಟ್ರ, ಅದು ಸೂಯಿಸೈಡೋ, ಮರ್ಡರ್ರೋ . . . That is not my job.

(ಗೊಂದಲ)

ಡಾ: ವೈ. ನಾಗಪ್ಪ :– ನೀವು ಮಾತನಾಡಿದಿರಿ. ಅದಕ್ಕೇ ನಾನು ಪ್ರಶ್ನೆ ಕೇಳಿದ್ದು. Chippa has been murdered. ಅಂತ ನೀವು ಹೇಳಿದಿರಿ.

ಶ್ರೀ ಬಸವರಾಜ ರಾಯರೆಡ್ಡಿ :– ಅದು ಪೋಸ್ಟ್ ಮಾರ್ಟಮ್ ರಿಪೋರ್ಟ್‌ನಲ್ಲಿ ಹೇಳಿರುತ್ತದೆ.

DR. NAGAPPA: Have you brought postmortem record or inquest report?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ :– ಒಂದು ಮಾತು. ಇಲ್ಲದಿದ್ದರೆ ಮರೆತುಹೋಗಿಬಿಡುತ್ತದೆ. ಶ್ರೀ ಬೆಳ್ಳಿಯಪ್ಪನವರು ಏನು ಹೇಳಿದರು ಎಂದರೆ, ಒಂದೇ ವಾಕ್ಯದಲ್ಲಿ ಹೇಳಬೇಕು ಎಂದರೆ – Police have used discretion rather than valour ಎಂದು. ನಾನು ನಿಮ್ಮನ್ನು ಕೇಳುತ್ತೇನೆ. . . ..

Sri A.K. Anantha krishna : They have used discretion rather than valour, ಅಂದರೆ ಹೇಗೆ? ಒಂದು ಕಡೆ ಹೇಳುತ್ತೀರಿ ಅವರು ಸತ್ತಿದ್ದರೂ ಚಿಂತೆ ಇಲ್ಲ, ಕಾಡು ಉಳಿಯುತ್ತದೆ ಅಂತ. ಇನ್ನೊಂದು ಕಡೆ ಹೇಳುತ್ತೀರಿ They have used discretion rather than valour, ಅಂತ.

ಶ್ರೀ ಡಿ.ಬಿ. ಚಂದ್ರೇಗೌಡ :– ಅದಕ್ಕೆ ನಾನು ಏನು ಹೇಳುತ್ತಿದ್ದೇನೆ ಏನೆಂದರೆ ಇಲ್ಲಿ ಪೋಲೀಸರ ಸಂಖ್ಯೆ ಮುಖ್ಯ ಅಲ್ಲ. ಪೋಲೀಸರ ಕರ್ತವ್ಯಕ್ಕಿಂತಲೂ ಹೆಚ್ಚಾಗಿ ನಮಗೆ ನೈತಿಕವಾದಂಥ ಮೌಲ್ಯಗಳು ಬೇಕು. ಒಬ್ಬ ಪೋಲೀಸ್ ಅಧಿಕಾರಿ ಸಹಸ್ರಾರು ಜನರನ್ನು ಎದುರಿಸಿರತಕ್ಕಂಥ ನಿದರ್ಶನಗಳು ಇವೆ. ಅಂದರೆ ನಮ್ಮ ಪೋಲೀಸರು ಜನ ಬಂದಿದ್ದಾರೆ ಗುಂಡು ಹೊಡೆದುಬಿಟ್ಟರೆ ಅವರೇನು ನಿರ್ವೀರ್ಯರೇನು? ನಿಸ್ಸಹಾಯಕರೇನು? ಹಾಗಾದರೆ ಅವರೇಕೆ ಹೋಗಬೇಕು? ಅವರವರೇ ಸೆಟಲ್ ಮಾಡಕೊಳ್ಳುತ್ತಿದ್ದರು. ಫಾರೆಸ್ಟ್‌ನವರು ಮತ್ತು ಜನರೆ ಸೆಟ್ಲ್ ಮಾಡಿಕೊಳ್ಳುತ್ತಿದ್ದರು. Where was the need for the police to go there? What were they doing? This is one aspect of the case. Having been there, why did they allow the entire mob to get into the Forest? ಹೊರಗೆ ಗೇಟ್ ಇದೆ. ಒಂದು ಗೇಟ್ ಹಾಕಿದ್ದರೆ, ಹತ್ತಾರು ಜನ ಒಳಗಡೆ ಫಾರೆಸ್ಟ್ ಹತ್ತಿರ ನಿಂತುಬಿಟ್ಟರೆ ಅಲ್ಲಿ ಯಾರೂಹೋಗುವುದಕ್ಕೆ ಸಾಧ್ಯವಿಲ್ಲ. ಅವರು ಒಳಗಡೆ ಹಿಡಿದುಕೊಂಡು ಬಾರಿಸುತ್ತಾ ಇದ್ದರೆ ಇವರು ನಿಂತುಕೊಂಡು ನೋಡುತ್ತಿದ್ದರಂತೆ. Why should we have such police? The State does not deserve to have such police. I would say that they should have taken.

(ಗೊಂದಲ)

ಹೀಗೆ ಹೇಳಿದರೆ ನಾನೇನು ಹೇಳಲಿ? ಗಲಾಟೆಯಾದರೆ ಪೋಲೀಸರು . . . .

ಶ್ರೀ ಬಿ.ಎಚ್. ಬನ್ನಿಕೋಡ್ :– ಸಚಿವರು ಹೇಳಿದ್ದು ಕರೆಕ್ಟ್ ಇದೆ. ಏಕೆಂದರೆ ಯಾವುದೇ ದುರ್ಘಟನೆ ನಡೆಯದಂತೆ ಅದನ್ನು ನೋಡತಕ್ಕದ್ದು ನಮ್ಮ ಪೋಲೀಸರ ಕರ್ತವ್ಯ ಅಲ್ಲ. ಅದು ಮುಗಿದಮೇಲೆ ಅಥವಾ ನೋಡಿ ಸುಮ್ಮನಿದ್ದು ಆಮೇಲೆ ಪೋಸ್ಟ್‌ಮಾರ್ಟಮ್ ಕೆಲಸ ಮಾಡುವುದು ಮಾತ್ರ ಈ ರಾಜ್ಯದ ಪೋಲೀಸರ ಕೆಲಸ ಎಂದು ಅವರು ಒಪ್ಪಿಕೊಳ್ಳುತ್ತಿದ್ದಾರೆ, ಅಷ್ಟೇ.

Sri. D.B. Chandre Gowda : Therefore, I would say that this is the total dereliction of the official duty cast upon the them.

ಶ್ರೀ ಎಂ. ಮಹದೇವ : ಅನಿರೀಕ್ಷಿತವಾಗಿ ಒಂದು ಘಟನೆಯಾದಾಗ ಒಬ್ಬ, ಇಬ್ಬ ಅಥವಾ ನಾಲ್ಕು ಜನ ಪೋಲೀಸರು ಇದ್ದಾಗ, ಸಾವಿರಾರು ಜನರು ಬಂದು ದಾಳಿ ಮಾಡುವಂಥ ಕಾಲಕ್ಕೆ ಏನು ಮಾಡುವುದಕ್ಕೆ ಆಗುತ್ತದೆ?

ಶ್ರೀ ಬಸವರಾಜ ರಾಯರೆಡ್ಡಿ : ಘಟನೆ ನಡೆದಾಗ ಡಿ.ಸಿ. ಮತ್ತು ಎಸ್.ಪಿ.ಯವರು ಇದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮೈಸೂರಿನಲ್ಲಿ ನಿಮ್ಮ ತಾಲ್ಲೂಕಿನಲ್ಲಿ ಏನು ನಡೆಯಿತೋ, ಹಾಗೆ ಈ ದೇಶದ ತುಂಬಾ ನಡೆಯುತ್ತಿದೆ. ಕಾವೇರಿ ಪ್ರಕರಣದಲ್ಲಿ ಏನು ನಡೆಯಿತೋ, ಅದೇ ರೀತಿ ನಡೆಯುತ್ತಿದೆ.

ಶ್ರೀ ಎಂ. ಮಹದೇವ್ : ಸಾವಿರಾರು ಜನರು ಒಮ್ಮೆಲೇ ಬಂದಾಗ ಮೂರು ನಾಲ್ಕು ಜನ ಪೋಲೀಸರು ಏನು ಮಾಡಬೇಕು ಎಲ್ಲ ರೆಡಿ ಮಾಡಿಕೊಂಡು ಇಟ್ಟಿರುತ್ತಾರಾ? ಅದಕ್ಕೆ ಕಾಲಾವಕಾಶ ಬೇಕಾಗುತ್ತದೆ ಆಮೇಲೆ ಕಂಟ್ರೋಲ್ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಾರೆ ನಾನು ಅನುಭವದ ಮೇಲೆ ಇದನ್ನು ಹೇಳುತ್ತಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ : ಹಾಗಿದ್ದರೆ ಒಂದು ಕೆಲಸ ಮಾಡೋಣ. ಯಾವ ಘಟನೆ ನಡೆದರೂ ಪೋಲೀಸರು ಮೌನ ಪ್ರೇಕ್ಷಕರಾಗಿ ನಿಂತಿರಬೇಕು. ಆಮೇಲೆ ಮಾನ್ಯ ಸದಸ್ಯರು ಹೇಳಿದ ಹಾಗೆ ಶವ ಸಂಸ್ಕಾರ ಮಾಡಬೇಕು. ಹಾಗೆ ಒಂದು ಶಾಸನ ಮಾಡೋಣ.

ಶ್ರೀ ಈ. ಟಿ. ಶಂಭುನಾಥ್ : ದಯವಿಟ್ಟು ಎಲ್ಲ ವಿಷಯದ ಬಗ್ಗೆ ಸಿ.ಒ.ಡಿ.ಗೆ ಒಪ್ಪಿಸಿದ್ದೇವೆ. ಅವರು ಪೋಲೀಸರು ತಪ್ಪಿತಸ್ತರೋ, ಅಥವಾ ಅರಣ್ಯಾಧಿಕಾರಿಗಳು ತಪ್ಪಿತಸ್ತರೋ ಅಥವಾ ಅಲ್ಲಿರತಕ್ಕಂಥ ಸ್ಮಗ್ಲರ್ಸ್ ತಪ್ಪಿತಸ್ತರೋ ಎಂದು ಅದರ ಬಗ್ಗೆ ವಿವರವಾಗಿ ಹೇಳುತ್ತಾರೆ. ಈಗ ಇದರ ಬಗ್ಗೆ ಚರ್ಚೆ ಬೇಡ. ನೀವು ಸುಮ್ಮನೆ ಸಹಜವಾಗಿ ಚರ್ಚೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ :– ನಿಸರ್ಗವೇ ಉಳಿದಿಲ್ಲ.

ಶ್ರೀ ಈ. ಟಿ. ಶಂಭುನಾಥ್ :– ಯಾರು ತಪ್ಪಿತಸ್ತರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾದದ್ದು ನಮ್ಮ ಕರ್ತವ್ಯ. ಆದ್ದರಿಂದ ಇಲ್ಲಿ ಒಬ್ಬರನ್ನೊಬ್ಬರು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅವಕಾಶ ಇಲ್ಲ.

ಶ್ರೀ ಎಂ. ಮಹದೇವ್ :– ಸರ್ಕಾರದ ಕಡೆಯಿಂದ ಏನು ಮಾಡಬೇಕೋ ಮಾಡುತ್ತಾರೆ. ಇವರು ಎಲ್ಲರದೂ ತಪ್ಪು ಇದೆ ಅಂತ ಹೇಳಿದರು ಎಲ್ಲರದೂ ತಪ್ಪು ಇಲ್ಲ ಸರ್ಕಾರದ್ದು ತಪ್ಪು ಇಲ್ಲ ಅಂತ ನಾನು ಹೇಳುತ್ತಿದ್ದೇನೆ.

ಶ್ರೀ ಈ.ಟಿ. ಶಂಭುನಾಥ್ :– ಅವರು ಮುಗಿಸಲಿ ಬಿಡಿ.

ಶ್ರೀ ಡಿ.ಬಿ.ಚಂದ್ರೇಗೌಡ :– ಮಾನ್ಯ ಅಧ್ಯಕ್ಷರೇ ನಾನು ಇಲ್ಲಿ ಸ್ವಲ್ಪ ಜವಾಬ್ದಾರಿಯಿಂದಲೇ ಪ್ರಸ್ತಾಪ ಮಾಡುತ್ತಿದ್ದೇನೆ. ಈಗ ಇದು ಎಷ್ಟು ದೂರಕ್ಕೆ ಬಂದಿದೆ ಎಂದರೆ, ಹಾಗಿದ್ದರೆ ಒಂದು ಕೆಲಸ ಮಾಡಬಹುದು ಸ್ವಲ್ಪ ಆಲೋಚನೆ ಮಾಡಿ. ಫಾರೆಸ್ಟ್ ಅಧಿಕಾರಿಗಳಿಗೆ ಪೋಲೀಸ್ ಇಲಾಖೆಯಿಂದ ರಕ್ಷಣೆ ಸಿಕ್ಕುವುದಿಲ್ಲವೆಂದು ಅಂತ ಹೇಳಿದರೆ ನೀವು ಈಗ ಹೊಸದಾಗಿ ನಿಮ್ಮ ಇಲಾಖೆಯಲ್ಲಿ ನಿಮ್ಮ ರಕ್ಷಣೆ ಸಿಗುವಂತಹ ವ್ಯವಸ್ಥೆ ಮಾಡಿಕೊಳ್ಳಿ. ಇದಾದರೂ ಒಂದು ತೀರ್ಮಾನ ಆಗಬೇಕಲ್ಲ. ಇದು ಇಂದು ನಿನ್ನೆಯದು ಅಲ್ಲ. ಅಲ್ಲಿ ನಡೆದಿರತಕ್ಕಂಥ ನಾಗರಹೊಳೆಯಲ್ಲಿ ನಡೆದಂತಹ ಪ್ರಕರಣ, ಇವತ್ತು, ನಮ್ಮ ವೀರಪ್ಪನ್ ಹಗರಣ ಇದನ್ನೆಲ್ಲಾ ಕೂಡ ನಾವು ನೋಡಿದ್ದೇವೆ. ಅಂತಹ ಒಬ್ಬ ಪ್ರಾಮಾಣಿಕ ಅಧಿಕಾರಿಯ ರುಂಡ ತೆಗೆದುಕೊಂಡು ಹೋಗಿಬಿಟ್ಟ ಅವನು. ಇವರು ಮುಂಡ ಹಿಡಿದುಕೊಂಡು ಬಂದರು ಪ್ರದರ್ಶನಕ್ಕಾಗಿ. ಏನು ನಿಮ್ಮ ಜವಾಬ್ದಾರಿ? ರುಂಡ ಅವನ ತಿಜೋರಿಯಲ್ಲಿದೆ. ಹೀಗೆ ಪ್ರತಿ ಸಾರಿಯೂ ಡಿಫೆಂಡ್ ಮಾಡುತ್ತಾ ಹೋಗಬೇಡಿ ಜವಾಬ್ದಾರಿ

ನಿರ್ವಹಣೆಯಲ್ಲಿ ಯಾರದು ತಪ್ಪಾಗಿದೆ ಅವರ ಮೇಲೆ ಜವಾಬ್ದಾರಿಯನ್ನು ನಿಗದಿ ಮಾಡಿ. ಆದ್ದರಿಂದ ನಾನು ಏನು ಹೇಳುತ್ತಿದ್ದೇನೆಂದರೆ ಒಂದು ಚಿಪ್ಪಿನ ಸಾವು ಮತ್ತೊಂದು ಅದರ ಮೇಲೆ ನಡೆದಿರತಕ್ಕಂಥ ಘಟನೆ ಎರಡೂ ಬೇರೆ ಬೇರೆ. ಸಿ ಓ ಡಿ ತನಿಖೆ ನೀವು ಮಾಡಿಸುತ್ತಿದ್ದೀರಿ. ಆದರೆ ಚಿಪ್ಪಿನ ಸಾವಿನ ಬಗ್ಗೆ ಸಂಬಂಧಪಟ್ಟಂತೆ ಅರಣ್ಯ ಸುಟ್ಟು ನಾಶವಾಯಿತಲ್ಲ ಇದನ್ನು ಯಾರು ವಿಚಾರಣೆ ಮಾಡುವವರು? ಯಾವ ರೀತಿಯಾಗಿ ಆಯಿತು? ಅದಕ್ಕೆ ನಾನು ಪ್ರತ್ಯೇಕವಾಗಿ ನ್ಯಾಯಾಂಗ ತನಿಖೆ ಮಾಡಿ ಅಂತ ನಾನು ಕೇಳಿದೆ. ಅನೇಕರು ಅನೇಕ ರೀತಿಯಾಗಿ ಕೇಳಿದ್ದಾರೆ. ಸಿ ಓ ಡಿ ತನಿಖೆ ಕೇಳಿದ್ದಾರೆ. ಸಿ ಬಿ ಐ ತನಿಖೆ ಕೇಳಿದ್ದಾರೆ. ಎಲ್ಲಾ ವರದಿಗಳನ್ನು ಕೇಳಿದ್ದಾರೆ. ಇದನ್ನು ಎತಕ್ಕೆ ರೀಲಿಂಗ್ ಮಾಡಿ ಅಂತ ಹೇಳುತ್ತಿದ್ದೇನೆಂದರೆ ಈ ಅರಣ್ಯ ನಾಶಕ್ಕೆ ಕಾರಣರಾದ ದುಷ್ಟಶಕ್ತಿಗಳು ಏನಿದ್ದಾರೆ ಅವರು ಅಲ್ಲಿ ನಡೆಯತಕ್ಕಂಥ ಪ್ರತಿಯೊಂದು ಪ್ರಕರಣಕ್ಕೂ ಕಾರಣರು. ಯಾವುದೇ ಸಂಘಟನೆ, ಹೆಸರುಗಳನ್ನು ಹೇಳಿಕೊಂಡು ಸಂಘಟನೆ ನಿರ್ಮಾಣ ಮಾಡುವುದು ಅಪರಾಧ ಆದರೆ ಆ ಸಂಘಟನೆಗಳಲ್ಲಿ ಅಪಕೀರ್ತಿ ಬರುತ್ತದೆ. ಇಡೀ ಕೊಡಗು ಜಿಲ್ಲೆಗೂ ಅಪಕೀರ್ತಿ ಬರುತ್ತದೆ. ಮಲೆನಾಡು ಪ್ರದೇಶಕ್ಕೆ ಅಪಕೀರ್ತಿ ಬರುತ್ತದೆ. ಆ ದೃಷ್ಟಿಯಿಂದ ಯಾರು ಕಳ್ಳಸಾಗಾಣಿಕೆದಾರರು ಅಂತ ಇದ್ದಾರೆ ಸ್ಮಗ್ಲರ್ಸ್ ಇದ್ದಾರೆ, ಗಂಧ ಹೊಡೆಯುವ ದೊಡ್ಡ ದೊಡ್ಡ ತಲೆಗಳು ಸಿಕ್ಕಿದ್ದು ಅಲ್ಲೇ. ಭಾರಿ ದೊಡ್ಡವು ಅಲ್ಲಿದ್ದಾವೆ, ಎತಕ್ಕೆ ನಾನು ನಿಮಗೆ ಹೇಳಿದೆ ಶ್ರೀ ಬೆಳ್ಳಿಯಪ್ಪನವರೇ ಆ ಗನ್ ಯಾರದು? ಅಲ್ಲಿ ಹೇಗೆ ಸಿಗುತ್ತದೆ? ಶ್ರೀ ಚಿನ್ನಪ್ಪನ ಹತ್ತಿರ ಇದ್ದಂತಹ ಗನ್ ಯಾರದು? ಯಾರದು ಬಂದೂಕ. ಬಂದೂಕ ಕೊಟ್ಟು ಕಳುಹಿಸಿದವರು ಯಾರು? ಆ ಬಂದೂಕ ಎಲ್ಲಿ ಹೋಯಿತು? ಈಗ ಇದು ತನಿಖೆ ಆಗಬೇಕಾದರೆ, ಆದರೆ ನೀವು ಅದಕ್ಕೆ ಕಾರಣ ಹೇಳತಕ್ಕಂಥಾದ್ದು ಅಲ್ಲಿರತಕ್ಕಂಥ ಕಾಡುಕುರುಬರ ಮೇಲೆ ಇನ್ನು ಯಾವುದೋ ಒಂದು ಸಂಘಸಂಸ್ಥೆಗಳ ಮೇಲೆ ಹೊತ್ತು ಹಾಕಿಬಿಟ್ಟುಬಿಡಬೇಡಿ. ವಿಚಾರಣೆ ಮಾಡಿಸಿ ನಾನು ಅದಕ್ಕೆ ಹೇಳಿದೆ ನಿಮಗೆ, ಶಂಭುನಾಥರವರೇ ನಾನು ನಿಮ್ಮನ್ನು ಕೇಳುತ್ತೇನೆ, ಮಾನ್ಯ ಫಾರೆಸ್ಟ್ ಮಂತ್ರಿಗಳಿಗೆ, ನಿಮಗೆ ದೊಡ್ಡ ರಕ್ಷಣೆ ಕೊಟ್ಟಿದ್ದೇವೆ. ಶಾಸನದ ಮೂಲಕ ಕೊಟ್ಟಿದ್ದೇವೆ. ಆರ್ಡರ್ ನಂ : ಎಹೆಚ್ ಎಫ್‌ಎಫ್ 30 ಎಫ್ ಎಸ್ ಡಬ್ಲಿಯೂ 88 ಬೆಂಗಳೂರು ದಿನಾಂಕ 28ನೇ ಸೆಪ್ಟೆಂಬರ್ 1990–91 ರಲ್ಲಿ ಇಮ್ಯುನಿಟಿ ಕೊಟ್ಟಿದ್ದೇವೆ. ಸಾಯಂಕಾಲ 6 ಗಂಟೆಯಿಂದ ಬೆಳಿಗ್ಗೆ 6 ಗಂಟೆವರೆಗೂ ಯಾವನ ತಲೆ ಬೇಕಾದರೂ ತೆಗೆಯಿರಿ ಅಂತ. ನಿಮಗೆ ರಕ್ಷಣೆ ಇದೆ. ಅದು ಶಾಸನದಲ್ಲಿ. ಆರ್ಡರ್ ಮಾಡಿದ್ದೇವೆ. ನೀವು ನಮ್ಮದು ಅಲ್ಲ ಅಂತ ಆದರೆ ಫಾರೆಸ್ಟ್ ಇಲಾಖೆಯ ಅಧಿಕಾರಿಗಳ ಮೇಲೆ ಅಷ್ಟೇ ಎತಕ್ಕೆ ಅವತ್ತು ಸಾರ್ವಜನಿಕರು ಬಿದ್ದರು ? ಕೃಷ್ಣೇಗೌಡ ಹೇಳಿಕೆ ಏನು ಕೊಟ್ಟಿದ್ದಾರೆ. ಒಬ್ಬ ನಿಮ್ಮ ಅಧಿಕಾರಿ ಜಿಲ್ಲಾಧಿಕಾರಿಗಳ ಮುಂದೆ ಅಲ್ಲಿ ನಮ್ಮನ್ನು ಪೋಲೀಸಿನವರ ಮುಂದೆ ಚಚ್ಚಿಹಾಕುತ್ತಿದ್ದರು ಅಂತ. ಪಾಪ ಅವರು ಡಿಫೆನ್ಸ್‌ಗೆ ಬರುತ್ತಾರೆ ಇವರು ಚಚ್ಚುವುದು ಇವರು ನಿಂತುಕೊಂಡು ನೋಡುವುದಾ? ಇಂತಹ ವ್ಯವಸ್ಥೆ ಇದ್ದರೆ ನಿಮ್ಮ ಊರಿಗೆ ಕಾಡಾನೆ ನುಗ್ಗಿದಂತೆ ಆಯಿತು. ಯಾರು ರಕ್ಷಣೆ ಮಾಡಬೇಕು? ಅದಕ್ಕೆ ನಿಮ್ಮ ಬಂದೂಕು, ದೊಣ್ಣೆ ಕೋವಿ, ಕತ್ತಿ ಎಲ್ಲಾ ಮುರಿದರು. ಪ್ರಾಕ್ಟಿಕಲ್ ಅವರ ಟೆಸ್ಟಿಕಲ್ಸ್‌ನ್ನು ಸ್ಕ್ವೀಜ್ ಮಾಡಿದರು ಎನ್ನತಕ್ಕಂಥ ಮಾತನ್ನು ಹೇಳಿದರೆ ಅವರಿಗೆ ರಕ್ಷಣೆ ಸಿಗುವುದಿಲ್ಲ ಅಂತ ಹೇಳಿದರೆ ನಾಳೆ ಫಾರೆಸ್ಟ್ ಅಧಿಕಾರಿಗಳು ಅಲ್ಲಿ ಕೆಲಸ ಮಾಡುವುದಾದರೂ ಹೇಗಾಗುತ್ತದೆ? ಆದ್ದರಿಂದ ಅವರಿಗೆ ಒಂದು ನೈತಿಕ ಬಲವನ್ನು ತುಂಬತಕ್ಕ ಪೋಲೀಸ್ ಇಲಾಖೆಯಿಂದ ಆಗಲಿಲ್ಲ ಇದು ನನ್ನ ಆಪಾದನೆ. ಆದ್ದರಿಂದ ಇನ್ನು ಹೆಚ್ಚು ವಿವರವಾಗಿ ಪ್ರಸ್ತಾಪ ಮಾಡಿದ್ದೇನೆ. ಆದುದರಿಂದ ಮಾನ್ಯ ಉಪಾಧ್ಯಕ್ಷಣಿಯವರೇ, ಇಲ್ಲಿ ಈ ಇಲಾಖೆಗಳಲ್ಲಿ ಇಲ್ಲದಿರತಕ್ಕಂಥಾದ್ದು ಸಮನ್ವಯತೆ ಮತ್ತು ಸಹಕಾರ, ಎರಡೂ ಇಲ್ಲ. ಕೋಆರ್ಡಿನೇಷನ್ ಇಲ್ಲ, ಕೋಆಪರೇಷನ್ನೂ ಇಲ್ಲ. ಆದುದರಿಂದ ಇಂಥ ಘಟನೆಗಳು ಮುಂದೆ ನಡೆಯದ ಹಾಗೆ ಏನಾದರೂ ಒಂದು ಶಾಶ್ವತ ವ್ಯವಸ್ಥೆ ಮಾಡಬೇಕು. ಆದುದರಿಂದ ಕನಿಷ್ಠಪಕ್ಷ ಇಂತಹ ಜಿಲ್ಲೆಗಳಿಗೆ ಜಿಲ್ಲಾಧಿಕಾರಿಗಳನ್ನು ಜಿಲ್ಲಾ ಪೋಲೀಸ್ ಅಧಿಕಾರಿಗಳನ್ನು, ಹಾಕುವಾಗ ಸ್ವಲ್ಪ ಸಂಬಂಧ ಇಟ್ಟುಕೊಳ್ಳಬೇಕು. ನಿಮ್ಮ ಇಲಾಖೆಯ ಅಧಿಕಾರಿಗಳನ್ನು ಡಿ ಎಫ್ ಓ ಮತ್ತೊಬ್ಬರನ್ನು ಹಾಕುವಾಗ ಇನ್ನಾದರೂ ಸಮನ್ವಯತೆ ಮಾಡುವುದಕ್ಕೆ ಒಂದು ಆಲೋಚನೆ ಮಾಡಿ. ಈ ಆಲೋಚನೆ ಆಗದೇ

ಹೋದರೆ ಶಾಶ್ವತವಾಗಿ ಇಂತಹ ಕೆಲಸಗಳು ಪದೇ ಪದೇ ಆಗುತ್ತಿರುತ್ತವೆ. ಇದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಆ ಕಾರಣ ಚಿಪ್ಪನ ಸಾವಿನ ಬಗ್ಗೆ ಸಿ ಒ ಡಿ ತನಿಖೆ ಮುಂದುವರಿಯಲಿ. ಸಾವು ಯಾವರೀತಿ ಆಯಿತು ಬೇರೆ ನೋಡೋಣ, ಆದರೆ ನಾಗರಹೊಳೆ ಅಭಯಾರಣ್ಯದಲ್ಲಿ ಒಂದು ದುರಂತ ನಡೆದಿದೆಯಲ್ಲ, ಇದು ಜಗತ್ತಿನ ಗಮನ ಸೆಳೆದಿದೆ. ಏಷಿಯಾ ಖಂಡದಲ್ಲಿಯೇ ಅತ್ಯಂತ ಶ್ರೇಷ್ಠವಾದ ಹೆಸರಾಂತ ಈ ಅಭಯಾರಣ್ಯಕ್ಕೆ ಬೆಂಕಿ ಹಚ್ಚತಕ್ಕಂಥ ದುರಂತದ ಕೆಲಸ ನಡೆದಿದೆಯಲ್ಲ ಅದು ಅಕ್ಷಮ್ಯ ಅಪರಾಧ. ಅವರು ಎಷ್ಟು ಎತ್ತರದವರಿರಲಿ, ಎಷ್ಟು ದೊಡ್ಡ ಶಕ್ತಿ ಇರಲಿ, ಆ ಶಕ್ತಿಗಳನ್ನು ಕಾನೂನಿನ ವ್ಯಾಪ್ತಿಗೆ ತರಬೇಕು, ಅದರ ಪರೀಕ್ಷೆ ಆಗಬೇಕು, ಇಂತಹ ಕೆಲಸ ಮುಂದೆ ಆಗದಹಾಗೆ ಈ ಕೆಲಸ ಮಾಡಿದವರಿಂದ ಇಡೀ ಮಲೆನಾಡಿನ ಇಡೀ ಅರಣ್ಯ ಪ್ರದೇಶದಿಂದ ಬರತಕ್ಕಂಥ ನಮ್ಮ ಜನರ ಮೇಲೆ ಅಪರಾಧವನ್ನು ತಪ್ಪಿಸಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :– ಯೆಡಿಯೂರಪ್ಪನವರೇ ತಾವು ಮಾತನಾಡುತ್ತೀರಾ?

ಶ್ರೀ ಬಿ.ಎಸ್. ಯೆಡಿಯೂರಪ್ಪ (ಶಿಕಾರಿಪುರ) :– ಇದರಲ್ಲಿ ಎಲ್ಲರೂ ಮಾತನಾಡಬಹುದು, ಎಲ್ಲರಿಗೂ ಅವಕಾಶ ಇದೆ, ಅಧ್ಯಕ್ಷರ ಹತ್ತಿರ ಮಾತನಾಡಿದ್ದೇವೆ.

ಸನ್ಮಾನ್ಯ ಅಧ್ಯಕ್ಷಿಣಿಯವರೇ, ಇಲ್ಲಿ ಒಟ್ಟು 643 ಚದರಕಿಲೋಮೀಟರ್ ಇದ್ದಂಥ ನಾಗರಹೊಳೆ ಅಭಯಾರಣ್ಯದ ಅರ್ಧಕ್ಕಿಂತ ಹೆಚ್ಚು ಭಾಗ ಬೆಂಕಿಗೆ ಆಹುತಿಯಾಗಿದೆ ಎಂಬುದು ನಮಗೆ ತಿಳಿದು ಬಂದಿರುವ ಸಂಗತಿ. ಬಹುಶ: ಏಷಿಯಾದಲ್ಲೇ ಅತ್ಯಂತ ಪ್ರಸಿದ್ಧವಾದಂಥ ನಾಗರಹೊಳೆ ಅಭಯಾರಣ್ಯ ಈ ಒಂದು ಅರಣ್ಯದಲ್ಲಿದ್ದಂಥ ಸೊಬಗು, ನೈಜ್ಯತೆ ಹಾಳಾಗಿ ಮನುಷ್ಯನ ಒಂದು ರೀತಿ ಅತೀ ಕ್ರೂರ ವರ್ತನೆ ಮಾಡಿ ಈ ಒಂದು ಕಾಡನ್ನು ಧ್ವಂಸ ಮಾಡುವಂತಹ ಒಂದು ಪ್ರಯತ್ನ, ಅದಕ್ಕೆ ಅಧಿಕಾರಿಗಳು ಮೂಕ ಪ್ರೇಕ್ಷಕರಾಗಿ ಉಳಿತಂಥ ಒಂದು ಘಟನೆ ನಡೆದಿದೆ. ಬಹಳವರ್ಷಗಳಿಂದ ನಾಗರಹೊಳೆ ಅಭಯಾರಣ್ಯದಲ್ಲಿ ಕೆಲಸ ಮಾಡುತ್ತಿದ್ದಂಥ ಪ್ರಾಮಾಣಿಕ ಅಧಿಕಾರಿಗಳ ಬಗ್ಗೆ ಒಂದಲ್ಲ ಒಂದು ರೀತಿ ಅವರ ಮೇಲೆ ಆಘಾತ ಮಾಡುವಂತಹ ಅವರನ್ನು ಗೊಂದಲದಲ್ಲಿ ಸಿಕ್ಕಿಸುವಂತಹ ವ್ಯವಸ್ಥಿತವಾದ ಪ್ರಯತ್ನ ಈ ಕಾಡು ಕಳ್ಳರಿಂದ, ಈ ಪ್ರಾಣಿಗಳನ್ನು ಹತ್ಯೆ ಮಾಡುತ್ತಿರುವಂತಹ ಜನರಿಂದ ನಡೆದುಕೊಂಡು ಬರುತ್ತಿದೆ. ಇವತ್ತು ಯಾರು ಅಲ್ಲಿ ಆರ್ ಎಫ್ ಓ ಇರಬೇಕು, ಅಧಿಕಾರಿಗಳು ಯಾರು ಇರಬೇಕು, ಇದರ ಬಗ್ಗೆ ನಾನು ಚಿಂತನೆ ಮಾಡುವುದಿಲ್ಲ, ಅದು ಸರಕಾರಕ್ಕೆ ಬಿಟ್ಟಿದ್ದು ನೀವು ಯಾರನ್ನು ಬೇಕಾದರೂ ಇಡಿ, ಆದರೆ ಒಂದಂತೂ ನಿಶ್ಚಿತ ಇವತ್ತು ಇಡೀ ರಾಜ್ಯದಲ್ಲಿ ಕಾಡು ನಾಶವಾಗುತ್ತಿದೆ, ಶ್ರೀಗಂಧ ಲೂಟಿಯಾಗುತ್ತಿದೆ, ಯಾರೂ ಹೇಳುವವರು ಕೇಳುವವರು ಇಲ್ಲದ ರೀತಿಯಲ್ಲಿ ಕಳ್ಳಸಾಗಾಣಿಕೆ ಅವಿರತವಾಗಿ ನಡೆಯುತ್ತಿದೆ. ನಾಗರಹೊಳೆಯಲ್ಲಿ ಈ ಒಂದು ರಕ್ಷಣೆ ಮಾಡಿಕೊಂಡು ಬಂದಂಥ ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇ ಈ ಅಪರಾಧ ಎನ್ನುವ ರೀತಿಯಲ್ಲಿ ಇವತ್ತು ವಾತವರಣ ಮೂಡಿದೆ. ನಾನು ಸರಕಾರಕ್ಕೆ ಒತ್ತಾಯಮಾಡುವಂತಹದು, ತಮ್ಮ ಗಮನಕ್ಕೆ ತರುವುದು, ಅಕಸ್ಮಾತ್ ಯಾವುದಾದರೂ ಕಾರಣಕ್ಕಾಗಿ ಈ ರೀತಿ ಹಗುರವಾಗಿ ಕಾಡುಗಳ್ಳರು ಮಾಡುವಂತಹ ಈ ದೌರ್ಜನ್ಯವನ್ನು ವಿನಾಶಕಾರಿ ಪ್ರವೃತ್ತಿಯನ್ನು ತಡೆಯುವಂತಹ ಪ್ರಯತ್ನ ನಮ್ಮ ಕಡೆಯಿಂದ ಆಗದಿದ್ದರೆ ಯಾವುದೇ ಪ್ರಾಮಾಣಿಕ ಅಧಿಕಾರಿ ಇನ್ನು ಮುಂದೆ, ಕಾಡು ಕಳ್ಳಸಾಗಾಣಿಕೆ ನಡೆಸುವಂತಹ ಅಲ್ಲಿರತಕ್ಕಂಥ ವನ್ಯ ಮೃಗಗಳನ್ನು ಹತ್ಯೆ ಮಾಡುವಂತಹ ರೀತಿಯಲ್ಲಿ ವ್ಯವಸ್ಥಿತ ಷಡ್ಯಂತ್ರ ಪ್ರಯತ್ನ ಏನು ನಡೆಯುತ್ತಿದೆ ಅದನ್ನು ತಡೆಯುವಂತಹ ಪ್ರಯತ್ನ ಮಾಡುವುದಿಲ್ಲ ತಮ್ಮ ಪ್ರಾಣವನ್ನೇ ಪಣವಾಗಿ ಇಟ್ಟು ಕೆಲಸ ಮಾಡುವಂತಹ ಅಧಿಕಾರಿಗಳಿಗೆ ರಕ್ಷಣೆ ಕೊಡತಕ್ಕಂಥಾದ್ದು ನಮ್ಮ ದೊಡ್ಡ ಜವಾಬ್ದಾರಿ ಇದೆ. ಅವರಿಗೆ ರಕ್ಷಣೆ ಕೊಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ನಾನು ತಮಗೆ ಹೇಳುವಂಥಾದ್ದು, ಬಹುಶ: ನಾವು ಚರ್ಚೆ ಮಾಡುವುದಕ್ಕೆ ಮುಂಚೆ, ಈ ಚಿಪ್ಪ ಎನ್ನುವವನ ಕೊಲೆಯಾಗಿದೆ ಎಂದು ಅಂದುಕೊಂಡಿದ್ದೇವೆ, ಇದರ ಬಗ್ಗೆ ಇಂಟೆಲಜೆನ್ಸಿ ರಿಪೋರ್ಟ್ ಇದೆ, ಅದನ್ನು ನಮ್ಮ ಗಮನಕ್ಕೆ ತರುವಂಥ ಪ್ರಯತ್ನ ಮಾಡದಿದ್ದರೆ ಅಥವಾ ಸದನಕ್ಕೆ ಮುಂಚೆಯೇ ಅದರ ವಿವರವನ್ನು ಒದಗಿಸಿಕೊಟ್ಟಿದ್ದರೆ, ಇನ್ನೂ ಪರಿಣಾಮಕಾರಿಯಾಗಿ ಚರ್ಚೆ ಮಾಡುವುದಕ್ಕೆ

ಅವಕಾಶವಾಗುತ್ತಾ ಇತ್ತು. ಚಿಪ್ಪ ಎನ್ನುವವನು, ನನಗೆ ಗೊತ್ತಿರುವ ಪ್ರಕಾರ, ಇಂಟೆಲಜೆನ್ಸಿ ರಿಪೋರ್ಟ್ ಪ್ರಕಾರ ಅಕ್ರಮವಾಗಿ ಕಾಡುಪ್ರಾಣಿಗಳ ಬೇಟೆ ಮಾಡಿ, ಕಳ್ಳಸಾಗಾಣಿಕೆ ಮಾಡುತ್ತಿದ್ದವನು ಎನ್ನುವ ವರದಿ ನಿಮ್ಮ ಇಂಟಲಿಜೆನ್ಸಿ ರಿಪೋರ್ಟ್‌ನಲ್ಲಿದೆ, ತಾವು ಬೇಕಾದರೆ ಆ ವರಿದಿಯನ್ನು ತರಿಸಿ ನೋಡಿ. ಮತ್ತೆ ಅವನ ಹತ್ತಿರ ಒಂದು ಗನ್ ಇತ್ತು, ಅವನ ಜೇಬಿನಲ್ಲಿ ಎರಡು ಗುಂಡು ಸಿಕ್ಕಿದೆ, ಯಾರ ಹತ್ತಿರ ಗನ್ ಇತ್ತೋ ಅವನೂ ಸಹ ಭಾಗಮಂಡಲದವನು. ಅವನ ಜೇಬಿನಲ್ಲಿ ಎರಡು ಗುಂಡುಗಳಿತ್ತು, ನಿಮ್ಮ ಇಂಟಲಿಜೆನ್ಸಿ ರಿಪೋರ್ಟ್‌ನ್ನು ತಾವು ತೆಗೆದುನೋಡಿದರೆ, ಭಾಗಮಂಡಲದ ಇನ್ನೊಬ್ಬ ಅಕ್ರಮ ಬೇಟೆ ಮಾಡುತ್ತಿದ್ದಂಥ ವ್ಯಕ್ತಿಯಿಂದ ತಂದಂಥ ತೋಟ ಅದು ಮತ್ತೆ ಸತ್ತವನ ದೇಹದಲ್ಲಿದ್ದಂತ ಗುಂಡುಗಳಿಗೂ ನಿಮ್ಮ ಇಂಟಲಜೆನ್ಸಿ ವರದಿ ಪ್ರಕಾರ, ಅರಣ್ಯ ಅಧಿಕಾರಿಗಳು ಉಪಯೋಗಿಸುತ್ತಿದ್ದಂಥ ಗುಂಡುಗಳಿಗೂ ಹೋಲಿಕೆ ಮಾಡಿದಾಗ, ಅರಣ್ಯ ಅಧಿಕಾರಿಗಳು ಉಪಯೋಗಿಸುತ್ತಿದ್ದ ಗುಂಡುಗಳಿಗೂ ಇದಕ್ಕೂ ಏನೂ ಸಂಬಂಧ ಇಲ್ಲ ಎನ್ನುವಂತಾದ್ದು ನಿಮ್ಮ ಇಂಟಲಿಜೆನ್ಸಿ ರಿಪೋರ್ಟ್‌ನಲ್ಲಿ ವರದಿಯಾಗಿದೆ. ಅಕಸ್ಮಾತ್ ಇವತ್ತು, ಹಿಂದೆ ಯಾವುದೇ ಕಾರಣಕ್ಕೆ ಅರಣ್ಯ ಅಧಿಕಾರಿಗಳು ಈ ರೀತಿ ಅಕ್ರಮವಾಗಿ ಬೇಟೆ ಮಾಡುವುದಕ್ಕೆ ಬಂದಂಥವರ ಮೇಲೆ, ಕಳ್ಳಸಾಗಾಣಿಕೆಗೆ ಬಂದವರ ಮೇಲೆ, ಆ ಕಾನೂನನ್ನು ಉಲ್ಲಂಘಿಸಿದವರ ಮೇಲೆ, ಗುಂಡಿಟ್ಟು ಕೊಲ್ಲುವಂಥ ಅಧಿಕಾರ ಇರಲಿಲ್ಲ. ಈ ವೀರಪ್ಪನ್ ಹಾವಳಿ ಪ್ರಾರಂಭವಾದ ಮೇಲೆ 20–9–90 ರಂದು, ಅಪರಾಧ ದಂಡ ಸಂಹಿತೆ, 197 ರ ಕಾಲಂ ರೀತ್ಯಾ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ, ಅರಣ್ಯ ಸಂರಕ್ಷಣೆಗಾಗಿ ಗುಂಡು ಹಾರಿಸಿದ್ದು ನಿಜವಾಗಿದ್ದರೂ ಸಹ ಅದು ಅಪರಾಧ ಆಗುವುದಕ್ಕೆ ಸಾಧ್ಯವೇ ಇಲ್ಲ. ಇವತ್ತು ಅವರ ಬೇಡಿಕೆ ಏನಿದೆ, ಉದ್ದೇಶ ಏನಿದೆ, ಅಲ್ಲಿರುವಂಥ ಆರ್.ಎಫ್.ಓ. ಚಿನ್ನಪ್ಪನವರನ್ನು ವರ್ಗಾವಣೆ ಮಾಡಿ, ಬಹಳ ದಿನಗಳಿಂದ ಬರುತ್ತಾ ಇರುವಂಥ ಬೇಡಿಕೆ. ಮತ್ತೇ ಫಾರೆಸ್ಟ್ ಗೇಟ್ ರಾತ್ರಿ ಮುಚ್ಚುತ್ತಾ ಇದೆ, ಯಾರಿಗೂ ಪ್ರವೇಶ ಇಲ್ಲ ಸಾಯಂಕಾಲ 6 ಗಂಟೆಯಿಂದ ಬೆಳ್ಳಿಗೆ 6 ಗಂಟೆಯವರೆಗೆ, ಯಾರು ಅಲ್ಲಿ ಪ್ರವೇಶ ಮಾಡುವಹಾಗೆ ಇಲ್ಲ. ಯಾರು ಈ ಕಾಡು ನಾಶಕ್ಕೆ ಬಂದಂಥವರಿಗೆ, ಪ್ರಾಣಿಗಳನ್ನು ಅಕ್ರಮವಾಗಿ ಬೇಟೆ ಮಾಡುವುದಕ್ಕೆ ಬಂದಂತವರಿಗೆ, ಷೂಟ್ ಮಾಡುವಂಥ ಅಧಿಕಾರವನ್ನು, ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಅದನ್ನು ವಿತ್ ಡ್ರಾ ಮಾಡಿ ಇದರ ಉದ್ದೇಶ ಏನು, ಇದನ್ನು ನೋಡಿದ ತಕ್ಷಣ ಯಾವುದೋ ಎಮ್ಮೆ ಬಂದಿತ್ತು,ಅದನ್ನು ನೋಡುವುದಕ್ಕೆ ಹೋದ, ಅವನು ತೀರಿಕೊಂಡ ಎಂಬ ಮಾತು ಏನು ಹೇಳುತ್ತಾರೆ, ರಾತ್ರಿಹೊತ್ತು ಎಮ್ಮೆ ಬಂದರೆ ಹುಡುಕಿಕೊಂಡು ಹೋಗುತ್ತಾರೆಯೇ? ಮತ್ತು ಈ ಕಳ್ಳಸಾಗಾಣಿಕೆ ಮಾಡುತ್ತಿದ್ದವರ ಬಗ್ಗೆ ನಿಮ್ಮ ಸರ್ಕಾರದ ಅನೇಕ ವರದಿಗಳಿವೆ, ಯಾರು ಯಾರು ಇದರಲ್ಲಿ ಶಾಮೀಲಾಗಿದ್ದರು ಎನ್ನುವಂಥಾದ್ದು ಬಹಿರಂಗವಾಗುತ್ತೆ. ಈ ಘಟನೆಯಲ್ಲಿ ಯಾರು ಯಾರು ಇನ್‌ವಾಲ್ವ್ ಆಗಿದ್ದಾರೆ ಎಂದು ಪೋಲೀಸ್ ಅಧಿಕಾರಿಗಳು ಸಂಬಂಧಪಟ್ಟ ಅರಣ್ಯ ಅಧಿಕಾರಿಗಳನ್ನು ನೋಡಿದಾಗ, ಒಂದಕ್ಕೊಂದಕ್ಕೆ ಸಾಮ್ಯ ಇದೆ. ಈ ರೀತಿ ವ್ಯವಸ್ಥಿತವಾಗಿ ಲೂಟಿ ಮಾಡುವಂಥ ಪ್ರಯತ್ನ ನಡೆದುಕೊಂಡು ಬಂದಿದೆ. ಅದಕ್ಕೆ ನಾನು ಕೇಳುವಂತಾದ್ದು, ಮುಂದೆ ಈ ರೀತಿ ಅರಣ್ಯ ನಾಶವಾಗಬಾರದು, ಈ ರೀತಿ ಸಾವಿರಾರು ಎಕರೆ ಕಾಡನ್ನು. ಬೆಂಕಿ ಹಾಕಿ ಸುಟ್ಟರೂ ಸಹ ನಾವು ಬದುಕ ಬಹುದು ಎನ್ನುವಂಥ ಪ್ರಯತ್ನ ಏನು ನಡೆಸುತ್ತಿದ್ದಾರೆ, ಅವರು ಯಾರೇ ಇರಲಿ, ಅವರಿಗೆ ಯಾರೇ ಬೆಂಬಲವಾಗಿ ನಿಂತಿರಲಿ, ಯಾವುದೇ ಸಂಬಂಧ ಇರಲಿ ಅದನ್ನು ಹತ್ತಿಕ್ಕುವಂಥ ಧೈರ್ಯ ಈ ಸರ್ಕಾರ ಮಾಡದೇ ಇದ್ದರೆ, ಈ ರೀತಿ ಸಮಾಜಘಾತುಕ ಶಕ್ತಿಗಳೇನು ಅವಿರತವಾಗಿ, ಕಾಡನ್ನು ಲೂಟಿ ಮಾಡಿ, ಅಧಿಕಾರಿಗಳನ್ನು ಬೆದರಿಸಿ ಮನಬಂದಂತೆ ನಾವು ಮುಂದೆ ಹೋಗಬಹುದು ಎನ್ನುವಂಥ ಧೈರ್ಯ ಇದೆ. ಈ ರಾಜ್ಯದಲ್ಲಿ ಏನು ಮಾಡುತ್ತಿದ್ದಾರೆ, ಇದನ್ನು ತಡೆಯುವಂಥ ಪ್ರಾಮಾಣಿಕ ಪ್ರಯತ್ನ ಸರ್ಕಾರದಿಂದ ಆಗದೇ ಇದ್ದರೆ, ಬಹುಶ: ಯಾವುದೇ ಪ್ರಾಮಾಣಿಕ ಅಧಿಕಾರಿ, ಇರುವವರೆ, ಅತಿ ವಿರಳ, ಅವರೂ ಸಹ ಕೆಲಸ ಮಾಡುವುದಿಲ್ಲ. ಬಹುಶಃ ತಮಗೆ ಗೊತ್ತಿರಬಹುದು, ಇವತ್ತು ಪ್ರಾಮಾಣಿಕ ಕೆಲಸ ಮಾಡುತ್ತಿರುವಂಥ ಅಧಿಕಾರಿಗಳ ಮೇಲೆ, ನೀವು ಕ್ರಮತೆಗೆದುಕೊಂಡರೆ, ಅದರ ಪರಿಣಾಮ ಏನಾಗಬಹುದು ಎಂಬ ಭವಿಷ್ಯವನ್ನೇ ಹೇಳಬೇಕಾಗುತ್ತದೆ. ಅರಣ್ಯದ ಸ್ಥಿತಿ ಏನಾಗಬಹುದು ಎಂಬುದನ್ನು ಹೇಳಬೇಕಾಗುತ್ತದೆ. ಇವತ್ತು ನಾನು ತಮಗೆ ಹೇಳುತ್ತೇನೆ, ದಯಮಾಡಿ,

ಈ ಸತ್ಯಸಂಗತಿ ಹೊರಕ್ಕೆ ಬರಬೇಕೆಂದಿದ್ದರೆ, ನಿಮ್ಮ ಸಿ ಒ ಡಿ ವರದಿಯಿಂದ ಏನೂ ಆಗುವುದಿಲ್ಲ, ಮೊದಲನೆಯದು ಈ ಕಡೆಯಿಂದ ಒಂದು ಸದನದ ಸಮಿತಿಯನ್ನು ಮಾಡಿ, ಒಂದು ವರದಿಯನ್ನು ತಾವು ತರಿಸಿಕೊಳ್ಳಿ, ಎಲ್ಲಾ ಕಡೆಯವರೂ ಸತ್ಯಸಂಗತಿಯನ್ನು ತಿಳಿಸುವಂಥ ಪ್ರಯತ್ನ ಮಾಡುತ್ತಾರೆ. ಮತ್ತೊಂದು, ಇನ್ನೊಂದು ಕಡೆ ಸಿ.ಬಿ.ಐ. ತನಿಖೆಗೆ ತಾವು ಒಳಪಡಿಸಿ, ಆಗ, ಈ ರೀತಿ ಅವ್ಯಾಹತವಾಗಿ ಕಾಡನ್ನು ಲೂಟಿ ಮಾಡಿ, ಬೆಂಕಿ ಹಚ್ಚಿ ಸುಟ್ಟರೂ ಸಹ ಬದುಕಬಹುದು ಎನ್ನುವಂಥ ಧೈರ್ಯ ಮಾಡುವ ಜನರ ಮೇಲೆ ಸರ್ಕಾರ, ಯಾವುದೇ ಮುಲಾಜಿಗೆ ಒಳಗಾಗದೇ, ಸರಿಯಾದ ಕ್ರಮ ತೆಗೆದುಕೊಳ್ಳುವುದಕ್ಕೆ ತಮ್ಮಿಂದ ಆಗುತ್ತೆ, ಅದಕ್ಕೆ ಸಂಪೂರ್ಣ ನಾವು ನಿಮ್ಮ ಜೊತೆಗೆ ಇದ್ದೇವೆ, ಇದರಲ್ಲಿ ರಾಜಕೀಯದ ಪ್ರಶ್ನೆ ಇಲ್ಲ. ಈ ಕಾಡಿನ ಸಂಪತ್ತನ್ನು ಉಳಿಸುವ ಪ್ರಯತ್ನ ಆಗಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ ಅರಣ್ಯಸಂಪತ್ತು ಲೂಟಿಯಾಗುತ್ತಿರುವ ಈ ಸಂದರ್ಭದಲ್ಲಿ ಈ ದಿಟ್ಟ ನಿಲುವನ್ನು ತಾವು ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ಇನ್ನೂ ಈ ಸದನಕ್ಕೆ ತಾವು ಕೆಲವು ಸಂಗತಿಗಳನ್ನು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಇಲ್ಲಿ ಟೇಬಲ್ ಮೇಲೆ ಇಡಿ. ಆಗ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಒಂದು, ಈ ಚಿನ್ನಪ್ಪನ ಸಾವಿನ ಬಗ್ಗೆ, ಸಾವಿನ ಸ್ಥಳ ಮಹಜರ್ ವರದಿ ಇದೆ. ಅಲ್ಲಿ ವಾಸ್ತವಿಕ ಸ್ಥಿತಿ ಏನಿತ್ತು ಎಂಬುದು ಅದರಿಂದ ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆ ಒಂದು ಮಹಜರ್ ವರದಿಯನ್ನುಇಲ್ಲಿಡಿ. ಎರಡನೆಯದು ಪೋಸ್ಟ್‌ಮಾರ್ಟಮ್ ರಿಪೋರ್ಟ್ ಏನಿದೆ? ಅದರ ವಿವರವನ್ನು ನಮಗೆ ಒದಗಿಸಿಕೊಡಿ. ಮೂರನೆಯದು ಯಾರು ಆರ್.ಎಫ್.ಓ. ಚಿನ್ನಪ್ಪನ ಬಗ್ಗೆ ಎಲ್ಲರೂ ವಿಷಕಾರುವಂಥ ಪ್ರಯತ್ನ ಮಾಡುತ್ತಿದ್ದಾರೆ? ಅವರ ಸರ್ವೀಸ್ ರೆಕಾರ್ಡ್ ತೋರಿಸಿ. ಏನಿದೆ ಅವರ ಬಗ್ಗೆ ಆರೋಪ? ಇವತ್ತು ನ್ಯೂಯಾರ್ಕ್ ಜಿಯಾಲಜಿಕಲ್ ಸೊಸೈಟಿಯವರು ಬಹುಶಃ ನಮ್ಮ ರಾಜ್ಯದ ಇಂಥಾ ಉನ್ನತ ಅಧಿಕಾರಿಗೆ ಅವಾರ್ಡ್ ಕೊಟ್ಟಿರತಕ್ಕಂಥದ್ದನ್ನು ನಾವು ಕೇಳಿದ್ದೇವೆ. ಪ್ರಾಮಾಣಿಕವಾಗಿ ಕೆಲಸ ಮಾಡಿಕೊಂಡ ಬರುತ್ತಿರತಕ್ಕಂಥ ವ್ಯಕ್ತಿ ಎಂದು ಕೇಳಿದ್ದೇವೆ. ಇವರ ಮೇಲೆ ಏಕೆ ಇದು ? ಇದರ ಹಿನ್ನೆಲೆ ಏನು? ಇದು ಸದಾ ಸತ್ಯ ಸಂಗತಿ ಹೊರಗಡೆ ಬರಲಿ. ಮತ್ತೇ ಈ ಕಾಡು ಸುಡುವುದಕ್ಕೆ ಪ್ರಾರಂಭವಾಯಿತಲ್ಲ, 14ನೇ ತಾರೀಖಿನಿಂದ 20ನೇ ತಾರೀಖಿನವರೆಗೂ ಸುಡುತ್ತಿತ್ತಲ್ಲ, ಆಗ ಅಧಿಕಾರಿಗಳು ಏನು ಮಾಡುತ್ತಿದ್ದರು? ಸರ್ಕಾರ ಏನು ಮಾಡುತ್ತಾ ಇತ್ತು? ಅದನ್ನು, ಬೆಂಕಿ ಆರಿಸುವ ಪ್ರಯತ್ನ ನಿಮ್ಮ ಕಡೆಯಿಂದ ಏನಾಯಿತು? ಅದರ ಬಗ್ಗೆ ಸರಿಯಾದ ವರದಿಯನ್ನು ಕೊಡುವಂಥ ಪ್ರಯತ್ನ ಮಾಡಿ.

ಶ್ರೀ ಎ.ಎಂ ಬೆಳ್ಳಿಯಪ್ಪ: ಚಿನ್ನಪ್ಪನ ಮೇಲೆ ಏಕೆ ಸಿಟ್ಟು ಎಂದು ಹೇಳುವಂಥ ವಿಷಯವನ್ನು ತಾವು ಪ್ರಸ್ತಾಪ ಮಾಡಿದ್ರಿ. ಚಿನ್ನಪ್ಪ, ನೀವು ಹೇಳುವ ರೀತಿಯಲ್ಲಿ ಒಳ್ಳೆ ಆಫೀಸರ್ ಎಂದು ಎಲ್ಲರಿಗೂ ಗೊತ್ತಿದೆ. ಜನ ಹೇಳುತ್ತಿದ್ದಾರೆ. ಅಥವಾ ಬೇರೆ ಆಫೀಸರ್ಸ್ ಹೇಳುವುದನ್ನು ಕೇಳಿದ್ದೇವೆ. He may be very good officer, he may be non-corrupt, he may be an honest officer we don't dispute but the way he was dealing with them, was devoid of any tactics and diplomacy. ಒಂದೇ ಒಂದು ಉದಾಹರಣೆ ನಾನು ಹೇಳುತ್ತಿದ್ದೇನೆ, ಲಾಸ್ಟ್ ಇಯರ್ ನಾನು ಕೇಳಿದ್ದು ಇಂಥಾ ಆಫೀಸರ್‌ನ್ನು ಕೊಡಗಿನಿಂದ ಬಿಟ್ಟುಕೊಡಬೇಕೆಂದು ಅಥವಾ ಇಂಥಾ ಹಗರಣ ಮಾಡುವುದಕ್ಕೆ ಅವಕಾಶ ಕೊಡಬಾರದು ಎಂಬುವ ವಿಷಯದಲ್ಲಿ ಡಿಸ್ಪ್ಯೂಟ್ ಏನಿಲ್ಲ. People of Coorg have got as much as concern so far this reserve forest it concerned as the people of Karnataka, people of India. We are also sorry for that these things have happened. ಕಳೆದ ವರ್ಷ ಒಬ್ಬ ಮನುಷ್ಯ ಮೈಸೂರಿನಲ್ಲಿ ಸತ್ತ. ಅವನ ಹೆಣವನ್ನು ತೆಗೆದುಕೊಂಡು ಬರುತ್ತಿದ್ದರು. ಹುಣಸೂರಿನಿಂದ ಮಾರ್ಕಲ್ ಗೇಟ್, ನಾಗರಹೊಳೆ ದಾಟಿಕೊಂಡು 16 ಕಿಲೋಮೀಟರ್ ಒಳಗೆ. ಎಲ್ಲಿಂದ? ಹುಣಸೂರಿನಿಂದ. ಈ ಮಾರ್ಕಲ್ ಗೇಟಿಗೆ ಸಾವು ತೆಗೆದುಕೊಂಡು ಬರಬೇಕಾದರೆ 6 ಗಂಟೆ 10 ನಿಮಿಷವಾಗಿದೆ. ಇನ್ನು ಬರೀ 10 ಕಿಲೋ ಮೀಟರ್, 15 ಕಿಲೋಮೀಟರ್ ಹೋಟ್ಯಾ ಇರುವುದು. It

is human. Whatever may be of the weakeness of the Officer or his credibilitity. ಪಬ್ಲಿಕ್ ರೋಡ್, ಪಿ.ಡಬ್ಲ್ಯೂ.ಡಿ. ರೋಡ್, ಫಾರೆಸ್ಟ್ ರೋಡ್ ಒಳಗೆ ಹೋಗುತ್ತಿದೆ. ಆದರೆ ಅಲ್ಲಿಂದ ಕುಟ್ಟಾ ವರೆಗೆ ಬಿಟ್ಟಿದ್ರೆ ಅವರು ಬೇಗ ಹೋಗಿ ಮನೆಗೆ ಸೇರುತ್ತಿತ್ತು. ಸಾವು ಇದೆ. He stopped the dead body from being carried on that road. Then again they had to come about and 120 k.m. going to Hunsur Gonikoppa. So many thinks about it and I am just giving an illustration as how he was behaving with the people an surrounding people. .
ಒಂದು ಸಮಯ ಇವರೇ ಮುಂದಕ್ಕೆ ಹೋಗಿ ಜೀಪನ್ ತೆಗೆದುಕೊಂಡು ಮುಂದೆ ಹೋಗಿ ಸಾವು ತೆಗೆದುಕೊಂಡು ಬನ್ನಿ ಎಂದು ಹೇಳಿದ್ದಿದ್ದರೆ ಆಗುತ್ತಿತ್ತು. of course we understand his anxiety . . .
ಪ್ರಾಣಿಗಳು ಹೋಟಿಬಿಡುತ್ತವೆ, ತೊಂದರೆ ಮಾಡಿಬಿಡುತ್ತವೆ ಎಂದು ಹೇಳಬಹುದು ಅದಕ್ಕೋಸ್ಕರ ನಾನು ಹೇಳುವುದು ಎಲ್ಲಾ ಒಪ್ಪುತ್ತೇವೆ. ಅವರಿಗೆ ಟ್ಯಾಕ್ಟಿಸ್ ಇಲ್ಲ ಡಿಪ್ಲೊಮೆಸಿ ಇಲ್ಲ. ಅದ್ದರಿಂದ ಈ ರೀತಿಯಾಗಿದ್ದು. ಆದರೆ ಶ್ರೀಮಾನ್ ಚಂದ್ರೇಗೌಡರು ಹೇಳಿದ ಹಾಗೆ ಏನೆಂದರೆ, ಇದು ಎಲ್ಲರ ತಪ್ಪಾಗಿಹೋಗಿಬಿಟ್ಟಿದೆ. ಇವತ್ತು ಏನಾಗಿದೆ ಎಂದರೆ, ಅರಣ್ಯವನ್ನು ರಕ್ಷಿಸಬೇಕು. ಯಾರೊ ಕೆಲವರು ಸೇರಿ ಎಲ್ಲಾ ಹಾಳು ಮಾಡಿ ತೊಂದರೆ ಮಾಡಿಬಿಟ್ಟಿದ್ದಾರೆ. ಎಲ್ಲಾ ಸುಟ್ಟುಬಿಟ್ಟಿದ್ದಾರೆ. ಇಲ್ಲಾ ಅಂತ ನಾನು ಹೇಳುವುದಿಲ್ಲ. ಆದರೆ ಇದಕ್ಕೆ ಎಲ್ಲರೂ ಜವಾಬ್ದಾರರಾಗಿದ್ದಾರೆ. ಆಫೀಸರ್ಸ್ ಜವಾಬ್ದಾರರಾಗಿದ್ದಾರೆ, ಪೀಪಲ್ಸ್ ಜವಾಬ್ದಾರರಾಗಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆಯವರೇ ಬಹಳ ಪ್ರಮುಖವಾದಂಥದ್ದು ಇಲ್ಲಿ ಯಾವ ಬೆಪ್ಪನ ಕೊಲೆ ಆಯಿತು? ತಮಗೆ ಗೊತ್ತಿರುವ ಹಾಗೆ ಬಾಳೆಹೋವರ್ ರೇಂಜ್‌ನಲ್ಲಿ ಸತ್ತದ್ದು. ಅದರ ಹತ್ತಿರದಲ್ಲೇ ಪಬ್ಲಿಕ್ ಹೆಲ್ತ್ ಸೆಂಟರ್ ಇದೆ. ಕುಟ್ಟಾ ಎಂದು ಹೇಳಿ ನಾಲ್ಕೈದು ಕಿಲೋಮೀಟರ್ ದೂರದಲ್ಲಿ. ಇವೊತ್ತು ಸರಕಾರ ನಿಜವಾಗಲೂ ಇದ್ದಿದ್ದರೆ ಈ ರೀತಿಯಾಗಿ ಅಮಾನುಷವಾಗಿ ಕೊಲೆ ಏನು ಆಯಿತು, ಅವನು ಗುಂಡಿಗೆ ಆಹುತಿಯಾಗಿ ಸತ್ತ, ಅದನ್ನು ಜವಾಬ್ದಾರಿ ಇರತಕ್ಕಂಥ ಸರಕಾರ ಪೋಸ್ಟ್ ಮಾರ್ಟಮ್‌ಗಾಗಿ ಹತ್ತಿರದಲ್ಲಿ ಇರುವ ಆಸ್ಪತ್ರೆಗೆ ತೆಗೆದುಕೊಂಡು ಹೋಗ ಬೇಕಾಗಿತ್ತು. ಅವೊತ್ತು ಸಾವಿರಾರು ಜನರು ಬಂದು ಸತ್ತ ಹೆಣವನ್ನು ಆ ಸ್ಥಳದಲ್ಲಿಯೇ ಮೂರು ಕಿ. ಮೀ. ಅಂತರದಲ್ಲಿರುವ ಪಿಹೆಚ್‌ಸಿ ಗೆ ತೆಗೆದುಕೊಂಡು ಹೋಗುವುದು ಬಿಟ್ಟು ಅಲ್ಲಿಂದ 12 ಕಿ.ಮೀ. ದೂರದ ನಾಗರಹೊಳೆಗೆ ತೆಗೆದುಕೊಂಡು ಬರುತ್ತಾರೆ. ಅಲ್ಲಿದ್ದಂಥ ಆರ್‌ಎಫ್‌ಓ ಮನೆಯೊಳಗೆ ಆ ಹೆಣವನ್ನು ಇಟ್ಟು ಅಲ್ಲಿಯೇ ಪೋಸ್ಟ್‌ಮಾರ್ಟಮ್ ಕೂಡ ಆಗುತ್ತದೆ. ಅಂದರೆ ಇದರ ಅರ್ಥ ಏನು? ಒಂದು ವೇಳೆ ಯಾವ ಅಧಿಕಾರಿ ತಪ್ಪಿತಸ್ಥರಾಗಿದ್ದರೆ, ಕಳ್ಳಸಾಗಾಣಿಕೆಯಲ್ಲಿ ಶಾಮೀಲು ಆಗಿದ್ದರೆ ಏನಾದರೂ ಅವ್ಯವಹಾರದಲ್ಲಿ ತೊಡಗಿದ್ದರೆ, ಅವನನ್ನು ಹ್ಯಾಂಗ್ ಮಾಡಿ, ನಾವು ಬೇಡ ಎನ್ನುವುದಿಲ್ಲ. ಆದರೆ ಇವೊತ್ತು ಒಂದು ಸರಕಾರ ನಿರ್ಭೀತಿಯಿಂದ ಕೆಲಸ ಮಾಡತಕ್ಕಂಥ ರೀತಿಯಲ್ಲಿ ಅಧಿಕಾರಿಗಳಿಗೆ ಅವಕಾಶ ಮಾಡಿಕೊಟ್ಟರೆ ಅವರು ಕೆಲಸ ಮಾಡುವುದಕ್ಕೆ ಸಾಧ್ಯ. ಯಾವ ವ್ಯಕ್ತಿಯ ಕೊಲೆಯಾಗಿದೆ, ಅದರ ಬಗ್ಗೆ ತನಿಖೆ ಇತ್ಯಾದಿಗಳನ್ನು ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವುದು ಸರಕಾರಕ್ಕೆ ಬಿಟ್ಟ ವಿಚಾರ. ನಾವು ಆ ಕೊಲೆಯ ಬಗ್ಗೆ ಚರ್ಚೆ ಮಾಡುತ್ತಾ ಇಲ್ಲ. ಇಷ್ಟು ಮಹತ್ತರವಾದ ವಿಚಾರದ ಬಗ್ಗೆ ಸರಕಾರದ ಗಮನ ಕೊಡಬೇಕು ಕೊಡುತ್ತಾರೆ. ಆದರೆ ಇದರ ಒಂದು ನೆಪ ಮಾಡಿಕೊಂಡು ಕಾಡಿಗೆ ಬೆಂಕಿ ಹಚ್ಚಿ, ನಿಸರ್ಗ ಸಂಪತ್ತನ್ನು ಹಾಳುಮಾಡಿದ್ದಾರಲ್ಲ? ಸಹಸ್ರಾರು ವನ್ಯಪ್ರಾಣಿಗಳನ್ನು ಸುಟ್ಟು ಹಾಕಿದ್ದಾರಲ್ಲ? ಆ ಒಂದು ಅರಣ್ಯದ ಸೊಬಗನ್ನು ನಾಶ ಮಾಡಿದ್ದಾರಲ್ಲ ? ಆ ಒಂದು ಕಾಡಿನ ಸೌಂದರ್ಯವನ್ನು ನಿರ್ನಾಮ ಮಾಡಿದ್ದಾರಲ್ಲ ? ಅಂಥ ಜನಗಳನ್ನು ಸರಕಾರದವರು ಒಂದು ಸಾರಿ ಕಟ್ಟುನಿಟ್ಟಾಗಿ ಹದ್ದುಬಸ್ತಿನಲ್ಲಿ ಇಡಲೇ ಬೇಕಾಗುತ್ತದೆ. ಇಲ್ಲವಾದಲ್ಲಿ ಯಾವನೇ ಅಧಿಕಾರಿ ತನ್ನ ಪ್ರಾಣವನ್ನು ಪಣವಿಟ್ಟು ಮುಂದೆ ಇಲ್ಲಿ ಕೆಲಸ ಮಾಡಲು ಮುಂದಕ್ಕೆ ಬರಲಾರ ಎಂದು ಕೂಡ ವಿಚಾರ ಮಾಡಬೇಕಾಗುತ್ತದೆ. ಒಬ್ಬ ಅಧಿಕಾರಿ ತಪ್ಪಿತಸ್ಥ ಎಂದು ಕಂಡರೆ

ಅವನನ್ನು ಎಲ್ಲಿಗಾದರೂ ಕಳುಹಿಸಿ, ಆತನ ಸರ್ವೀಸ್ ರಿಜಿಸ್ಟರ್ ತರಿಸಿ ನೋಡಿ, ಅವನ ವರ್ತನೆ ಸರಿಯಿಲ್ಲವಾದಲ್ಲಿ ಶಿಕ್ಷಿಸಿ ಆದರೆ ಒಬ್ಬ ಅಧಿಕಾರಿ ಸ್ವಲ್ಪ ಬಿಗಿ ಇದ್ದಾನೆ, ಸ್ವಲ್ಪ ಸ್ಟ್ರಿಕ್ಟ್ ಆಗಿದ್ದಾನೆ, ಅವನ ಕಣ್ಣು ಕೆಂಪಾಗಿ ಇದ್ದಾನೆ ಎಂದು ಅವನನ್ನು ಮನಸ್ಸಿಗೆ ಬಂದ ಹಾಗೆ ನೋಡುವುದಲ್ಲ. ಯಾರು ಈ ರೀತಿಯಾಗಿ ನಿರ್ಭೀತಿಯಿಂದ ಅರಣ್ಯ ರಕ್ಷಣೆ ಮಾಡುತ್ತಿದ್ದಾನೋ ಇಲ್ಲವೊ ಎಂಬ ಬಗ್ಗೆ ಸೂಕ್ತ ವರದಿಯನ್ನು ತರಸಿ ನೋಡಿ. ಆದರೆ ಯಾವ ಆರ್‌ಎಫ್‌ಓ ಮನೆಯೊಳಗೆ ಸತ್ತ ಹೆಣವನ್ನು ತಂದು ಪೋಸ್ಟ್‌ಮಾರ್ಟಮ್ ಮಾಡುತ್ತಾರೆ ಅದನ್ನು ನೋಡಿಕೊಂಡು ಇತರ ಅಧಿಕಾರಿಗಳು ಕೈಕಟ್ಟಿಕೊಂಡು ಕುಳಿತುಕೊಂಡು ನೋಡುವುದಾಗಿ ಅಲ್ಲಿರತಕ್ಕಂಥ ಅರಣ್ಯ ಇಲಾಖಾ ಕಚೇರಿಗಳನ್ನು ಸಾವಿರಾರು ಜನರು ಬಂದು ಬೆಂಕಿ ಹಾಕಿ ನಾಶ ಮಾಡುತ್ತಾರೆ, ಎಲ್ಲವನ್ನು ಆಹುತಿ ಮಾಡುತ್ತಾರೆ ಅದೆಲ್ಲವನ್ನು ನೋಡುತ್ತಾ ಕುಳಿತುಕೊಳ್ಳುವುದಾದರೆ ಇಂಥ ಪ್ರವೃತ್ತಿ ಇನ್ನು ಮುಂದೆ ಆಗುವುದಕ್ಕೆ ಬಿಡುವುದಿಲ್ಲ ಎಂದು ಹೇಳುವ ಧೈರ್ಯವನ್ನು ನಿಮ್ಮ ಸರಕಾರ ಮಾಡಲೇಬೇಕಾಗುತ್ತದೆ. ಈ ಕೆಲಸವನ್ನು ಸರಕಾರದವರು ಮಾಡಿದ್ದಾರೆಯೇ? ಕೃಷ್ಣೇಗೌಡರು ಕೊಡುವಂಥ ವರದಿಯ ಪ್ರಕಾರ ಈ ಎಸ್‌ಪಿ, ಡಿಸಿ, ಯವರ ಸಮಕ್ಷಮವೇ ನಮಗೆ ನೂರಾರು ಜನ ಹೊಡೆದರು, ಹಲ್ಲೆ ಮಾಡಿದರು, ಅಂತ ಇದನ್ನು ಅವರು ಹಾಸ್ಪಿಟಲ್‌ಗೆ ಕೊಡುವ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ಎಸ್‌ಪಿ, ಡಿಸಿ,ಗಳು ಇದನ್ನು ನೋಡಿಕೊಂಡು ಸುಮ್ಮನೆ ಏತಕ್ಕಾಗಿ ಇದ್ದರು? ಒಂದು ವೇಳೆ ಅಲ್ಲಿಯ ವಾತಾವರಣವನ್ನು ಕಂಟ್ರೋಲ್ ಮಾಡಲು ಇನ್ನೂ ಹೆಚ್ಚಿನ ಸಿಬ್ಬಂದಿಯನ್ನು ತರಿಸುವಲ್ಲಿ ಸ್ವಲ್ಪ ಕಾಯಬೇಕಾಗುತ್ತದೆ ಎಂದು ಹೇಳುವುದಾದರೆ ಅರ್ಥವಿದೆ. ಆದರೆ ಅದು ಅವಿರತವಾಗಿ ಮುಂದುವರಿದುಕೊಂಡು ಹೋಯಿತು. ಈ ಸಂದರ್ಭದಲ್ಲಿ ಅಧಿಕಾರಿಗಳು ಕೈಕಟ್ಟಿಕೊಂಡು ಕುಳಿತಿರಲು ಕಾರಣ ಏನು ಎಂಬುದನ್ನು ನಾನು ಕೇಳಬಯಸುತ್ತೇನೆ. ಮತ್ತೊಂದು ವಿಚಾರ, ಒಬ್ಬ ಸಚಿವರಾಗಿ ಅಧಿಕಾರಿಯ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದೀರಿ, ಆ ಕಾರಣಕ್ಕಾಗಿ ಅಧಿಕಾರಿಯ ದಾಖಲೆಗಳನ್ನು ಪರಾಂಬರಿಸಿ ನೋಡಬೇಕು. 1987ರಲ್ಲಿಯೂ ಸಹ ಇದೇ ರೀತಿಯಲ್ಲಿ ಇದೇ ಆರ್‌ಎಫ್‌ಓ ಬಗ್ಗೆ ಒಂದು ಸುಳ್ಳು ಮರ್ಡರ್ ಕೇಸನ್ನು ಹಾಕಿದ್ದರು. ಆ ಬಗ್ಗೆ ಇರುವ ಸಿಓಡಿ ತನಿಖೆಯ ವರದಿಯನ್ನು ಈ ಸದನದ ಮುಂದೆ ಇಡಿ, ನನಗೆ ಗೊತ್ತಿರುವ ಮಾಹಿತಿಗಳ ಪ್ರಕಾರ ಯಾವ ಪೊಲೀಸ್ ಅಧಿಕಾರಿಗಳು ಎಫ್‌ಐಆರ್, ಚಾರ್ಜ್‌ಶೀಟ್ ಹಾಕಿ ಈ ಅರಣ್ಯ ಇಲಾಖಾ ಅಧಿಕಾರಿಯನ್ನು ಇನ್‌ವಾಲ್ವ್ ಮಾಡುವಂಥ ಪ್ರಯತ್ನ ಮಾಡಿದ್ದಾರೆ, ಆ ಪೊಲೀಸ್ ಅಧಿಕಾರಿಗಳಿಗೆ ಈ ಸಿಓಡಿ ರಿಪೋರ್ಟ್‌ನಲ್ಲಿ ಛೀಮಾರಿ ಹಾಕಿದ್ದಾರೆ, ಅದನ್ನು ತಾವು ನೋಡಬೇಕು. ಯಾರೋ ಜಿಂಕೆ ಕೊಂದವನು ಅದನ್ನು ಹಿಡಿದುಕೊಂಡು ಬಂದವನು ಒಬ್ಬ ಗಾರ್ಡ್, ಆತ ಒಬ್ಬನನ್ನು ಕೊಂದುಬಿಟ್ಟ ಅಂಥವನ ಮೇಲೆ ಕ್ರಮ ತೆಗೆದುಕೊಳ್ಳಲು ಯಾರೂ ಬೇಡ ಎಂದು ಹೇಳಲಾರರು. ಆದರೆ ಆರ್‌ಎಫ್‌ಓ.ರವರನ್ನು ಅದರಲ್ಲಿ ಇನ್‌ವಾಲ್ವ್ ಮಾಡಿದರು. ಬಹಳ ವರ್ಷಗಳಿಂದ ವ್ಯವಸ್ಥಿತವಾಗಿ ಯಾರು ತುಂಬಾ ಬಿಗಿಹಿಡಿದುಕೊಂಡು ಕೆಲಸ ಮಾಡುವ ಅಧಿಕಾರಿಗಳ ಮೇಲೆ, ಅವನನ್ನು ಹೇಗಾದರೂ ಮಾಡಿ ಸ್ಥಾನಾಂತರ ಮಾಡಬೇಕೆಂದು ಷಡ್ಯಂತರವನ್ನು ನಡೆದುಕೊಂಡು ಬಂದು ಅದನ್ನು ಮುಂದುವರಿಸಿಕೊಂಡು ಬಂದಿದ್ದಾರೆ, ಸರಕಾರ ಕೂಡ ಈ ಬಗ್ಗೆ ಹೆಚ್ಚು ಗಮನಹರಿಸಿದ್ದೇನೆ ಅದಕ್ಕೇ ಬೆಂಬಲವಾಗಿ ನಿಲ್ಲತಕ್ಕಂಥ ಪ್ರವೃತ್ತಿಯನ್ನೇನು ನಡೆಸುತ್ತಾ ಇದ್ದಾರೆ, ಅದು ಸರಿಯಲ್ಲ ಎಂಬ ಮಾತನ್ನು ಹೇಳಬಯಸುತ್ತೇನ. ಅಧಿಕಾರಿಗಳು ಮಾಡುವಂಥ ಎಲ್ಲಾ ತಪ್ಪುಗಳಿಗೂ ಬೆಂಬಲವಾಗಿ ನಾವು ಮಾತನಾಡುತ್ತೇವೆ ಎಂಬ ಅರ್ಥದಲ್ಲಿ ಮಾತನಾಡುತ್ತಿಲ್ಲ. ಈ ರೀತಿಯಾಗಿ ವ್ಯವಸ್ಥಿತವಾಗಿ ಬೆಂಕಿ ಹಚ್ಚಿ, ಲೂಟಿ ಮಾಡಿ ಸುಮಾರು 25 ಸಾವಿರ ಹೆಕ್ಟೇರ್‌ಗಳಷ್ಟು ಜಮೀನಿನ ಅರಣ್ಯ ಹಾಳಾಗಿಹೋದರೂ ಸಹ ರಾಜ್ಯದ ಮುಖ್ಯಮಂತ್ರಿಯವರು ಅಲ್ಲಿಗೆ ಹೋಗಲು ಬಿಡುವು ಮಾಡಿಕೊಂಡಿಲ್ಲ. ಒಂದು ಜವಾಬ್ದಾರಿ ಇರತಕ್ಕಂಥ ಸರಕಾರ, ಮುಖ್ಯಮಂತ್ರಿಗಳು ಎಲ್ಲೆ ಇದ್ದರೂ ಸಹ ಈ ರೀತಿಯಲ್ಲಿ 643 ಕಿ.ಮೀ. ಚದರ ಅರಣ್ಯವನ್ನು ಪ್ರಖ್ಯಾತವಾಗಿರತಕ್ಕಂಥ ಅರಣ್ಯವನ್ನು ಬೆಂಕಿಗೆ ಆಹುತಿ ಮಾಡುತ್ತಿದ್ದಾರೆ ಎಂದು ತಿಳಿದ ತತ್‌ಕ್ಷಣವೇ ಅಲ್ಲಿಗೆ ಹೋಗಿ ಸ್ಥಳ ತನಿಖೆ ಮಾಡಿ ಆ ಬೆಂಕಿಯನ್ನು ನಂದಿಸುವಲ್ಲಿ ತೀವ್ರ ಕ್ರಮವನ್ನು ತೆಗೆದುಕೊಂಡಿದ್ದರೆ ಈ ರೀತಿಯಾಗಿ ಸುಟ್ಟುಹೋಗುವ ಅಬಯಾರಣ್ಯವನ್ನು ಕಾಪಾಡಬಹುದಾಗಿತ್ತು.

ಆದರೆ ನೀವು ಮೂಕಪ್ರೇಕ್ಷಕರಾಗಿ ನೀವು ನಡೆದುಕೊಂಡಿದ್ದೀರಿ? ಇನ್ನು ನೂರಾರು ವರ್ಷ ಬೇಕು ಆ ಸ್ಥಿತಿಗೆ ಪುನಃ ಅದನ್ನು ತರುವುದಕ್ಕೆ ಇವತ್ತಿನ ಬೆಂಕಿಗಾಹುತಿಯಾದ ಸಂದರ್ಭ ಏನಿದೆ, ಅನೇಕ ವನ್ಯಜೀವಿಗಳಿಗೆ ಸಂತಾನವೃದ್ಧಿಸುವ ಕಾಲ, ಮರಿಗಳನ್ನು ಹೊತ್ತಿರುವುವು ಬೇಗ ಓಡಲಾಗಲಿಲ್ಲ, ಅಪಾರ ಸಂಖ್ಯೆಯ ಜಿಂಕೆ ಕಡವೆ ಇವೆಲ್ಲ ಮರಿಹಾಕಿರುವ ಸಂದರ್ಭ, ಹುಲಿಚಿರತೆಗಳು ಮರಿಹಾಕಿರುವ ಕಾಲ ಇದು, ಎಷ್ಟು ಪ್ರಾಣಿಗಳು ಈ ಬೆಂಕಿಗೆ ಆಹುತಿಯಾಗಿದೆ ನೋಡಿದ್ದೀರಾ? ಇದಕ್ಕೆ ಬೆಲೆ ಕಟ್ಟಲಿಕ್ಕೆ ಸಾಧ್ಯ ಇದೆಯೇ? ಸರ್ಕಾರಕ್ಕೆ ಇದಕ್ಕಿಂತ ಪ್ರಮುಖ ಸಂಗತಿ ಏನಿತ್ತು, ಒಂದು ವಾರ ಕಾಲ ಸತತವಾಗಿ ಬೆಂಕಿಹತ್ತಿ ಉರಿಯಿತಲ್ಲ ಅದನ್ನು ತಡೆಯುವ ಪ್ರಯತ್ನ ಏನಾಯಿತು? ಅದಕ್ಕಾಗಿ ನಾನು ಹೇಳುವುದು, ಸತ್ಯಸಂಗತಿಗಳು ಹೊರಬರಬೇಕಾದರೆ ನಾನು ಕೇಳಿದ ಮಾಹಿತಿಗಳನ್ನು ಒದಗಿಸಿಕೊಡುವ ಪ್ರಯತ್ನ ಮಾಡಿ ಇಂಟಲಿಜೆನ್ಸ್ ವರದಿ ಮತ್ತು ಮರಣೋತ್ತರ ವರದಿ ಏನಿದೆ ಅದನ್ನು ಕೊಡಿ. ಸ್ಥಳದಲ್ಲಿ ಮಾಡಲಾದ ಮಹಜರ್ ನಮಗೆ ಕೊಡಿ. ಇನ್ನೂ ಹೆಚ್ಚಿನ ಮಾಹಿತಿ ತಗೊಂಡು ಈ ರೀತಿ ಆಗಬಾರದು, ಕಾಡು ರಕ್ಷಣೆ ಮಾಡಬೇಕೆಂಬ ಕಳಕಳಿ ನಿಮಗಿದ್ದರೆ ಒಂದು ಸದನದ ಸಮಿತಿ ಮಾಡಿ ಸತ್ಯಸಂಗತಿ ತರಿಸಿಕೊಳ್ಳುವ ಪ್ರಯತ್ನವನ್ನು ಮಾಡಿ ಯಾರು ಸಿಓಡಿ ಅಧಿಕಾರಿಗಳು? ನಿಮ್ಮ ಸರ್ಕಾರದ ಈ ಪರಿಸ್ಥಿತಿಯಲ್ಲಿ ಯಾರಾದರೂ ಸಿಓಡಿ ಅಧಿಕಾರಿ ಪ್ರಾಮಾಣಿಕವಾಗಿ ಕೆಲಸ ಮಾಡಲು ಸಾಧ್ಯವೇ? ಇಷ್ಟೊಂದು ಪ್ರಭಾವ ಅಧಿಕಾರಿಗಳ ಮೇಲೆ ಬೀರ್ತಾ ಇದ್ದೀರಿ, ತಾವು ಹೇಳಿದಂಥ ವರದಿ ಬರಬೇಕೆಂದು ಕೆಲಸ ಮಾಡುತ್ತಿರುವ ಕಾಲದಲ್ಲಿ ಯಾವ ಸಿ.ಓಡಿ ಅಧಿಕಾರಿ ನಿಮ್ಮ ವಿರುದ್ಧ ಪ್ರಾಮಾಣಿಕ ವರದಿ ಕೊಟ್ಟು ತಾನು ಗುಲ್ಬರ್ಗ ಬೆಳಗಾಂಗೆ ಹೋಗಲು ಇಷ್ಟಪಡುತ್ತಾನೆ? ಅದು ಆಗದೇ ಇರೋ ಸಂಗತಿ ಅದಕ್ಕಾಗಿ ನಾನು ಒತ್ತಾಯಮಾಡುವುದು ಇನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು, ತಪ್ಪಿತಸ್ಥರು ಯಾರೇ ಇರಲಿ ಉಗ್ರ ಕ್ರಮ ತೆಗೆದುಕೊಳ್ಳುವ ಕ್ರಮ ಈ ಸರ್ಕಾರ ಮಾಡಿ ಅರಣ್ಯ ಉಳಿಸುವ ಕೆಲಸ ಮುಂದಾದರೂ ಮಾಡಬೇಕು. ಯಾರು ಅಲ್ಲೊಬ್ಬ ಇಲ್ಲೊಬ್ಬ ಪ್ರಾಮಾಣಿಕ ಅಧಿಕಾರಿ ಈ ರೀತಿ ಕೆಲಸ ಮಾಡ್ತಾಇದ್ದಾನೆ ಇವನ ವಿರುದ್ಧ ಷಡ್ಯಂತರ ಮಾಡುವ ಶಕ್ತಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೇ ವಿನಹಾ ಅಂತಹ ಉನ್ನತ ಪ್ರಾಮಾಣಿಕ ಅಧಿಕಾರಿಗಳನ್ನೇ ಧೈರ್ಯವಾಗಿ ಕೆಲಸ ಮಾಡೋದಿಕ್ಕೆ ಆಗದೇ ಇರೋವಂತ ವಿಚಿತ್ರ ಪರಿಸ್ಥಿತಿ ತರುವ ಕೆಲಸ ಈ ಸರ್ಕಾರ ಮಾಡ್ತಾಇದೆ ಇದು ಸರಿಯಲ್ಲ ಎಂದು ಹೇಳುತ್ತಾ ಮತ್ತೊಮ್ಮೆ ಇದನ್ನು ಸಿಬಿಐ ತನಿಖೆಗೊಳಪಡಿಸಬೇಕು, ಸದನದ ಸಮಿತಿ ಮಾಡಬೇಕು ಎಂದು ಹೇಳುತ್ತ ನನ್ನ ಮಾತು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ : (ಚಾಮರಾಜನಗರ) ಅಧ್ಯಕ್ಷರೇ, ಈ ಪ್ರಕರಣ ಇಡೀ ಮಾನವ ಕುಲಕ್ಕಾದ ಅಪಚಾರ. ನಾನು ನಾಗರಹೊಳೆಯಲ್ಲಿ ನಡೆದಿರುವ ದೃಶ್ಯ ನೋಡಲು ಹೋಗಿದ್ದೆ. ಸಂಪೂರ್ಣ ಸ್ಮಶಾನಮೌನ ಆವರಿಸಿದೆ. ನಾನು ಬಹಳ ನಿಸರ್ಗ ಪ್ರೇಮಿ, ವನ್ಯಮೃಗಗಳ ಬಗ್ಗೆ ಅಪಾರವಾದ ಚಿಂತನೆ ಇರುವವನು. ಹಿಂದೆ ಇದೇ ನಾಗರಹೊಳೆಯಲ್ಲಿ ಆನೆಗಳು ಸುಟ್ಟುಹೋದಾಗ ನಾನು ಅನೇಕ ಬಾರಿ ನಾಗರಹೊಳೆಗೆ ಹೋಗಿದ್ದೇನೆ, ಈ ಸಾರಿ ಹೋದಾಗ ಕಂಡ ದೃಶ್ಯವೇ ಬೇರೆ, ಹಿಂದಿನ ದೃಶ್ಯವೇ ಬೇರೆ. ಆ ಲವಲವಿಕೆ, ಸುಂದರ ಅಭಯಾರಣ್ಯ, ಅದರ ಪರಿಸರ, ವ್ಯವಸ್ಥೆ ಎಷ್ಟು ನಾಜೂಕಾಗಿ ರಮಣೀಯವಾಗಿರುತ್ತೆಂದು ವರ್ಣನೆ ಮಾಡಲು ಸಾಧ್ಯವಿಲ್ಲ. ಇವತ್ತು ಅದೇ ಅಭಯಾರಣ್ಯ ಬೆಂಕಿಗಾಹಿತಿಯಾಗಿ ಕೆಲವು ತಜ್ಞರ ಅಭಿಪ್ರಾಯ ನಾನು ಕೇಳಿದಾಗ ಇನ್ನು ಶತಮಾನ ಕಳೆದರೂ ಆ ರಮ್ಯತೆ ಬರುವುದಿಲ್ಲವೆಂದು ಹೇಳಿದ್ದಾರೆ. ಒಂದು ಕಾಲು ಕಳೆದುಕೊಂಡವನಿಗೆ ಹೊಸ ಕಾಲು ಹಾಕಿ ನಡೆಯುವ ವ್ಯವಸ್ಥೆ ಬರಬೇಕಾದರೆ ಸ್ವಲ್ಪ ಕಾಲ ಕಾಯಬೇಕು ಹಾಗೆ ಇದಕ್ಕೆ ಕನಿಷ್ಟ 30 ವರ್ಷವಾದರೂ ಬೇಕು. ಮುಂಚಿನ ನಾಗರಹೊಳೆ ಪರಿಸ್ಥಿತಿ ನೋಡಲು ಕನಿಷ್ಟ 30 ವರ್ಷಗಳಾದರೂ ಬೇಕು. ಇದರ ನಷ್ಟ ಎಷ್ಟು? ಇದಕ್ಕೆ ಬೆಲೆ ಕಟ್ಟಲು ಆಗುವುದಿಲ್ಲ, ಯಾರಿಗೂ ಆಗುವುದಿಲ್ಲ, 100 ಕೋಟೀನೇ 150,200 ಕೋಟೀನೇ? ಹೇಗೆಂತ ನೀವು ಕೇಳಬಹುದು? ಮರಗಳು ಸುಟ್ಟಿರುವ ಲೆಕ್ಕವಲ್ಲ, ಪ್ರಾಣಿಗಳ ಸುಟ್ಟಿರುವ ಲೆಕ್ಕವಲ್ಲ, ಎಲ್ಲವೂ ಸೇರುತ್ತೆ. ಪರಿಸರ ಗಾಳಿ ಅಮ್ಲಜನಕ ಪ್ರತಿಯೊಂದನ್ನು ಲೆಕ್ಕಹಾಕಿದಾಗ ಬೆಲೆಯನ್ನೇ ಕಟ್ಟಲು ಆಗದಂಥ ಪರಿಸ್ಥಿತಿ ನಾಗರಹೊಳೆಯಲ್ಲಿದೆ. ಸರ್ಕಾರ ಜನತೆ ವನ್ಯಮೃಗಗಳ ಬಗ್ಗೆ ಅರಣ್ಯದ ರಮಣೀಯತೆ ಬಗ್ಗೆ ಎಷ್ಟು ಕಾಳಜಿ ವಹಿಸಿದ್ದೇವೆ,

ಸರ್ಕಾರಕ್ಕೆ ಇದರ ಬಗ್ಗೆ ಪ್ರೇಮ ವಿಶ್ವಾಸ ಅಭಿಮಾನ ಇದೆ, ಇಂತಹ ಅರಣ್ಯಪ್ರದೇಶ ಉಳಿಸೋದರಲ್ಲಿ ಸರ್ಕಾರಕ್ಕೆ ಪ್ರಾಮಾಣಿಕತೆ ಎಷ್ಟಿದೆ? ನನಗನ್ನಿಸುತ್ತದೆ ನಿಮ್ಮ ಸರ್ಕಾರಕ್ಕೆ ಯಾವ ಪ್ರಾಮಾಣಿಕತೆಯೂ ಇಲ್ಲ, ನಿಸರ್ಗದ ಬಗ್ಗೆ ಚಿಂತನೆ ಇಲ್ಲ. ನಿಸರ್ಗ ಅಂದರೆ ನಿಮಗೆ ಗೊತ್ತೇ ಇಲ್ಲ. ವನ್ಯಮೃಗಗಳು ನೀವೇ ಆಗಿದ್ದೀರಿ, ಬೇರೆ ಮೃಗಗಳ ವಿಚಾರವೇ ನಿಮಗೆ ಗೊತ್ತಿಲ್ಲ. ನನಗೆ ಆಶ್ಚರ್ಯವಾಗುತ್ತೆ ಇಡೀ ಕರ್ನಾಟಕದಲ್ಲಿ ಇದೊಂದೇ ಕಾಡಿನ ನಾಶ ಅಲ್ಲ, ಕಾಡು ವನ್ಯಮೃಗಗಳ ನಾಶ ನಿರಂತರವಾಗಿ ನಡೆಯುತ್ತಿದೆ. ಇದನ್ನು ತಡೆಹಿಡಿಯುವದಕ್ಕೆ ತಮ್ಮಲ್ಲಿ ಏನಾದರೂ ಶಕ್ತಿ ಇದೆಯೇ? ಖಂಡಿತ ನಿಮ್ಮಲ್ಲಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಈ ವನ್ಯಮೃಗಗಳ ನಾಶ ಆಗ್ತಾ ಇಲ್ಲವಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಕಾಡಲ್ಲಿರುವ ಮೃಗಗಳಿಗೆ ರಕ್ಷಣೆ ಕೊಡಬೇಕು, ಆದರೆ ಇಲ್ಲಿರುವ ಇವಕ್ಕೆ ರಕ್ಷಣೆ ಕೊಡೋದು ಹ್ಯಾಗೆ? ಏನಾದರೂ ಸ್ವಲ್ಪ ಉಪಾಯ ಸೂಚಿಸ್ತೀರಾ?

ಡಾ. ಎನ್.ಬಿ. ನಂಜಪ್ಪ : ಮಾನ್ಯ ವಾಟಾಳ್ ನಾಗರಾಜ್‌ರವರೇ, ನೀವು ಏನನ್ನು ಬೇಕಾದರೂ ಹೇಳಿ. ನೀವು ಈ ಪದಗಳನ್ನು ಏನು ಉಪಯೋಗಿಸುತ್ತೀರಲ್ಲಾ, ಈಗ ಒಂದು-ಎರಡು-ಮೂರು-ನಾಲ್ಕು-ಐದು ಪದಗಳನ್ನು ನೀವು ಉಪಯೋಗಿಸಿದರಲ್ಲಾ, ಈ ಪದಗಳನ್ನು ಉಪಯೋಗಿಸತಕ್ಕಂಥ ಈ ಪದಗಳನ್ನು ಎಂಟೈರ್ ನೀವು ಮಾನವ ಅಂತ ಏನೂ ಶುರು ಮಾಡಿದರಲ್ಲಾ, ಎಂಟೈರ್ ಮಾನವ ಜನಾಂಗಕ್ಕೆ ಸೇರತಕ್ಕಂಥ ಪದಗಳನ್ನು ನೀವು ಉಪಯೋಗಿಸಿದಿರಿ. ಅವು ಈ ಒಂದು ವರ್ಗಕ್ಕೆ ಸೇರಿದಂಥ ಪದಗಳು ಏನು ಅಲ್ಲವಲ್ಲ ಆ ಪದಗಳು. ನೀವು ಉಪಯೋಗಿಸಿದವು.

ಶ್ರೀ ವಾಟಾಳ್ ನಾಗರಾಜ್ : ಮನುಷ್ಯರು ಮನುಷ್ಯರಾಗಿದ್ದರೆ ಮನುಷ್ಯರು ಎಂದು ಹೇಳುತ್ತೇವೆ. ಮಾನವ ಪ್ರಾಣಿಯ ರೀತಿಯಾಗಿ ಹೊರಟಾಗ ಅವನನ್ನು ಪ್ರಾಣಿಯಂತಲೇ ಹೇಳಬೇಕು. ಬೇರೆ ಮತ್ತೆ ಏನು ಹೇಳುವುದಕ್ಕೆ ಸಾಧ್ಯ? ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ತಾವು ಅಲ್ಲಿಗೆ ಒಂದು ನೋಡಿ.

ಡಾ. ಎನ್.ಬಿ. ನಾಗಪ್ಪ : ಬೇಡ. ಮನುಷ್ಯರು ಎಂದರೆ ನೀವುಗಳು. ರೂಲಿಂಗ್ ನಲ್ಲಿರತಕ್ಕಂಥವರು ಸರ್ಕಾರದಲ್ಲಿರುವ ನಾವೆಲ್ಲಾ ಪ್ರಾಣಿಗಳು ಎಂದು ನಿಮ್ಮ ಅರ್ಥವೇ?

ಶ್ರೀ ವಾಟಾಳ್ ನಾಗರಾಜ್ : ನಾನು ಕಾಂಗ್ರೆಸ್‌ನವರು ಪ್ರಾಣಿಗಳು ಎಂದು ಹೇಳಲೇ ಇಲ್ಲ. ನಾನು ಸರ್ಕಾರ ಎಂದು ಹೇಳುತ್ತಿದ್ದೇನೆ. ನಾಗಪ್ಪನವರಿಗೆ ನಾನು ಎಂದು ಆ ರೀತಿ ಹೇಳುವುದಕ್ಕೆ ಹೋಗುವುದಿಲ್ಲ.

ಡಾ. ಎನ್.ಬಿ. ನಾಗಪ್ಪ : ನಾನು ಕಾಂಗ್ರೆಸ್ ಎಂದು ಕೇಳಲಿಲ್ಲ. ಸರ್ಕಾರ ಎಂದು ಹೇಳಿದೆ.

ಶ್ರೀ ಬಸವರಾಜ ರಾಯರೆಡ್ಡಿ : ವಿಜ್ಞಾನದ ಪ್ರಕಾರ ಮಾನವ ಪ್ರಾಣಿಯಲ್ಲವೇ?

ಡಾ. ಎನ್.ಬಿ. ನಾಗಪ್ಪ : ನೀವೆಲ್ಲರೂ ಪ್ರಾಣಿಗಳು ಎಂದು ತಿಳಿದುಕೊಂಡರೆ ಪ್ರಾಣಿಯ ರೀತಿಯಲ್ಲಿ ಮಾತನಾಡುತ್ತಿದ್ದರೆ ಅದಕ್ಕೆ ನಾವೇನು ಉತ್ತರವನ್ನು ಹೇಳುವುದಕ್ಕಾಗುತ್ತದೆ?

Dr. N.B. Nanjappa : You are the representative of the people, how can that you are also included?

ಉಪಾಧ್ಯಕ್ಷಿಣಿಯವರು : ಅವರು ಮುಗಿಸುತ್ತಾರೆ.

(ಗೊಂದಲ)

ಡಾ. ಎನ್.ಬಿ. ನಾಗಪ್ಪ : ನಾನು ಇನ್ನೂ ಮುಗಿಸಿಲ್ಲ. ಒಂದು ನಿಮಿಷ ಮೇಡಂ. ಈಗ ನಮ್ಮ ವಿರೋಧ ಪಕ್ಷದ ನಾಯಕರು ಮತ್ತೆ ಯಡಿಯೂರಪ್ಪನವರು ವಾಟಾಳ್ ನಾಗರಾಜ್‌ರವರು ಎಲ್ಲರೂ ಮಾತನಾಡಿದ್ದಾರೆ. ಅವರು ಭಾಷಣ ಮಾಡಿ ಕೊನೆಗೆ ನಮ್ಮ ಕೈಗೆ P.M. Report ಕೊಡಿ Inquest ರಿಪೋರ್ಟ್ ಕೊಡಿ, ಮತ್ತೆ ವರದಿ ಕೊಡಿ ಎಂದು ಹೇಳಿದ್ದಾರೆ without records on hand these people are asking.....

ಈ ಸರ್ಕಾರಕ್ಕೆ ಕಾಳಜಿ ಇಲ್ಲ ಎಂತಲೇ ಅವರು ಹೇಳುತ್ತಿರುವುದು. ರಿಪೋರ್ಟ್ ಬಂದಮೇಲೆ ಇವರು ಏತಕ್ಕೆ ಮಾತನಾಡಬಾರದು?

ಶ್ರೀ ವಾಟಾಳ್‌ನಾಗರಾಜ್ : ನಾನು ಇನ್ನೂ ಆ ರಿಪೋರ್ಟ್‌ಗೆ ಹೋಗಿಲ್ಲ. ಶವಸಂಸ್ಕಾರಕ್ಕೆ ರಿಪೋರ್ಟ್‌ಗೆ ಹೋಗಿಲ್ಲ. ನಾನು ಮಾತನಾಡಿಲ್ಲ ನಾಗಪ್ಪನವರೇ.

ಎನ್.ಬಿ. ನಾಗಪ್ಪ : ಅವರುಗಳು without records on hand ಮಾತನಾಡುತ್ತಿದ್ದಾರೆ ಒಬ್ಬರು ಚಿಪ್ಪನೋ, ತಿಮ್ಮನೋ ಎಂದು ಹೇಳುತ್ತಿದ್ದಾರೆ. ಒಬ್ಬರು ಚಿನ್ನಪ್ಪ ಎಂದು ಹೇಳುತ್ತೀರಾ. ಮತ್ತೊಬ್ಬರು ತಿಮ್ಮ ಎಂದು ಹೇಳುತ್ತಾರೆ.

ಉಪಾಧ್ಯಕ್ಷಣಿಯವರು : ಮಾನ್ಯ ನಾಗಪ್ಪನವರೇ ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಅಭಯಾರಣ್ಯಗಳು ರಾಷ್ಟ್ರೀಯ ಉದ್ಯಾನಗಳನ್ನು ಕಾಪಾಡಿಕೊಂಡು, ಬೆಳೆಸತಕ್ಕಂಥದ್ದು ನಮ್ಮೆಲ್ಲರ ಕರ್ತವ್ಯ.

ಇವತ್ತು ನಮ್ಮ ಅರಣ್ಯವನ್ನು ಉಳಿಸುವುದಕ್ಕೆ ಬೇಕಾದಷ್ಟು ಕಾನೂನಿನಲ್ಲಿ ಇವರಿಗೆ ಬಹಳ ಬಲ ಇದೆ. ಆ ಕಾನೂನಿನ ಪರಿಮಿತಿಯಿಂದ ಏನು ಬೇಕಾದರೆ ಉಳಿಸಬಹುದು. ಆದರೆ, ನಿಮಗೆ ಕಾನೂನನ್ನು ಜಾರಿಮಾಡುವುದಕ್ಕೆ ನಿಮಗೆ ಶಕ್ತಿ ಇಲ್ಲವೋ? ನಿಮಗೆ ಇದೆ, ಏತಕ್ಕೆ ಮಾಡಲಿಲ್ಲ? ನಿಮಗೆ ಪ್ರಮಾಣಿಕತೆ ಇಲ್ಲವೋ? ಇವತ್ತು ನಾನು ಹೇಳುತ್ತಿದ್ದೇನೆ ಇದು ಎರಡು ಭಾಗವಾಗಿದೆ. ಒಂದು ಚಿಪ್ಪನ ಸಾವು, ಮತ್ತೊಂದು ಬೆಂಕಿ. ಇದು ನಿಜ, ಎರಡು ಭಾಗ ಈ ಎರಡು ಭಾಗದಲ್ಲೂ ನಾವು ಇವತ್ತು ಅರಣ್ಯರೋಧನವನ್ನು ಮಾಡುತ್ತಿದ್ದೇವೆ. ಅಂತಿಮವಾಗಿ ಏನು ಅಂದರೆ ಸೊನ್ನೆ! ಅರಣ್ಯರೋಧನ ನನ್ನ ಮನಸ್ಸಿನಲ್ಲಿ ನೋವಾಗುತ್ತಿದೆ. ಸಿ.ಓ.ಡಿ. ತನಿಖೆಯಿಂದ ವರದಿ ಬಂದರೂ ಏನಾಗುವುದಿಲ್ಲ. ಕೆಟ್ಟು ಹೋಗಿರತಕ್ಕಂಥ ಮರಗಿಡಗಳು ಸೌಂದರ್ಯ ಇದು ಯಾವುದು ಮತ್ತೆ ಬರುತ್ತದೆಂದು ನಾನಂತೂ ಅಂದುಕೊಂಡಿಲ್ಲ. ಇದನ್ನು ತಡೆಹಿಡಿಯುವುದಕ್ಕೆ ಕ್ರಮ ಬಹಳ ಇತ್ತು. ಎಚ್ಚರ ಬಹಳ ಇತ್ತು. ಎಚ್ಚರ ವಹಿಸುವುದಕ್ಕೆ ಆಗಲಿಲ್ಲ. ಎಚ್ಚರದಲ್ಲಿ ಸರ್ಕಾರ ನಿಜವಾಗಿಯೂ ತಪ್ಪಿದೆ. ತಮಗೆ ಕಾಯಿದೆಯ ಪ್ರಕಾರ ಕಾಯ್ದಿಟ್ಟ ಅರಣ್ಯ ಪ್ರದೇಶಗಳು ಅಭಯಾರಣ್ಯಗಳು, ಇದಕ್ಕೆ ಅನೇಕ ಕಾನೂನಿನ ಬಲ ನಿಮಗೆ ಇದೆ. ಸಂಜೆ 6 ಗಂಟೆಯಿಂದ ಬೆಳ್ಳಿಗ್ಗೆ 5 ಗಂಟೆಯವರೆಗೆ ಕಾಡಿಗೆ ಯಾರೂ ಹೋಗಬಾರದು. ಶಬ್ದವನ್ನು ಮಾಡಬಾರದು. ಬೆಂಕಿಯನ್ನು ಹಚ್ಚಬಾರದು. ಹೀಗೆ ಅನೇಕ ಕಾಯಿದೆ ನಿಮ್ಮಲ್ಲಿ ಇದೆ. ನೀವು ಈ ಕಾಯಿದೆಗಳನ್ನು ಇವತ್ತಿನವರೆಗೆ ಜಾರಿ ಮಾಡಿದ್ದಿರೋ? ಮಾಡುವುದಕ್ಕೆ ಸಾಧ್ಯ ಇದೆಯೋ ಖಂಡಿತವಾಗಿಯೂ ಇದುವರೆಗೂ ಮಾಡಿಲ್ಲ.

ಉಪಾಧ್ಯಯಕ್ಷಣಿಯವರು :— ಈಗ ನಾಗರಹೊಳೆ . . . .

ಶ್ರೀ ವಾಟಾಳ್ ನಾಗರಾಜ್ :— ನಾಗರಹೊಳೆಗೆ ಬರುತ್ತಿರುವುದು. ಈ ನಾಗರಹೊಳೆ ಇದು ಕೇವಲ ಇಡೀ ಮಾನವ ಕುಲವೇ ನಾಚುವಂತಹ ಪರಿಸ್ಥಿತಿ ಅಲ್ಲಿ ನಡೆದುಹೋಗಿದೆ. ಇಸ್ರೋ ತಜ್ಞರೆಲ್ಲಾ ಬಂದು ಅಲ್ಲಿ ನೋಡಿದ್ದಾರೆ. ಬೆಂಕಿಯು ಅಪಾರವಾಗಿ ಬಿದ್ದಿದೆ. ಪ್ರಾಣಿಗಳು ಆ ಬೆಂಕಿಯ ಸುತ್ತ ಬಂದಾಗ ಮಧ್ಯೆ ಪ್ರಾಣಿಗಳು ಸಿಕ್ಕಿ ಸತ್ತಿವೆ. ಸತ್ತಿಲ್ಲ ಅಂತ ಯಾರು ಧೈರ್ಯವಾಗಿ ಹೇಳುವುದಕ್ಕಾಗುವುದಿಲ್ಲ. ಎಷ್ಟು ಕಿ.ಮೀ. ದೂರ ಒಳಗಡೆ ಹೋಗಿ ನೋಡಿದ್ದೀರಿ? ಹಾಗೆ ಪರಿಶೀಲನೆ ಮಾಡಿದ್ದೀರಾ? ಹೋಗುತ್ತಾ ಹೋಗುತ್ತಾ ಎಲ್ಲಿ ಹೋದರೂ ಹೋದಕಡೆಯಲ್ಲೆಲ್ಲ ಬೆಂಕಿನೇ ಈ ಬೆಂಕಿಯನ್ನು ಹಚ್ಚಿದವರು ಯಾರು? ಇದು ಬಹಳ ಮುಖ್ಯ. ಬೆಂಕಿಯನ್ನು ಹಚ್ಚಿದವರು ಯಾರು? ಚಿಪ್ಪನನ್ನು ಕೊಂದವರು ಯಾರು? ಇಷ್ಟೊಂದು ಬೆಂಕಿಯನ್ನು ಹಚ್ಚುವುದಕ್ಕೆ ಇದರ ಹಿಂದೆ ಇರತಕ್ಕ ಶಕ್ತಿಯಾವುದು? ಇದು ಬಹಳ ಗಹನವಾಗಿ ಗಂಬೀರವಾಗಿ ಚರ್ಚೆ ಮಾಡಬೇಕಾದಂತಹ ವಿಚಾರವಾಗಿದೆ. ನಿಮ್ಮ ಅರಣ್ಯ ಇಲಾಖೆಯ ಪ್ರಾಚೀನ ಕಾರ್ಯಾಲಯ ಇವತ್ತು ಸುಟ್ಟು ಹೋಗಿದೆ. ಸುಮಾರು 70—80 ವರ್ಷದ ಕಡತಗಳೆಲ್ಲ ಸುಟ್ಟು ಬೆಂಕಿಗೆ ಹೋಗಿದೆ. ಬೆಂಕಿಯ ಆಹುತಿಯಾಗಿದೆ. ಒಂದು ಕಡತ ಸಹ ಇಲ್ಲ. ಆ ಕಡತಗಳನ್ನು ಸುಡತಕ್ಕ ಪ್ರಮೇಯ ಏನಿತ್ತು? ಪಕ್ಕದಲ್ಲಿಯೇ ನಿಮ್ಮ ಅರಣ್ಯ ಅಧಿಕಾರಿಯ ಮನೆ ಇದೆ, ಅವರ ಮನೆಗೆ ಬೆಂಕಿ ಹಾಕಿಲ್ಲ. ಆದರೆ ಈ ಕಾರ್ಯಾಲಯಕ್ಕೆ ಬೆಂಕಿಯನ್ನು ಹಾಕಬೇಕಾದರೆ ಇದರೊಳಗೆ ಇರತಕ್ಕ ಪ್ರಮುಖವಾದಂತಹ ಅಮೂಲ್ಯವಾದಂತಹ ಮುಖ್ಯವಾದಂತಹ ಆ ಕಡತಗಳಿಗೆ ಬೆಂಕಿ ಇರುವುದಕ್ಕೆ ಇದರ ಹಿಂದೆ ಏನಾದರೂ ಹಿನ್ನೆಲೆ ಇರಬಹುದು. ಅಲ್ಲವೆಂದು ಹೇಳಿದಾಗ ಕಾಡಿಗೆ ಬೆಂಕಿ ಹೇಗೆ ಹಚ್ಚಿಕೊಂಡು ಹೋಗಿದ್ದಾರೆಂದರೆ

ಕಾರಿನಲ್ಲಿ ಪೆಟ್ರೋಲ್ ತೆಗೆದುಕೊಂಡು ಹೆಜ್ಜೆ ಹೆಜ್ಜೆಗೂ ಪೆಟ್ರೋಲ್ ಎರಚುವುದು ಬೆಂಕಿ ಹಚ್ಚುವುದು, ಹೀಗೆ ಮಾಡಿದ್ದರೇ ಇವರನ್ನು ತಡೆಯುವವರು ಯಾರಾದರೂ ಒಬ್ಬರೂ ಕೂಡ ಇರಲಿಲ್ಲವೆ? ಕಾಡಿನಲ್ಲಿ ಇಂತಹ ಒಂದು ಪರಿಸ್ಥಿತಿ ಉದ್ಭವವಾಗಿ ನಾಗರಹೊಳೆ ಸಂಪೂರ್ಣವಾಗಿ ತನ್ನ ನೈಜತೆಯನ್ನು ಕಳೆದುಕೊಂಡಿದೆ. ಇನ್ನು ರೇಡಿಯೋ ಕಾಲರ್ ಬಗ್ಗೆ ಹೇಳಬೇಕೆಂದರೆ, ಇದರ ಬಗ್ಗೆ ಈಗ ದೊಡ್ಡ ವಾದ–ವಿವಾದ, ಜಿಜ್ಞಾಸೆಗಳು ನಡೆಯುತ್ತಿವೆ. ಸರ್ಕಾರದವರು ಅದಕ್ಕಾಕೆ ಅನುಮತಿ ಕೊಡಬೇಕು? ಬೇರೇ ಯಾವುದೋ ದೇಶದಲ್ಲಿ ಆ ರೀತಿ ಅನುಮತಿ ಕೊಟ್ಟಿದೆಯೆಂದು ನೀವು(ಸರ್ಕಾರ) ಸಹ ಅದಕ್ಕೆ ಅನುಮತಿ ಕೊಡುವುದರಿಂದ ಏನು ಪ್ರಯೋಜನವಾಗಿದೆ? ಇವೊತ್ತಿನವರೆವಿಗೂ ಎಷ್ಟು ಪ್ರಾಣಿಗಳು, ಹುಲಿಗಳು ಸತ್ತುಹೋಗಿವೆ ? ಅದರ ಬಗ್ಗೆ ಯಾರ ಮೇಲಾದರೂ ಜವಾಬ್ದಾರಿಯನ್ನು ಹೊರಿಸಿದ್ದೀರಾ? ಯಾರ ಮೇಲೆಯೂ ಹೊರಿಸಿಲ್ಲ. ಇನ್ನೂ ಕೂಡ ಹೊರಿಸಿಲ್ಲ. ಆ ಪ್ರಾಣಿಗಳು ಹಾಗೆಯೇ ಸತ್ತವು, ಇಲ್ಲವೇ ರಸ್ತೆಯಲ್ಲಿ ಸತ್ತವು ಮರದತ್ತ ಕಚ್ಚಾಡುತ್ತಾ ಸತ್ತಿತು ಎಂಬ ಈ ತರಹದ ವರದಿಗಳನ್ನು ಕೊಡುತ್ತಿದ್ದಾರೆಯೇ ಹೊರತು ಹುಲಿಗಳು ಎಷ್ಟು ಸಂಖ್ಯೆಯಲ್ಲಿ ಸತ್ತಿವೆ? ಹುಲಿಗಳ ಸಾವಿಗೆ ಕಾರಣರಾರು? ಎನ್ನುವುದನ್ನು ಇವೊತ್ತಿನವರೆವಿಗೂ ಪರಿಣಾಮಕಾರಿಯಾಗಿ ವಿವರಣೆಯನ್ನು ಕೊಡಲಿಲ್ಲ. ಇನ್ನೊಂದು ವಿಚಾರವೆಂದರೆ, ಕಳ್ಳ ಸಾಗಾಣಿಕೆದಾರರಿಂದ ಹಿಡಿದಂತ ಜೀಪೊಂದು ಅಲ್ಲಿತ್ತು. ಆ ಜೀಪನ್ನು ಸಹ ಈ ಗದ್ದಲದಲ್ಲಿ ತೆಗೆದುಕೊಂಡು ಹೋಗಬೇಕೆಂದು ಒಂದು ಗುಂಪು ಪ್ರಯತ್ನ ಪಟ್ಟಿದೆ ಆದರೆ, ಜೀಪು ಸ್ಟಾರ್ಟ್ ಆಗದೆ, ತಳ್ಳಲಾರದೆ ಅಲ್ಲಿಯೇ ಇದೆ. ಅದು ಕಳ್ಳ ಸಾಗಾಣಿಕೆದಾರರ ಜೀಪು. ಆ ಜೀಪಿಗೆ ಬೆಂಕಿ ಹಚ್ಚುವುದಕ್ಕೆ ಹೋಗಿದ್ದಾರೆ. ಆದರೆ, ಸಾಕ್ಷಿಗಳನ್ನೆಲ್ಲಾ ನಾಶ ಮಾಡತಕ್ಕಂತ ಒಂದು ಪಿತೂರಿ ನಡೆದಿದೆ. ಕಾಡಿಗೆ ಬೆಂಕಿ ಹಚ್ಚಿದ ನಂತರ ಕಾಡು ಪ್ರಾಣಿಗಳೆಲ್ಲಾ ಬೆಂಕಿಯ ಜ್ವಾಲೆಯನ್ನು ತಡೆಯಲಾರದೆ ಒಂದು ಮೂಲೆಗೆ ಹೋದವು. ಹಾಗೆ ಪ್ರಾಣಿಗಳೆಲ್ಲಾ ಮೂಲೆಗೆ ಹೋದಾಗ ವನ್ಯ ಮೃಗಗಳನ್ನು ಬೇಟೆಯಾಡುವವರಿಗೆ ಇದೊಂದು ಸುಲಭದ ಕೆಲಸವಾಯಿತು. ಆಗ ಪ್ರಾಣಿಗಳನ್ನು ಹೊಡೆದರು, ಕೊಂದರು ಅವರಿಗೆ ಬಹಳ ಸುಲಭವಾಗಿ ಕಾಡುಪ್ರಾಣಿಗಳ ಮಾಂಸ ಸಿಕ್ಕಿತು. ಈ ರೀತಿ ನಡೆದಿದೆ. ಏನು ಮಾಡಿದರೆಂದು ನಾನು ಹೇಳಿದರೆ ನೀವು ನೋವು ಪಡಬಾರದು. ಪ್ರಾಣಿಗಳನ್ನು ಕೊಂದ ನಂತರ ಏನು ಮಾಡುತ್ತಾರೆಂದು ತಮಗೆ ಗೊತ್ತಿದೆಯಲ್ಲಾ.

ಶ್ರೀ ಡಿ.ಬಿ. ಚಂದ್ರೇಗೌಡ :– ಈಗ ಬೆಂಗಳೂರಿನಲ್ಲಿ ಮಾಂಸದ ಬೆಲೆ 55 ರೂಪಾಯಿಗಳು. ನಾಗರಹೊಳೆಯಲ್ಲಿ 5 ರೂಪಾಯಿ ಇದೆ.

ಶ್ರೀ ವಾಟಾಳ್ ನಾಗರಾಜ್ : ಮಾಂಸದ ಬೆಲೆ ಏತಕ್ಕೆ ಇಳಿಯಿತೆಂಬುದು ತಮಗೆ ಗೊತ್ತಲ್ಲ ಅಲ್ಲಿ ಆದಂಥ ಪರಿಸ್ಥಿತಿಯನ್ನು ನೆನೆಸಿಕೊಂಡರೆ ಬಹಳ ಹೃದಯ ವೇದನೆಯಾಗುತ್ತದೆ. ತಾವು ಮತ್ತು ಇಡೀ ನಿಮ್ಮ ಸಚಿವ ಸಂಪುಟದ ಸದಸ್ಯರುಗಳೆಲ್ಲಾ ಆ ಸ್ಥಳಕ್ಕೆ ಹೋಗಿ ನೋಡಬೇಕು. ಬಹಳ ಭಯಾನಕವಾದಂಥ ದೃಶ್ಯ ಅಲ್ಲಿದೆ. ಅದನ್ನು ನೋಡಿದರೆ ಬಹಳ ನೋವಾಗುತ್ತದೆ. ನಾನೇ ಸುಮಾರು 20–30 ಮೈಲಿ ದೂರ ಒಳಗಡೆ ಹೋದೆ. ಎಲ್ಲಿ ಹೋದರೂ ಕೆಳಗಡೆ ಬೆಂಕಿ ಬಿದ್ದಿರುವುದು ನಿಜ. ಬೆಂಕಿಯಿಂದ ಮಣ್ಣು ಬಹಳವಾಗಿ ಸುಟ್ಟಿದೆ. ಮಣ್ಣಿನಿಂದ ಸಸಿಗಳು ಚಿಗುರಿ ಬೆಳೆಯಬೇಕಾದರೆ ಮತ್ತು ಮರಗಳಿಂದ ಆಮ್ಲಜನಕ ಬರಬೇಕಾದರೆ, ಹೀಗೆ ಒಂದರಿಂದೊಂದರಂತೆ ಬೆಲೆ ಕೊಡಲಾರದಷ್ಟು ನಷ್ಟವಾಗಿದೆ. ಇದನ್ನು ನಾನು ಯಾರಾದರೂ ಮಂತ್ರಿಗಳ ಮೇಲೆ ಅಥವಾ ಇನ್ನೊಬ್ಬರ ಮೇಲೆ ಹಾಕಬೇಕೆನ್ನತಕ್ಕಂಥ ಪ್ರಶ್ನೆ ಅಲ್ಲ. ಆ ಬಗ್ಗೆ ನಾನು ಮಾತನಾಡುತ್ತಿಲ್ಲ. ರಕ್ಷಣೆ ಮಾಡತಕ್ಕಂಥವರು ಇವೊತ್ತು ಇಲ್ಲ. ಇದೇ ಸಂದರ್ಭದಲ್ಲಿ ನಾನು ತಮಗೆ ಹೇಳುತ್ತೇನೆ. ಗೃಹ ಸಚಿವರು ಇಲ್ಲಗೆ ದಯಮಾಡಿಸಿದ್ದಾರೆ. ಸ್ವಾಮಿ, ತಮಗೆ ಹೇಳುತ್ತಿದ್ದೇನೆ. ಅರಣ್ಯ ಇಲಾಖೆಯಲ್ಲಿ ಅವರು ಜವಾಬ್ದಾರರು, ಬರೀ ಅರಣ್ಯಾಧಿಕಾರಿಗಳು ಜವಾಬ್ದಾರರಲ್ಲ. ಇತ್ತೀಚಿನ ದಿನಗಳಲ್ಲಿ ಅರಣ್ಯಾಧಿಕಾರಿಗಳಿಗೆ, ಸ್ಥೈರ್ಯ ಸಂಪೂರ್ಣವಾಗಿ ಹೊರಟುಹೋಗಿದೆ. ಅಲ್ಲಿ ಒಳ್ಳೆಯ, ಪ್ರಾಮಾಣಿಕತೆಯ ಅಧಿಕಾರಿಗಳಿದ್ದಾರೆ, ನಾನು ಇಲ್ಲವೆಂದು ಹೇಳುವುದಿಲ್ಲ. ಒಬ್ಬ ಸಮರ್ಥರಾದಂಥ ಅರಣ್ಯಾಧಿಕಾರಿಯಾಗಿದ್ದ ಶ್ರೀ ಶ್ರೀನಿವಾಸರವರು ಸತ್ತದ್ದು ತಮಗೆಲ್ಲಾ ಗೊತ್ತಿದೆ. ನಮ್ಮ ಈ ಕೊಳ್ಳೇಗಾಲ ಅರಣ್ಯ ಪ್ರದೇಶದಲ್ಲಿ ಏನಾಗಿದೆಯೆಂದರೆ, ಮಾನ್ಯ ಗೃಹಮಂತ್ರಿಗಳು ಈ ಕಡೆ ಸ್ವಲ್ಪ

ಗಮನಹರಿಸಬೇಕು. ಮಾನ್ಯ ದೇಶಪಾಂಡೆಯವರು ಸ್ವಲ್ಪ ಆ ಕಡೆ ಕುಳಿತುಕೊಳ್ಳಿ, ನೀವು ಈ ಕಡೆ ಕುಳಿತಿದ್ದಾಗಲೂ ನಮ್ಮ ತಲೆ ತಿನ್ನುತ್ತೀರಿ, ಅಲ್ಲಿ ಕುಳಿತಿದ್ದಾಗಲು ನಮ್ಮ ತಲೆತಿನ್ನುತ್ತೀರಿ, ಸ್ವಲ್ಪ ದಯಮಾಡಿ ಈ ಕಡೆ ಬನ್ನಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಎ. ವೆಂಕಟಪ್ಪ :— ಯಾರೋ ಹೊಸ ಮಂತ್ರಿಗಳು ಅಲ್ಲಿ ಕುಳಿತಿದ್ದಾರೆ,

ಶ್ರೀ ವಾಟಾಳ್ ನಾಗರಾಜ್ :— ಅವರು ಹಳೆಯ ಮಂತ್ರಿಗಳು ಆ ಕಡೆಯಲ್ಲಿ ಕುಳಿತು ಅವರಿಗೆ ಚಟವಿದೆ. ಆ ಚಟಕ್ಕಾಗಿ ಆ ಕಡೆ ಹೋಗಿ ಕುಳಿತಿದ್ದಾರೆ. ಅಭ್ಯಾಸಬಲಕ್ಕಾಗಿ ಅವರು ಆ ಕಡೆ ಹೋಗಿ ಕುಳಿತು ಬಿಟ್ಟಿದ್ದಾರೆ.

ಡಾ: ಎನ್.ಬಿ. ನಂಜಪ್ಪ :— ದೇಶಪಾಂಡೆಯವರು ಬರೆ ತಲೆತಿನ್ನುತ್ತಾರೆ; ಆದರೆ ನೀವು ಕೈಕಾಲು, ತಲೆ ಎಲ್ಲವನ್ನೂ ತಿಂದಾಕುತ್ತೀರಿ.

ಶ್ರೀ ಎಂ.ವಿ. ವೆಂಕಟಪ್ಪ :— ಇಷ್ಟರಲ್ಲೇ ದೇಶಪಾಂಡೆಯವರು ಏಕೆ ಆ ಕಡೆ ಕುಳಿತುಕೊಳ್ಳಬಾರದು;

ಶ್ರೀ ವಾಟಾಳ್ ನಾಗರಾಜ್ :— ಈ ಪರಿಸ್ಥಿತಿಯಲ್ಲಿ ಅದು ನಿಮ್ಮ ಹಣೆಯಲ್ಲಿ ಬರೆದಿಲ್ಲ ಬಿಡಿ. ಏಕೆಂದರೆ ನಿಮ್ಮ ನಾಯಕರು ಒಂದು ಹೇಳುತ್ತಾರೆ, ನೀವು ಒಂದು ರೀತಿ ಹೇಳುತ್ತೀರಿ. ಇದು ಬಹಳ ಕಷ್ಟವಾಗಿದೆ. ಅದು ಎಲ್ಲಿಗೆ ಹೋಗುತ್ತದೋ ಹೋಗಿ ಎಲ್ಲಿಗೆ ತಲುಪುತ್ತದೊ ನನಗೆ ಗೊತ್ತಿಲ್ಲ.

ಶ್ರೀ ಆರ್.ವಿ ದೇಶಪಾಂಡೆ :— ನಮಗೆ ಅಲ್ಲಿ ಕುಳಿತುಕೊಳ್ಳತಕ್ಕ ಚಟವಿಲ್ಲವೆಂದಲ್ಲ, ಏಕೆಂದರೆ ನಾವು ಒಮ್ಮೆ ಅಲ್ಲಿ ಕುಳಿತುಕೊಂಡಿದ್ದೇವೆ, ನಿಮಗೆ ಅಲ್ಲಿ ಕುಳಿತುಕೊಂಡು ಗೊತ್ತಿಲ್ಲ ಹಾಗಾಗಿ ನಮಗಿಂತ ನಿಮಗೆ ಹೆಚ್ಚು ಅಲ್ಲಿ ಕುಳಿತುಕೊಳ್ಳತಕ್ಕ ಚಟವಿದೆ, ಆದರೆ ನಿಮಗೆ ಅಲ್ಲಿ ಕುಳಿತುಕೊಳ್ಳುವುದಕ್ಕೆ ಅವಕಾಶವಿಲ್ಲ.

ಶ್ರೀ ವಾಟಾಳ್‌ನಾಗರಾಜ್ :— ನಾನು ಎಂದೆಂದು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ನಾನು ವಿರೋಧ ಪಕ್ಷದಲ್ಲಿಯೇ ಕುಳಿತುಕೊಳ್ಳಬೇಕೆಂದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ನನಗೂ ಇವರಿಗೂ ಒಂದು ಒಪ್ಪಂದವಾಗಿದೆ. ಇವರನ್ನು ಏನಾದರು ಮಾಡಿ ಈ ಕಡೆ ತೆಗೆದುಕೊಂಡು ಬಂದು ನಾವಿಬ್ಬರು ಆ ಕಡೆ ಹೋಗಬೇಕೆಂದು ಈ ಸದನದಲ್ಲಿಯೇ ಒಪ್ಪಂದವಾಗಿದೆ ಪುನ: ನಾನು ಆ ಕಡೆ ಹೋಗುವುದೇ ಬೇಡ ಎಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :— ಇಲ್ಲಿ ಒಪ್ಪಂದ ಹೇಗೆಂದರೆ ಹೇಗಾಗಿತ್ತು? ಕಾಂಗ್ರೇಸ್‌ನರೊಡನೆ ಸೇರಿಕೊಂಡು ಆ ಕಡೆಗೆ ಹೋಗತಕ್ಕ ಒಪ್ಪಂದವಾಗಿತ್ತೆ? ಅಥವಾ ಸೋಲಿಸಿ ಹೋಗಬೇಕೆಂದು ಆಗಿತ್ತೆ? ನನಗೆ ಕಾಂಗ್ರೇಸ್ ಪಕ್ಷದವರೊಡನೆ ಸೇರಿಕೊಂಡು ಹೋಗಬೇಕೆಂಬ ಉದ್ದೇಶವಿಲ್ಲವೆಂದು ತಮಗೆ ತಿಳಿಸುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ :— ಕಾಂಗ್ರೇಸ್‌ನ್ನು ಸೋಲಿಸಿದರೆ ನೀವು ಮಂತ್ರಿಯಾಗುತ್ತಿರಲಿಲ್ಲವೇ?

ಶ್ರೀ ವಾಟಾಳ್ ನಾಗರಾಜ್ :— ನನಗೆ ಆ ಚಟವಿಲ್ಲ,

ಶ್ರೀ ಆರ್.ವಿ. ದೇಶಪಾಂಡೆ :—ಆದರೆ ಮಂತ್ರಿಯಾಗಲು ಚಟವಿದೆ ಅಲ್ಲವೆ?

ಶ್ರೀ ವಾಟಾಳ್ ನಾಗರಾಜ್ :— ಜನ ನಮ್ಮನ್ನು ಮಂತ್ರಿಯಾಗಬೇಕೆಂದು ಕರೆದರೆ ಯಾಕಾಗಬಾರದು.

ಶ್ರೀ ಡಿ.ಹೆಚ್. ಬನ್ನಿಕೋಡ್:— ಅವರು ಆ ಕಡೆ ಹೋದರೆ ಇವೆಲ್ಲಾ ಅವಕಾಶಗಳು ಎಲ್ಲಿ ಸಿಗಬೇಕು? ಅವರಿಗೆ ಇಲ್ಲೇ ಯೋಗ್ಯವಾಗಿದೆ.

ಶ್ರೀ ಆರ್.ವಿ. ದೇಶಪಾಂಡೆ :— ವಾಟಾಳ್ ನಾಗರಾಜ್‌ರವರು ಖಾಯಂ ಆಗಿ ಅಲ್ಲೇ ಕುಳಿತುಕೊಳ್ಳಲಿ ಎಂದು ಆಶೀರ್ವದಿಸುತ್ತೇನೆ.

ಶ್ರೀ ವಾಟಾಳ್‌ನಾಗರಾಜ್ :— ಆದುದರಿಂದ ಗೃಹಸಚಿವರಿದ್ದಾರೆ ಅವರ ಗಮನಸಳೆಯುತ್ತಿದ್ದೇನೆ, ಶ್ರೀನಿವಾಸ್‌ರವರ ಸಾವು ಇಡೀ ದೇಶದ ಗಮನಸೆಳೆಯಿತು. ಇದು ಎಷ್ಟು ನಾಚಿಕೆಗೇಡು. ಅವರ ರುಂಡವನ್ನು ಕಿತ್ತುಕೊಂಡು ಹೋದರು ನಾವು ಅವರ ಮುಂಡವನ್ನು ಊರಿನಲ್ಲೆಲ್ಲಾ ಮೆರವಣಿಗೆ ಮಾಡಿದೆವು, ಇದುವರೆಗೆ ಏನಾಯಿತು ರುಂಡ? ಎಲ್ಲಿದೆ? ಯಾರ ಹತ್ತಿರ ಇದೆ? ಸಿಕ್ಕಿತೆ? ಖಂಡಿತಾ

ಇಲ್ಲ, ಸಿಕ್ಕಿದರೆ ಹೇಳಿ ವೀರಪ್ಪನ್‌ನನ್ನು ಆಮೇಲೆ ಹಿಡಿಯೋಣರಂತೆ, ಸತ್ತ ಹೆಣದ ರುಂಡ, ತಲೆ ನಮ್ಮಲ್ಲಿ ಎಲ್ಲಿದೆ? ಆ ವಿಷಯ ಇಲ್ಲಿ ಪ್ರಮುಖವಾದುದು.

ಉಪಾಧ್ಯಕ್ಷಣಿಯರು :— ನೀವು ನಾಗರಹೊಳೆಯಿಂದ ವೀರಪ್ಪನ್‌ಗೆ ಹೋಗುತ್ತಿದ್ದೀರಿ.

ಶ್ರೀ ವಾಟಾಳ್‌ನಾಗರಾಜ್ :— ಅರಣ್ಯ ಇಲಾಖೆಯ ಬಗ್ಗೆ ಮಾತನಾಡುವಾಗ ಇದರ ಪೂರಕವಾದ ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬೇಕಾಗಿದೆ. ನಾನು ತಮ್ಮಲ್ಲಿ ಕೇಳುತ್ತಿದ್ದೇನೆ ಇವತ್ತು ಕಾಯ್ದಿಟ್ಟ ಅರಣ್ಯ ಪ್ರದೇಶಗಳಲ್ಲಿ ನಿಮ್ಮ ನೀತಿ ಏನು ಇದೆ ಅದನ್ನು ಸಂಪೂರ್ಣವಾಗಿ ಜಾರಿಗೆತರಲು ಆಗುತ್ತಿಲ್ಲ. ಕೊಳ್ಳೇಗಾಲ ಪ್ರದೇಶದಲ್ಲಿ, ಎಳಂದೂರು ಪ್ರದೇಶದಲ್ಲಿ, ಚಾಮರಾಜನಗರ ಪ್ರದೇಶದಲ್ಲಿ ಇದು ಒಂದು ಕಡೆ ಕಾಯ್ದಿಟ್ಟ ಅರಣ್ಯ ಪ್ರದೇಶಗಳು. ಒಂದು ಕಡೆ ನಾಗರಹೊಳೆ, ಬಂಡೀಪುರ ಇವುಗಳು ಅಭಯಾರಣ್ಯಗಳು. ತಮಗೆ ನಾನು ಹೇಳುತ್ತೇನೆ ಈ ಕಾಯ್ದಿಟ್ಟ ಪ್ರದೇಶಗಳಲ್ಲಿ ಇದನ್ನು ನಮ್ಮ ಅರಣ್ಯ ಇಲಾಖೆಯ ಸಚಿವರು ಮತ್ತು ಗೃಹ ಇಲಾಖೆಯ ಮಂತ್ರಿಗಳು ಒಪ್ಪಿಕೊಳ್ಳುತ್ತೀರಿ. ಗ್ರೆನೈಟ್ ತೆಗೆಯತಕ್ಕಂಥ ದೊಡ್ಡ ಜಾಲವೇನಿದೆ ಅದನ್ನು ನಿಲ್ಲಿಸಲು ಆಗುತ್ತದೊ? ಆಗಿಲ್ಲ, ಅದನ್ನು ನಿಲ್ಲಿಸಲು ಇವರ ಕೈಯಲ್ಲಿ ಆಗಿಲ್ಲ.

(ಶ್ರೀ ಶಿವನಂಜಪ್ಪನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನಿಮ್ಮ ಕಾಯಿದೆಯ ಪ್ರಕಾರ ಅದನ್ನು ಒಳಗಡೆ ತೆಗೆಯಬಹುದೆ? ನಿಮ್ಮ ಕಾಯಿದೆ ಏನು ಹೇಳುತ್ತದೆಂದರೆ ಸಂಜೆ 6 ಗಂಟೆಯಿಂದ ಬೆಳಕರಿಯುವತನಕ ಒಬ್ಬರನ್ನುಕಾಡಿನಲ್ಲಿ ಬಿಡಬಾರದೆಂದು ಇದೆ, ಆದರೆ ನಿಮ್ಮ ಕಾಯಿದೆಯನ್ನು ಜಾರಿಗೊಳಿಸಲು ಆಗುತ್ತಿದೆಯೆ? ಆಗುತ್ತಿಲ್ಲ. ನಾವು ಯಾರೋ ಅಧಿಕಾರಿಗಳ ಮೇಲೆ ದೂಷಣೆ ಮಾಡುತ್ತಿಲ್ಲ . ನಿಮಗೆ ಹೇಳುವುದಾದರೆ ಈ ಅರಣ್ಯ ಪ್ರದೇಶಗಳನ್ನು ಕಾಯತಕ್ಕ ಇಬ್ಬರು ಶಕ್ತಿವಂತ ಅರಣ್ಯ ಅಧಿಕಾರಿಗಳು ಚಾಮರಾಜನಗರದಲ್ಲಿ ಮತ್ತು ಕೊಳ್ಳೇಗಾಲದಲ್ಲಿ ಇದ್ದರು. ಆದರೆ ಗ್ರಾನೈಟನ್ನು ತೆಗೆಯಲು ತೊಂದರೆಯಾಗುತ್ತದೆಂದು ಅವರನ್ನು ಅಲ್ಲಿಂದ ಓಡಿಸಿದಿರಿ. ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತು ನಾವು ಈ ಒಂದು ನಾಗರಹೊಳೆ ಪ್ರಕರಣವನ್ನು ಯಾವ ರೀತಿ ನ್ಯಾಯಾಂಗ ತನಿಖೆ ನಡೆಸಬೇಕು ಎನ್ನುವುದನ್ನು ನಾನು ತಮ್ಮಲ್ಲಿ ಕೇಳುತ್ತಿದ್ದೇನೆ. ಸಿ.ಓ.ಡಿ. ತನಿಖೆಯಾಬೇಕು ನಿಜ, ಸಿ.ಓ.ಡಿ. ಇಲಾಖೆಯಲ್ಲಿ ಒಳ್ಳೆಯ ಅಧಿಕಾರಿಗಳಿಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಸಿ.ಓಡಿಯಲ್ಲಿ ಇರತಕ್ಕಂಥ ಅಧಿಕಾರಿಗಳು, ಸರ್ಕಾರ, ಅವರ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲವೆಂದು ಹೇಳುವುದಾದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಇವತ್ತು ತಮಗೆ ಗೊತ್ತಿದೆ ಈ ಲೋಕಾಯುಕ್ತ ಯಾವ್ಯಾವ ಅಧಿಕಾರಿಗಳ ಮೇಲೆ ತನಿಖೆ ನಡೆಸಿ ಅವರು ತಪ್ಪಿತಸ್ಥರೆಂದು ಹೇಳುವ ಮಟ್ಟಕ್ಕೆ ಹೋದರು ಸಹ ಅದೇ ಅಧಿಕಾರಿಗಳ ಕೈಯಲ್ಲಿ ಅದೇ ಲೋಕಾಯುಕ್ತದ ಕೈಯಲ್ಲಿ 'ಬಿ ರಿಪೋರ್ಟ್‌ನ್ನು' ತರಿಸಿದ್ದನ್ನು ನಾವು ನೋಡಿದ್ದೇವೆ. ಆದುದರಿಂದ ನಮ್ಮಲ್ಲಿ ಪ್ರಾಮಾಣಿಕವಾದಂಥ ಅಧಿಕಾರಿಗಳು ಇದ್ದಾರೆ, ಅವರ ಮೇಲೆ ಪ್ರಭಾವ ಬೀರತಕ್ಕ ವಿಚಾರವಿರುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಇದನ್ನು ಸುಪ್ರೀಂಕೋರ್ಟ್‌ನ ಒಬ್ಬ ನ್ಯಾಯಾಧೀಶರಿಂದ ತನಿಖೆ ನಡೆಸುವುದಕ್ಕೆ ವ್ಯವಸ್ಥೆ ಮಾಡಿ ಈ ಕೊಲೆ ಪ್ರಕರಣವನ್ನು ಸಿ.ಓ.ಡಿ.ಗೆ ಕೊಡಿ. ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಪ್ರಕಾರ ನನ್ನದೇನು ತಕರಾರು ಇಲ್ಲ. ನಮ್ಮಲ್ಲಿ ಏನು ಒಳ್ಳೆಯ ಅಧಿಕಾರಿಗಳು ಇಲ್ಲವೆಂದು ಹೇಳುವುದಕ್ಕೆ ನಾನು ತಯಾರಿಲ್ಲ, ಇದ್ದಾರೆ ಅವರಿಗೆ ಈ ಕೊಲೆ ಪ್ರಕರಣವನ್ನು ಕೊಡಿ. ಈ ಅಭಯಾರಣ್ಯ ಸುಟ್ಟಿದೆ ಇದಕ್ಕೆ ಕಾರಣವೇನು? ಇದರ ಹಿನ್ನಲೆ ಏನು ಇದೆ? ಇದರ ಬಗ್ಗೆ ಏನು ಮಾಡಬೇಕು ಎನ್ನುವ ಬಗ್ಗೆ ತಾವು ದಯವಿಟ್ಟು ಇದನ್ನು ಸುಪ್ರೀಂಕೋರ್ಟ್‌ನ ನ್ಯಾಯಾಧೀಶರಲ್ಲಿ ತನಿಖೆಗೆ ಒಳಪಡಿಸಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದರ ಜೊತೆಗೆ ಈ ಒಂದು ನಾಗರಹೊಳೆ ಅಭಯಾರಣ್ಯ ಮತ್ತೆ ತನ್ನ ನೈಜ ಸ್ಥಿತಿಗೆ ಬರುತ್ತದೆಂದು ನಾನಂತೂ ತಿಳಿದುಕೊಂಡಿಲ್ಲ. ಆದರೂ ಸಹ ಈ ಅಭಯಾರಣ್ಯವನ್ನೆಲ್ಲಾ ಸೇರಿಸಿ ಒಂದು ಅಭಿವೃದ್ಧಿ ಪ್ರಾಧಿಕಾರ ಮಾಡಿ ಕೂಡಲೇ ಇದಕ್ಕೆ ಹಣವನ್ನು ತಾವು ಒದಗಿಸಿ ಈ ಅಭಯಾರಣ್ಯವನ್ನು ಮತ್ತೆ ತನ್ನ ನೈಜ ಸ್ಥಿತಿಗೆ ತರತಕ್ಕಂತಹ ವ್ಯವಸ್ಥೆಗೆ ತಾವು ಒಂದು ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ

ಮಾಡುತ್ತೇನೆ. ಇದು ಯಾವುದೇ ಒಂದು ಪಕ್ಷದ ಅಥವಾ ಸರ್ಕಾರದ ಬಗ್ಗೆ ಟೀಕೆ ಮಾಡತಕ್ಕಂಥ ವಸ್ತುವಾಗಿ ನಾವು ಇದನ್ನು ಉಪಯೋಗಿಸಿಕೊಂಡಿಲ್ಲ. ಇದು ನಾವೆಲ್ಲಾ ಯಾರು ಮನುಷ್ಯರಾಗಿದ್ದೇವೆ, ಯಾರು ಮಾನವ ಕುಲದಲ್ಲಿದ್ದೇವೆ, ಇದು ನಾವೆಲ್ಲರೂ ಸಂಕಟಪಡತಕ್ಕಂಥದ್ದು. ಇವತ್ತು ನಾಗರಹೊಳೆಯಲ್ಲಿ ಆ ರೀತಿಯಾಗಿದೆ. ಇದನ್ನು ಯಾರೇ ಮಾಡಿರಲಿ, ನನಗನಿಸುತ್ತದೆ ಇದರ ಜವಾಬ್ದಾರಿ 100ಕ್ಕೆ 100 ಭಾಗ ಕಳ್ಳಸಾಗಾಣಿಕೆದಾರರ ಮೇಲೆ ನಾವು ನೇರವಾಗಿ ಕೇಂದ್ರೀಕೃತ ಮಾಡಬೇಕಾಗುತ್ತದೆ. ಇದು ಬಹಳ ಪ್ರಾಮುಖ್ಯವಾದಂಥ ವಿಚಾರ ಎನ್ನುವುದು ಒಂದು. ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳಿಗೂ ಪೊಲೀಸ್ ಇಲಾಖೆಗೂ ಒಂದು ಸಾಮರಸ್ಯ ತರುವುದಕ್ಕೆ ತಾವು ಸಚಿವರು ಕುಳಿತು ಏನು ಮಾಡಬೇಕು ಎನ್ನುವ ಬಗ್ಗೆ ಒಂದು ಚಿಂತನೆ ನಡೆಯಬೇಕು. ಈಗ ಆ ಸಾಮರಸ್ಯವಿಲ್ಲ. ಆದರೆ ಈ ಚಿಂತನೆ ನಡೆಸಿ ನಿಮ್ಮಲ್ಲಿ ಒಂದು ಚೈತನ್ಯ ಬರುವುದಕ್ಕೆ ಬದಲು ಆ ಚೈತನ್ಯ ಕೊರೆಟುಹೋಗಿದೆ. ಅರಣ್ಯ ಅಧಿಕಾರಿಗಳಲ್ಲಿ ನಾನು ತಮ್ಮ ಮುಖಾಂತರ ಗೃಹ ಸಚಿವರನ್ನು ಕೇಳುತ್ತಿದ್ದೇನೆ, ನೀವು ಮತ್ತು ಅರಣ್ಯ ಇಲಾಖೆಯವರು ಕುಳಿತು ಒಂದು ಚಿಂತನೆ ಮಾಡಿ ತಾವು ಒಂದು ಒಮ್ಮತದ ಅಭಿಪ್ರಾಯಕ್ಕೆ ಬರಬೇಕು. ಅವರು ಹೇಳಿದರೆ ನೀವು ಕೇಳುವುದಿಲ್ಲ, ನೀವು ಹೇಳಿದರೆ ಅವರು ಕೇಳುವುದಿಲ್ಲ ಆ ಒಂದು ಭಾವನೆ ಬಂದರೆ ಅರಣ್ಯ ಉಳಿಯುವುದಿಲ್ಲ. ನಿಮಗೆ ಕೀರ್ತಿ ಬರುವುದಿಲ್ಲ. ಆದ್ದರಿಂದ ನೀವು ಸಾಮರಸ್ಯವನ್ನು ಕಾಪಾಡುವಂತದ್ದು ತಮ್ಮ ಕೈಯಲ್ಲಿಯೇ ಇದೆ ಎನ್ನುವ ಮಾತನ್ನು ಹೇಳಿ ನನ್ನ ಮಾತಗಳನ್ನು ಮುಗಿಸುತ್ತೇನೆ.

ಶ್ರೀ ಈ. ಟಿ ಶಂಭುನಾಥ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷಿಣಿಯವರೇ, ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಚಂದ್ರೇಗೌಡರವರು ಹಲವಾರು ವಿಷಯದಲ್ಲಿ ಚೆನ್ನಾಗಿ ಮಾತನಾಡಿದ್ದಾರೆ. ಅವರು ಅರಣ್ಯ ನಾಶದ ಬಗ್ಗೆ ವಿವರವಾಗಿ ಹೇಳಿದ್ದಾರೆ. ಆದರೆ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಮಾತ್ರ ಅದರ ಬಗ್ಗೆ ಭಿನ್ನಾಭಿಪ್ರಾಯಪಟ್ಟಿದ್ದಾರೆ. ಮಾನ್ಯ ಚಂದ್ರೇಗೌಡರು ಅರಣ್ಯ ನಾಶವಾಗಿರತಕ್ಕಂಥದ್ದು ಕೇವಲ ಕ್ರೌನ್ ಫೈಯರ್ ಎನ್ನುವ ರೀತಿಯಲ್ಲಿ ಹೇಳಿದರೆ, ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಇಲ್ಲಿ ಲಕ್ಷೋಪಲಕ್ಷ ಪ್ರಾಣಿಗಳು ಸತ್ತಿದ್ದಾವೆ, ದೊಡ್ಡ ಅನಾಹುತವಾಗಿದೆ ಎಂದು ಹೇಳಿದರು. ಅನಾಹುತವಾಗಿರತಕ್ಕಂಥದ್ದು ನಿಜ, ಆದರೆ ಆಗಿರತಕ್ಕಂಥ ಅನಾಹುತ ಎಂಥದ್ದು ಎಂದರೆ ಇನ್ನು ಮಳೆ ಬಂದು 2—3 ತಿಂಗಳಾಗುವವರೆಗೂ ತೊಂದರೆಯಾಗತಕ್ಕಂತಹ ಪರಿಸ್ಥಿತಿಯುಂಟಾಗಿದೆ. ಸಣ್ಣ ಸಣ್ಣ ಹುಳುಗಳು ಸತ್ತಿದ್ದಾವೆ. ಆದರೆ ಜಿಂಕೆ, ಅಥವಾ ಜಿಂಕೆಯ ಮರಿಗಳು, ಕಡವೆಯಂಥ ಪ್ರಾಣಿಗಳು ಸತ್ತಿಲ್ಲ. ಇದು ಕೇವಲ ಹುಲ್ಲಿಗೆ ಬೆಂಕಿ ಹತ್ತಿ ಉರಿಯತಕ್ಕಂತಹ ಬೆಂಕಿಯಿಂದ ಅಪಾರ ನಷ್ಟವಾಗಿದೆ ಎನ್ನುವುದರಲ್ಲಿ ಯಾವ ಸಂಶಯವಿಲ್ಲ. ಅಪಾರ ನಷ್ಟವಾಗಿದೆ ಏಕೆಂದರೆ ಬೆಲೆ ಕಟ್ಟುವುದಕ್ಕೆ ಆಗದಂಥ ಒಂದು ವ್ಯವಸ್ಥೆ ಇವತ್ತು ಅಲ್ಲಿ ಇರತಕ್ಕಂತಹ ಸಣ್ಣ ಹುಳು, ಕ್ರಿಮಿಗಳೇ ಸತ್ತಿದ್ದರೂ ಅದರ ಬೆಲೆಯನ್ನು ನಾವು ಕಟ್ಟುವುದಕ್ಕಾಗುವುದಿಲ್ಲ. ಅದಕ್ಕೆ ಅವರ ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಅಪಾರ ನಷ್ಟ ಎನ್ನುವುದಾದರೆ ನಮ್ಮ ಪ್ರಕಾರ ರೇಂಜ್ ಆಫೀಸ್, ಒಂದು ಜೀಪು ಮತ್ತು ಹಲವಾರು ಸಲಕರಣೆಗಳು ಸುಟ್ಟಿರುವ ಪ್ರಕಾರ 13 ಲಕ್ಷ ರೂಪಾಯಿ ನಷ್ಟವಾಗಿದೆ. ಆದರೆ ಯಾವ ನಾಟ ತುಂಡು ಸುಟ್ಟಿಲ್ಲ, ಸುಟ್ಟಿರತಕ್ಕಂಥದ್ದು ಸರಿಹೋಗಬೇಕಾದರೆ ಕೇವಲ ಹುಲ್ಲು, ಆನೆ ಹುಲ್ಲು ಇದು ಸರಿಹೋಗಬೇಕಾದರೆ ಇನ್ನು 4—5 ತಿಂಗಳಲ್ಲಿ ಸರಿಹೋಗುತ್ತದೆ.

ಶ್ರೀಮಾನ್ ಚಂದ್ರೇಗೌಡರು ಹೇಳಿದರು, ಮಳೆ ಬಂದು ಸ್ವಲ್ಪ ಹುಲ್ಲು ಚಿಗುರಿದರೆ ಸರಿಹೋಗುತ್ತದೆ ಎಂದು, ಅದು ನಿಜ. ಆದರ ಜೊತೆಯಲ್ಲಿ ನಾವು ಇನ್ನೂ ಹಲವಾರು ಹಣ್ಣಿನ ಬೀಜಗಳನ್ನು ಸೋಯಿಂಗ್ ಮಾಡುತ್ತೇವೆ. ಅವೂ ಕೂಡ ಫಲವತ್ತಾಗಿ ಬರುತ್ತವೆ. ಆದರೆ, ಈಗ ಪ್ರಚಾರ ಹೆಚ್ಚಾಗಿದೆ. ಇನ್‌ಸ್ಟೆಟ್ ಪ್ರಕಾರ 83 ಚದರ ಕಿಲೋಮೀಟರ್, ಅಂದರೆ 83 ಸಾವಿರ ಹೆಕ್ಟೇರುಗಳು ಸುಟ್ಟಿದೆ ಶ್ರೀಮಾನ್ ವಾಟಾಳ್ ನಾಗರಾಜ್‌ರವರು 643 ಚದರ ಕಿಲೋಮೀಟರ್ ಇರತಕ್ಕಂಥ ಅಭಯಾರಣ್ಯದಲ್ಲಿ ಅರ್ಧಕ್ಕಿಂತ ಹೆಚ್ಚು ಸುಟ್ಟಿದೆ ಎಂದು ಹೇಳುತ್ತಿದ್ದಾರೆ. ನಾನು ಈಗಾಗಲೇ ಇದರ ಬಗ್ಗೆ ಎರಡೂ ಸದನಗಳಲ್ಲಿ ಉತ್ತರಿಸಿದ್ದೇನೆ. 60 ಸಾವಿರ ಹೆಕ್ಟೇರ್ ಅಂದರೆ 60 ಚದರ ಕಿಲೋಮೀಟರ್ ಅರಣ್ಯ ಸುಟ್ಟಿದೆ ಎಂದು ಹೇಳಿದ್ದೇನೆ. ಆದರೆ ಇನ್‌ಸ್ಟೆಟ್ ಪ್ರಕಾರ 83 ಚದರ

ಕಿಲೋಮೀಟರ್ ಆದರೆ ನಾಗರಹೊಳೆ ಏರಿಯ ಬರತಕ್ಕಂಥದ್ದು 63 ಚದರ ಕಿಲೋಮೀಟರ್ ಮಾತ್ರ. ಇನ್ನು ಇದರ ಪಕ್ಕದಲ್ಲಿ ಮಾಮೂಲಿ ಬೆಂಕಿಯಿಂದ ತಾನೇ ತಾನಾಗಿ ಬಿದ್ದಂತಹ ಬೆಂಕಿಯಿಂದ ಸುಟ್ಟಿರತಕ್ಕ ಪ್ರದೇಶ. ಬೇಗೂರು ಹಾಗೂ ಕಾಕನಕೋಟೆ ವಿಭಾಗದ ಪ್ರದೇಶಗಳ 23 ಚದರ ಕಿಲೋಮೀಟರ್ ಸಹ ಇದರಲ್ಲಿ ಸೇರಿದೆ. ನಾನು ಇಲ್ಲಿ ಯಾವುದೇ ತಪ್ಪು ಮಾಹಿತಿಯನ್ನು ಕೊಟ್ಟಿಲ್ಲ. ಇನ್ನುಳಿದ ಹಲವಾರು ವಿಷಯಗಳ ಬಗ್ಗೆ, ಚಿಪ್ಪನ ಸಾವಿನ ಬಗ್ಗೆ ಈಗಾಗಲೆ ಸಿ.ಒ.ಡಿ ತನಿಖೆಗೆ ಒಪ್ಪಿಸಲಾಗಿದೆ. ಅಲ್ಲಿ ಹೇಗಾಯಿತು, ಏನು ನಡೆಯಿತು ಏನಿಲ್ಲ ಎನ್ನುವಂತಹ ವಿವರಗಳನ್ನು ನಾನು ಈಗಾಗಲೆ ತಿಳಿಸಿದ್ದೇನೆ. ಆದರೆ ಅವರು ಹೇಳಿದ ಪ್ರಕಾರ ಅರಣ್ಯ ಇಲಾಖೆಯವರು ಮತ್ತು ಇನ್ನುಳಿದ ಇಲಾಖೆಯವರು ಎಲ್ಲರೂ ಸೇರಿ ಬೆಂಕಿಯನ್ನು ಆರಿಸುವ ಕೆಲಸ ಮಾಡಿದ್ದಾರೆ. 13ನೇ ತಾರೀಖು ಬಿದ್ದಂಥ ಬೆಂಕಿಯನ್ನು ಅಂದಿನಿಂದ ಪ್ರಾರಂಭ ಮಾಡಿ 17–18ನೇ ತಾರೀಖಿಗೆ ಸಂಪೂರ್ಣವಾಗಿ ಬೆಂಕಿ ಆರಿಸುವಂತಹ ವ್ಯವಸ್ಥೆಯನ್ನು ನಾವು ಅರಣ್ಯ ಇಲಾಖೆಯಿಂದ ಮಾಡಿದ್ದೇವೆ. ಇಲ್ಲಿ ಮಾನ್ಯ ಸದಸ್ಯರು ಚೆನ್ನಪ್ಪನ ಬಗ್ಗೆ ಕೇಳಿದ್ದಾರೆ. ಶ್ರೀಮಾನ್ ಚೆನ್ನಪ್ಪನವರು 06–04–1967ರಲ್ಲಿ ಅಪಾಯಿಂಟ್ ಆಗಿ ಫಾರೆಸ್ಟರ್ ಎಂದು ಸೇರಿಕೊಂಡರು. 1967ರಿಂದ 1975ರವರೆಗೆ ಫಾರೆಸ್ಟರ್ ಆಗಿ 8 ವರ್ಷಗಳ ಕಾಲ ಇದ್ದರು. ಆ ತರುವಾಯ ಇನ್‌ಚಾರ್ಜ್ ಆರ್.ಎಫ್.ಒ ಆಗಿ 30–04–1975ರಿಂದ 30–06–195ರವರೆಗೆ ಇದ್ದರು. ನಂತರ ರೆಗ್ಯುಲರ್ ಆರ್.ಎಫ್.ಓ. ಆಗಿ 14–08–1980ರಿಂದ 30–04–1988ರವರೆಗೆ ಇದ್ದರು. ಅಂದರೆ 8 ವರ್ಷ ಇದ್ದರು. ಹಾಗೆಯೆ 15–06–1989ರಿಂದ 24–03–1992ರವರೆಗೆ ಇದ್ದರು. ಇವರು ಒಳ್ಳೆಯ ನ್ಯಾಯವಾದ ಅಧಿಕಾರಿ, ಹಾಗೂ ಬಹಳ ಬಿಗಿ ಇರತಕ್ಕಂಥ ಅಧಿಕಾರಿ ಎಂದು ನಮ್ಮಲ್ಲಿ ರೆಕಾರ್ಡ್ ಇದೆ. ಇವರು ಅಲ್ಲಿಯೇ ಏಕೆ ಇದ್ದರು ಎನ್ನುವುದು ಸಾಮಾನ್ಯವಾಗಿ ನಮಗೂ ಗೊತ್ತು ನಿಮಗೂ ಗೊತ್ತು. ಆಗಿನವರು ಇವರನ್ನು ನ್ಯಾಯವಾದ ಅಧಿಕಾರಿ ಎಂದು ಉಳಿಸಿಕೊಂಡು ಬಂದರೋ ಅಥವಾ ಯಾವುದಾದರೂ ಪ್ರಾಭಲ್ಯಕ್ಕೆ ಬೆಲೆ ಬಿದ್ದು ಉಳಿಸಿಕೊಂಡು ಬಂದರೋ ಅದನ್ನು ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಆದರೂ ಅವರು ಅಲ್ಲಿ ಇದ್ದುಕೊಂಡು ಬಂದಿದ್ದಾರೆ. ನ್ಯಾಯವಾಗಿ ನಮಗೆ ತಿಳಿದ ಪ್ರಕಾರ ಅವರು ಒಳ್ಳೆಯ ಸ್ಟ್ರಿಕ್ ಅಧಿಕಾರಿ ಅಲ್ಲ. ಒಂದು ಸ್ಟ್ರಿಕ್ ಇರುವುದರಲ್ಲಿಯೂ ಕೂಡ ಕೆಲವೊಮ್ಮೆ, ಮಾನ್ಯ ಬೆಳ್ಳಿಯಪ್ಪನವರು ಹೇಳಿದ ಹಾಗೆ ತೊಂದರೆ ಆಗುತ್ತದೆ. ಆರೀತಿ ಮಾಮೂಲಿ ಜನರಿಗೂ ಕೂಡ ತೊಂದರೆಯಾಗಿರಬಹುದು. ಸ್ಮಗ್ಲರ್ಸ್‌ಗಂತೂ ವಿಪರೀತವಾಗಿ ತೊಂದರೆಯಾಗಿದೆ. ಇದರಲ್ಲಿ ಬಹಳಷ್ಟು ಜನರ ಕೈವಾಡ ಇದೆ. ಏಕೆಂದರೆ, ಸುಮಾರು 7–8 ವರ್ಷಗಳಿಂದ ಈ ರೀತಿಯಾಗಿ ಅಭಯಾರಣ್ಯದಲ್ಲಿ ಬೆಂಕಿ ಬಿದ್ದಿದ್ದಿಲ್ಲ. ಆ ರೀತಿಯಾಗಿ ನಾವು ಮುಂಜಾಗರೂಕತೆಯ ಕ್ರಮ ತೆಗೆದುಕೊಂಡಿದ್ದೇನೆ. ಈಗಲೂ ಕೂಡ ಮುಂಜಾಗರೂಕತೆಯ ಕ್ರಮ ತೆಗೆದುಕೊಂಡು ಅಲ್ಲಲ್ಲಿ ಸೀಮಾ ರೇಖೆಗಳನ್ನು ಮತ್ತು ಅಗ್ನಿ ತಡೆಗಳನ್ನು ನಾವು ನಿರ್ಮಾಣ ಮಾಡಿದ್ದೇವೆ. ಆ ರೀತಿ ನಿರ್ಮಾಣ ಮಾಡಿದ್ದಕ್ಕಾಗಿ ಇವತ್ತು ಇದು 6 ಸಾವಿರ ಹೆಕ್ಟೇರಿಗೆ ನಿಗದಿಯಾಗಿದೆ ಇಲ್ಲದಿದ್ದರೆ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ, ಅರ್ಧಕ್ಕಿಂತ ಹೆಚ್ಚಾಗಿ ಬೆಂಕಿ ಬಿದ್ದು ಹೋಗಿಬಿಡುತ್ತಿತ್ತು. ಆದರೆ ಅದೃಷ್ಟವಶಾತ್ ನಾವು ಎಲ್ಲ ವ್ಯವಸ್ಥೆ ಮಾಡಿದ್ದರಿಂದ ಇದು ಒಂದು ಹಂತಕ್ಕೆ ನಿಲ್ಲುವಂಥ ಪರಿಸ್ಥಿತಿ ಬಂತು. ಇದರ ಹಿನ್ನೆಲೆ ಏನಿದೆ ಎನ್ನುವ ಎಲ್ಲದರ ಬಗ್ಗೆ ತನಿಖೆ ನಡೆಸುವುದಕ್ಕಾಗಿ ನಾವು ಸಿ.ಒ.ಡಿ.ಗೆ ವಹಿಸಿಕೊಟ್ಟಿದ್ದೇವೆ. ನಮ್ಮ ಅರಣ್ಯ ಇಲಾಖೆಯವರು ಏತಕ್ಕೆ ತಕ್ಷಣ ಅದನ್ನು ರಿಪೋರ್ಟ್ ಮಾಡಲಿಲ್ಲ ಎಂದರೆ, ಆ ಭಾಗದಲ್ಲಿದ್ದಂಥ ಒಬ್ಬ ಫಾರೆಸ್ಟರ್ ಆದವನು ಮದುವೆಯ ವ್ಯವಸ್ಥೆಗಾಗಿ 10ನೇ ತಾರೀಖಿನಿಂದ 5–6 ದಿನ ರಜೆ ತೆಗೆದುಕೊಂಡು ಹೋಗಿದ್ದ. ಇದರಿಂದಾಗಿ ಅಲ್ಲಿ ಬಿದ್ದಿದ್ದ ಹೆಣವನ್ನು ಹೋಗಿ ನೋಡುವುದಕ್ಕೆ ಆಗಲಿಲ್ಲ. ಆದರೆ ಅವರ ಸಂಬಂಧೀಕರು 13ನೇ ತಾರೀಖು ಹೋಗಿ ಪೋಲೀಸ್ ಸ್ಟೇಷನ್‌ನಲ್ಲಿ ಏನು ದೂರು ಕೊಟ್ಟಿದ್ದಾರೆಂದರೆ ಅರಣ್ಯ ಇಲಾಖೆಯಲ್ಲಿರತಕ್ಕ ರೇಂಜ್ ಫಾರೆಸ್ಟ್ ಆಫೀಸರ್ ಆಗಿರುವಂಥ ಶ್ರೀಮಾನ್ ಚೆನ್ನಪ್ಪ ಎನ್ನುವವರು ಇವನನ್ನು ಗುಂಡು ಹೊಡೆದು ಕೊಂದಿದ್ದಾರೆ ಎಂದು ಕೊಟ್ಟಿದ್ದಾರೆ. ಇಲ್ಲಿ ಸತ್ತಿದ್ದವನೂ ಕೂಡ ಚೆನ್ನಪ್ಪ ಎಂದು. ಅವನ ಹೆಸರು ಚಿಪ್ಪ ಅಲಿಯಾಸ್ ಚೆನ್ನಪ್ಪ ಎಂದು. ಈ ರೀತಿ ಸತ್ತಿದ್ದಂಥ ಚೆನ್ನಪ್ಪ ನಮಗೆ 2–3 ಸಾರಿ ಕೆಲವು ಪ್ರಕರಣಗಳಲ್ಲಿ ಸಿಕ್ಕಿ ಹಾಕಿಕೊಂಡಿದ್ದಾನೆ.

ಅವನ ಮೇಲೆ ಕೇಸುಗಳಿವೆ. ಇದು ನಮ್ಮ ಅರಣ್ಯ ಇಲಾಖೆಗೆ ತಿಳಿದಮೇಲೆ ಅರಣ್ಯ ಇಲಾಖೆಯವರು ಅಲ್ಲಿಗೆ ಹೋದರೆ ಸ್ವಲ್ಪ ತೊಂದರೆಯಾಗತಕ್ಕಂಥ ಪರಿಸ್ಥಿತಿ ಇದೆ ಎನ್ನತಕ್ಕ ಸುದ್ದಿ ಅವರಿಗೆ ತಿಳಿದಮೇಲೆ ನಮ್ಮ ಡಿ.ಎಫ್.ಓ ಆದಂಥ ಶ್ರೀನಿವಾಸ್‌ರವರು ಎಸ್.ಪಿ.ಗೆ ಮತ್ತು ಡಿ.ಸಿ. ಯವರಿಗೆ ಫೋನ್ ಮುಖಾಂತರ ವಿಷಯವನ್ನು ತಿಳಿಸಿದರು. ಅವರೂ ಕೂಡ ಈ ಚಿನ್ನಪ್ಪನವರು ಆ ಸ್ಥಳದಲ್ಲಿರತಕ್ಕದ್ದು ಬೇಡ, ಏಕೆಂದರೆ ಸ್ವಲ್ಪ ತೊಂದರೆ ಆಗುವ ಸಂದರ್ಭ ಇದೆ. ಆದ್ದರಿಂದ. ಅವರು ಬೇರೆಕಡೆ ಹೋಗಿ ಇರುವುದಕ್ಕೆ ಹೇಳುವಂತೆ ಮುಂಜಾಗರೂಕತೆಯಾಗಿ ಎಚ್ಚರಿಕೆಯನ್ನೂ ಕೊಟ್ಟಿದ್ದಾರೆ. ಇದೇರೀತಿ ನಮ್ಮ ಅಧಿಕಾರಿಗಳೂ ಕೂಡ ಮಾಡಿದ್ದಾರೆ. ಆ ಹೆಣ ಬಿದ್ದಿರತಕ್ಕ ಸ್ಥಳಕ್ಕೆ ಅರಣ್ಯ ಇಲಾಖೆಯ ಅಧಿಕಾರಿಗಳೂ ಯಾರೂ ಬರಬಾರದೆಂಬ ಮುನ್ಸೂಚನೆಯ ಪ್ರಕಾರ ನಮ್ಮವರು ಯಾರೂ ಅಲ್ಲಿಗೆ ಹೋಗಲಿಲ್ಲ. ಆಗ ಪೋಲೀಸ್ ಇಲಾಖೆಯವರೂ ಮತ್ತು ತಹಸಿಲ್ದಾರ್‌ರವರೂ ಈ ಹೆಣವನ್ನು ಕುಟ್ಟ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಪೋಸ್ಟ್‌ಮಾರ್ಟಂ ಮಾಡಬೇಕೆಂದು ನಿರ್ಧಾರ ತೆಗೆದುಕೊಂಡು ಇನ್ನೇನು ಆ ಹೆಣವನ್ನು ಅಲ್ಲಿಂದ ಎತ್ತಬೇಕೆನ್ನುವಾಗ ಅಲ್ಲಿ ಸೇರಿದ್ದಂಥ ಸಾವಿರಾರು ಜನರು ಅದನ್ನು ನಾಗರಹೊಳೆಗೆ ತಂದು ಚಿನ್ನಪ್ಪನವರ ಮನೆಯಲ್ಲಿರಿಸಿ ಈ ಹೆಣವನ್ನು ಪೋಸ್ಟ್‌ಮಾರ್ಟಂಗೆ ನಾವು ಎಲ್ಲಿಗೂ ಬಿಡುವುದಿಲ್ಲ, ಇದೇ ಮನೆಯಲ್ಲಿ ಪೋಸ್ಟ್‌ಮಾರ್ಟಂ ಆಗಬೇಕೆಂದು ಹೇಳಿ ಪಟ್ಟು ಹಿಡಿದಿದ್ದರಿಂದ ಅವರ ಮನೆಯ ಹಿಂಭಾಗದಲ್ಲಿ ಪೋಸ್ಟ್‌ಮಾರ್ಟಂ ಮಾಡಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :– ಅಂದರೆ ಕಾನೂನು ಜನರ ಕೈಯಲ್ಲಿತ್ತು.

ಶ್ರೀ ಈ.ಟಿ. ಶಂಭುನಾತ್ :– ಅಲ್ಲಿ ನಡೆದಂಥ ವಿಷಯವನ್ನು ನಾನು ತಿಳಿಸುತ್ತಿದ್ದೇನೆ. ಇದನ್ನೆಲ್ಲಾ ಪರಿಶೀಲಿಸಿ ಮೇಲ್ಮನೆಯಲ್ಲಿ ಕೊಟ್ಟಂಥ ಅಶ್ವಾಸನೆಯ ಪ್ರಕಾರ ಈ ಕೆಳಕಂಡ ಘಟನೆಯ ಬಗ್ಗೆ ರಾಜ್ಯದ ಸಿ.ಓ.ಡಿ. ಮೂಲಕ ಸಮಗ್ರ ತನಿಖೆ ನಡೆಸುವಂತೆ. . ..

ಶ್ರೀ ಬಿ.ಎಸ್. ಯಡಿಯೂರಪ್ಪ :–ಕೆಳಮನೆಯಲ್ಲಿ ಇದರ ಬಗ್ಗೆ ಸಿ.ಬಿ.ಐ.. ತನಿಖೆಯಾಗಬೇಕು ಎಂದು ನಾವು ಹೇಳುತ್ತಿದ್ದೇವೆ.

ಶ್ರೀ ಈ.ಟಿ. ಶಂಭುನಾಥ್ :– ನಾವು ಇಷ್ಟನ್ನು ನಿರ್ಧಾರಮಾಡಿ ಕಳುಹಿಸಿಕೊಟ್ಟಿದ್ದೇವೆ. ಈ ಘಟನೆಗೆ ಸಂಬಂಧಪಟ್ಟಂಥ ಶ್ರೀ ಎಂ.ವಿ. ಚಿನ್ನಪ್ಪ ಉರುಫ್ ಚಿಪ್ಪ ಎನ್ನುವವನ ಸಾವಿಗೆ ಅರಣ್ಯ ಇಲಾಖೆಯ ಯಾರಾದರೂ ಅಧಿಕಾರಿ ಸಿಬ್ಬಂದಿ ಕಾರಣವಾಗಿದ್ದಾರೆಯೇ ಅಥವಾ ಈ ಸಾವಿಗೆ ಕಾರಣರಾದ ನಿಜವಾದ ಅಫರಾಧಿಗಳು ಯಾರೆಂದು ಪತ್ತೆ ಹಚ್ಚಬೇಕಾಗಿದೆ. ಈ ಘಟನೆಯಲ್ಲಿ ನಡೆದಂಥ ಲೂಟಿ, ಅರಣ್ಯ ಇಲಾಖೆಯ ಆಸ್ತಿಪಾಸ್ತಿಗಳ ನಾಶ, ವಾಹನಗಳಿಗೆ ಬೆಂಕಿ ಹಚ್ಚಿರತಕ್ಕದ್ದು, ಅರಣ್ಯಕ್ಕೆ ಬೆಂಕಿ ಹಚ್ಚಿರುವುದು ಇವುಗಳಿಗೆ ಕಾರಣವಾದ ಸಂದರ್ಭಗಳು ಯಾವುವು ಎಂಬುದು. ಇನ್ನು ಮೂರನೆಯದಾಗಿ ಯಾವ ಕಾರಣಕ್ಕೆ ಶ್ರೀ ಎಂ.ವಿ. ಚಿನ್ನಪ್ಪ, ಉರುಫ್ ಚಿಪ್ಪರವರ ಮೃತ ದೇಹವನ್ನು ಕುಟ್ಟ ಆಸ್ಪತ್ರೆಗೆ ಶವಪರೀಕ್ಷೆ ಮಾಡಲು ಸಾಗಿಸುವ ಬದಲು ನಾಗರಹೊಳೆಗೆ ಸಾಗಿಸಲಾಯಿತು, ಹಾಗೂ ಈ ಮೃತದೇಹವನ್ನು ಸಾಗಿಸಲು ಇಲಾಖೆಯ ಬದಲು ಅಲ್ಲಿ ನೆರೆದಿದ್ದ ಜನರಿಗೆ ಯಾವ ಕಾರಣಕ್ಕಾಗಿ ಒಪ್ಪಿಸಲಾಯಿತು? ಕಾನೂನು ಸುವ್ಯವಸ್ಥೆಯನ್ನು ಜಾರಿಗೊಳಿಸಲು ಹೋದಂಥ ಅಧಿಕಾರಿಗಳು ಘಟನೆಯ ಸಮಯದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳ, ಸಿಬ್ಬಂದಿಯ ಮೇಲೆ ನಡೆದಂಥ ಅಕ್ರಮಗಳನ್ನು ತಡೆಗಟ್ಟಲು ವಿಫಲರಾಗಿದ್ದಾರೆಯೆ? ಅದು ಈ ಘಟನೆಯ ಸಮಯದಲ್ಲಿ ಅವರು ಹಾಜರಾಗಿದ್ದಾಗ್ಯೂ ಇಂಥ ಅಕ್ರಮಣಗಳನ್ನು ಅವರು ಏತಕ್ಕೆ ತಡೆಯಲಿಲ್ಲ? ಎಂಬ ಈ ಎಲ್ಲ ವಿಷಯಗಳ ಬಗ್ಗೆ ಸಿ.ಓ.ಡಿ. ತನಿಖೆ ಆಗಬೇಕೆಂದು ನಾನು ವಿನಂತಿಸಿಕೊಂಡಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :– ನಾನು ಬಹಳ ಮುಖ್ಯವಾದ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಅದನ್ನೂ ತಾವು ಸೇರಿಸಿದ್ದೀರಾ? ನನ್ನ ಮುಖ್ಯ ಪ್ರಶ್ನೆ ಏನೆಂದರೆ ಚಿಪ್ಪನ ಸಾವಿನ ಜೊತೆಯಲ್ಲಿದ್ದಂತ ಬಂದೂಕ ಮತ್ತು 2 ಕ್ಯಾಟ್ರೆಜಸ್ ಕೂಡ ಇದ್ದವು. ಈ ಸಂಬರ್ಭದಲ್ಲಿ ಅದು ಕೂಡ ಇನ್‌ವೆಸ್ಟಿಗೇಟ್ ಆಗಬೇಕಲ್ಲವೆ? This is the main for the centre epsode. ದಯವಿಟ್ಟು ಅದನ್ನು ಕೂಡ ಇದರಲ್ಲಿ ಸೇರಿಸಬೇಕು.

ಶ್ರೀ ಈ.ಟಿ. ಶಂಭುನಾಥ್ :— ಅದನ್ನೂ ಕೂಡ ಇದರಲ್ಲಿ ಸೇರಿಸಿ ಕಳುಹಿಸಿಕೊಡಿತ್ತೇವೆ. ಅದೂ ಕೂಡ ಇದರಲ್ಲಿ ಅಡಕವಾಗಿ ಬರುತ್ತದೆ. ಏಕೆಂದರೆ ಅವನ ಸಾವಿನ ಬಗ್ಗೆ ಹೇಳಿದಾಗ ಅದೂ ಕೂಡ ಕಾನೇತಾನಾಗಿ ಬರುತ್ತದೆಂದು ನಾವು ಅದನ್ನು ಬಿಟ್ಟಿದ್ದೆವು.

ಶ್ರೀ ಡಿ.ಬಿ. ಚಂದ್ರೇಗೌಡ :— ಸ್ಪೆಸಿಫಿಕ್ ಆಗಿ ಹಾಕಿ.

ಶ್ರೀ ಇ.ಟಿ. ಶಂಭುನಾಥ್ :— ಸ್ಪೆಸಿಫಿಕ್ ಆಗಿ ಸೇರಿಸಿ ಕಳುಹಿಸುತ್ತೇವೆ. ಇಷ್ಟೆಲ್ಲಾ ಆದರೂ ಕೂಡ ಈ ಸಂಬಂಧದಲ್ಲಿ ಸಿ.ಒ.ಡಿ. ತನಿಖೆಯಿಂದ ಹೊರಗೆ ಬಂದಮೇಲೆ ಯಾವ ಅಧಿಕಾರಿ ಎಷ್ಟೇ ದೊಡ್ಡವರಿರಲಿ ಅವರ ಮೇಲೆ ಕಾನೂನು ಪ್ರಕಾರ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಆಶ್ವಾಸನೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಯಾರ ಹಸ್ತಕ್ಷೇಪವೂ ಇಲ್ಲ. ರಾಜಕೀಯವೂ ಇಲ್ಲ. ಯಾರ ಕೈವಾಡವೂ ಇಲ್ಲ. ಏಕೆಂದರೆ ನೀವು ಇದರಲ್ಲಿ ರಾಜಕೀಯ ಇದೆ ಎಂದು ಕೆಲವರು ಅಬಿಪ್ರಾಯ ಪಟ್ಟಿದ್ದೀರಿ. ಇಲ್ಲಿ ನಾವು ರಾಜಕೀಯ ಮಾಡಿ ಯಾರನ್ನೂ ನಾವು ಸಂರಕ್ಷಿಸಬೇಕಾಗಿಲ್ಲ. ಇವತ್ತು ಇರತಕ್ಕ ವ್ಯವಸ್ಥೆ, ಇಲ್ಲಿ ನಡೆದಿರತಕ್ಕ ವ್ಯವಸ್ಥೆ ಕೇವಲ ಕಳ್ಳಸಾಗಾಣಿಕೆದಾರರು ಮತ್ತು ನಮ್ಮ ಅರಣ್ಯ ಇಲಾಖೆಯವರು ಹಾಗೂ ಇನ್ನು ಹಲವಾರು ಅಧಿಕಾರಿಗಳ ಮಧ್ಯೆ ಇರತಕ್ಕ ವ್ಯವಸ್ಥೆ ಇದು . ಆದುದರಿಂದ ಇದರ ಬಗ್ಗೆ ಕೂಲಂಕುಷ ತನಿಖೆ ನಡೆಸುತ್ತೇವೆ. ಆಮೇಲೆ ಶ್ರೀ ಮಾನ್ಯ ಉಲ್ಲಾಸ ಕಾರಂತರಬಗ್ಗೆ ನೀವು ಹೇಳಿದಿರಿ. ನಾನು ಮೇಲ್ಕಂಡಲ್ಲಿ ಒಂದುಸಾರಿ ಚಿರತೆ ಸತ್ತಾಗ ಆ ಪೋಸ್ಟ್ ಮಾರ್ಟಮ್ ರಿಪೋಚ್‌ನಲ್ಲಿ ಅವರು ಎನು ಹೇಳಿದ್ದರೆಂದ ಉಲ್ಲಾಸ್ ಕಾರಂತರವರು ಪ್ರಕಟಣೆ ಕೊಟ್ಟ ಪ್ರಕಾರ ಅಲ್ಲಿರತಕ್ಕಂಥ ಕಾಡಕುರಬರು ಬಲೆಹಾಕಿ ತಂತಿ ಅದರ ಕೊಳ್ಳಿಗೆ ಸಿಕ್ಕಿ ಸತ್ತಿತು ಎನ್ನುವ ಅಭಿಪ್ರಾಯ ಕೊಟ್ಟಿದ್ದರು. ನಾನು ಅದರ ಪೋಸ್ಟ್ ಮಾರ್ಟಮ್ ರಿಪೋರ್ಟ ನೋಡಿದ್ದಾಗ ಅದು ಉಸಿರಾಟದ ತೊಂದರೆಯಿಂದ ಸತ್ತಿದೆ ಎಂದು ಹೇಳಿದ್ದರು. ಪೋಸ್ಟ್ ಮಾರ್ಟಮ್ ರಿಪೋರ್ಟನಲ್ಲಿ ಆ ತಂತಿಯಿಂದಲೇ ಸತ್ತಿದ್ದರೆ ತಂತತಿ ಮಾರ್ಕ ಬೀಳುತ್ತಿತ್ತು. ಅದನ್ನು ಅವರು ಸ್ಪಷ್ಟವಾಗಿ ಹೇಳಿಲ್ಲ. ಅದಕ್ಕಾಗಿ ಅವತ್ತು ಸ್ಟೇಟ್‌ಮೆಂಟ್ ಮಾಡುವಾಗ ಏನು ಹೇಳಿದೆ ಅಂದರೆ ಇದು ಕೇವಲ ಕಾಡುಕುರುಬರುಗೆ ಕೊಡತಕ್ಕಂಥ ಅಪವಾದಕ್ಕಾಗಿ ವ್ಯವಸ್ಥಿತವಾಗಿ ನಡೆದಿದೆ ಹೊರತು ಇದು ಬೇರೆ ಅಲ್ಲ, ಅವರು ತಪ್ಪಿತಸ್ಥರಲ್ಲ, ಕಾಡುಕುರುಬರು ಈ ವ್ಯವಸ್ಥೆಯನ್ನೇ ಮಾಡಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಉಲ್ಲಾಸ್ ಕಾರಂತರು ಏನು ಹುಲಿಯಬಗ್ಗೆ ಅವರು ಏನು ರಿಸರ್ಚ್ ಮಾಡುತ್ತಿದ್ದಾರೋ ಅದನ್ನು ಕೂಡ ನಿಲ್ಲಿಸುವುದಕ್ಕೆ ಹೇಳಿದ್ದೇನೆ. ಏತಕ್ಕೆಂದರೆ ಯಾವುದೇ ರೀಸರ್ಚ್ ಮಾಡುವಾಗ ನೀವು ಹೇಳಿದಹಾಗೆ ನಾವು ಒಂದು ಸಾಕು ನಾಯಿಗೆ ಕೊಳ್ಳಪಟ್ಟಿ ಕಟ್ಟಿದರೆ ಅದು ಸಂತೋಷವಾಗಿ ಇರುವುದಿಲ್ಲ. ಕಾಡುಪ್ರಾಣಿಯಾಗಿ ಬದುಕಿರತಕ್ಕಂಥ ಕಾಲದಲ್ಲಿ ಆ ಪ್ರಾಣಿಗೆ ಕಾಲರ್ ಹಾಕಿದಾಗ ನಾಜವಾಗಿಯೂ ಅದು ಸೌಮ್ಯವಾಗಿರಲಿಕ್ಕೆ ಸಾಧ್ಯವಿಲ್ಲ. ನಾನು ನೋಡಿದ್ದೇನೆ. ಕಾಲರ್ ಹಾಕಿದಂತ ಪ್ರಾಣಿ. ನಿಜವಾಗಿ ಹುಲಿಯೋ ಅಥವಾ ಸಾಕಿದ ಹುಲಿಯನ್ನು ಇಲ್ಲಿ ತಂದು ಬಿಟ್ಟಿದ್ದೇವೋ ಎನ್ನುವ ಮನೋಭಾವನೆ ಬರುತ್ತದೆ. ಅಷ್ಟೊಂದು ಸುಸ್ತಾಗಿದೆ. ಅದಕ್ಕಾಗಿ ನಾನು ಹೇಳಿದೆ ಈ ಉಸಿರಾಟದ ತೊಂದರೆಯಿಂದಾಗಿ ಸತ್ತಿದೆ ಎಂದು ಹೇಳಿದಾಗ ಇದು ಜಿಗಿಯುವಾಗ ಆ ಕಾಲರ್‌ಗೆ ಕೊಂಬೆ ಸಿಕ್ಕಿಹಾಕಿಕೊಂಡು ಏತಕ್ಕೆ ಸತ್ತಿರಬಾರದು ಎಂದು ಕೇಳಿದೆ. ನೀವು ಕಾಡು ಕುರುಬರನ್ನು ಹೊಣೆಮಾಡಬೇಡಿ ಎಂದು ಹೇಳಿಕಳುಹಿಸಿಬಿಟ್ಟೆ ಅದರಲ್ಲೂ ಇಲ್ಲಿ ಬೆಂಕಿ ಹಚ್ಚಿರತಕ್ಕಂಥ ಜಾಗದಲ್ಲಿ ಕಾಡುಕುರುಬರು ಇರಲೇ ಇಲ್ಲ. ಅವರು ಆ ವ್ಯವಸ್ಥೆಗೆ ಹೋಗುವುದಿಲ್ಲ. ಅವರ ಬಗ್ಗೆ ನಮಗೆ ಏನು ಸಂಶಯವಿಲ್ಲ. ಮೊನ್ನೆ ನಾನು ಹೋದಾಗ ಕೂಡ ಅವರು ನಾವು ಈ ಅರಣ್ಯ ಬಿಟ್ಟುಹೋಗುವುದಿಲ್ಲವೆಂಬ ನಿರ್ಧಾರದಲ್ಲಿದ್ದವರು ಎನು ಹೇಳಿದರು ಎಂದರೆ ನಮಗೆ ರಿಹ್ಯಾಬಿಟೇಷನ್ ಮಾಡಿಕೊಟ್ಟುಬಿಡಿ, ನಾವು ಹೊರಗೆ ಹೋಗಿಬಿಡುತ್ತೇವೆ. ಈ ಅಪರಾಧವನ್ನು ಸಹಿಸಿಕೊಳ್ಳಲಿಕ್ಕೆ ಆಗುವುದಿಲ್ಲವೆಂದು ಬಹಳ ದುಃಖದಿಂದ ಹೇಳಿದರು. ಆದ್ದರಿಂದ ಅವರು ಮಾತ್ರ ಈ ಅರಣ್ಯ ನಾಶಕ್ಕೆ ಪ್ರಯತ್ನ ಪಡುವುದಿಲ್ಲ. ಮತ್ತು ಅವರಿಗೂ ಉಲ್ಲಾಸ ಕಾರಂತರಿಗೂ ವಿರುದ್ಧ ಏತಕ್ಕೆಂದರೆ ಅವರು ಅವರ ಮೇಲೆ ಅಪವಾದವನ್ನು ಹೊರಿಸಿದ್ದರಿಂದ ರೇಗಿದ್ದಾರೆಯೇ ಹೊರತು ಬೇರೆ ಯಾವರೀತಿ ಇಲ್ಲ. ಇದರ ಬಗ್ಗೆ ನಾವು ಕೂಲಂಕುಷವಾಗಿ ತನಿಖೆ ನಡೆಸಿ ಯಾರು ತಪ್ಪಿತಸ್ಥರಿರುತ್ತಾರೋ

ಅವರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇವೆನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು : 1992-93 ನೇ ಸಾಲಿಗೆ ಕರ್ನಾಟಕ ವಿಧಾನ ಸಭೆಯ ವಿವಿಧ ಸಮಿತಿಗಳ ಸದಸ್ಯ ಸ್ಥಾನಕ್ಕೆ ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗೆ ಸಮಾನವಾಗಿ ನಾಮ ಪತ್ರವು ಬಂದಿರುವುದರಿಂದ ಈ ಕೆಳಗೆ ಸೂಚಿಸಿರುವ ವಿವಿಧ ಸಮಿತಿಗಳಿಗೆ ಹಾಗೂ ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಈ ಕೆಳಕಂಡ ಮಾನ್ಯ ಸದಸ್ಯರುಗಳು ಚುನಾಯಿತರಾಗಿದ್ದಾರೆಂದು ಘೋಷಿಸಲಾಗಿದೆ. ಪ್ರಕಟಣೆಯನ್ನು ಮಂಡಿಸಲಾಗಿದೆ.

1. ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ

ಶ್ರೀಯುತರುಗಳಾದ :

1. ಅನಂತಕೃಷ್ಣ ಎ.ಕೆ.
2. ಹೆಚ್.ಎಂ. ರೇವಣ್ಣ
3. ರೇಣುಕಾ ರಾಜೇಂದ್ರನ್
4. ಮನೋಹರ ತಹಶೀಲ್ದಾರ್
5. ಡಾ: ಎ.ಬಿ. ಮಲಕರೆಡ್ಡಿ
6. ಅಮರನಾಥ ರೈ
7. ಸಗೀರ ಅಹ್ಮದ್
8. ಹೆಚ್. ಏಕಾಂತಯ್ಯ
9. ಹೆಚ್. ವೈ. ಮೇಟಿ
10. ಸಿ. ಬೈರೇಗೌಡ
11. ವಾಟಾಳ್ ನಾಗರಾಜ್
12. ನಾರಾಯಣರಾವ್ ಮನಹಳ್ಳಿ

2. ಅಂದಾಜುಗಳ ಸಮಿತಿ

ಶ್ರೀಯುತರುಗಳಾದ:

1. ವೈ. ನಾಗಪ್ಪ
2. ನಿಸಾರ್ ಅಹ್ಮದ್
3. ಜಿ. ಪರಮೇಶ್ವರ
4. ಸಿ.ಎಂ. ಲಿಂಗಪ್ಪ
5. ಆರ್.ಎನ್. ನಾಯಕ್
6. ಎಸ್. ಎಸ್. ಕೌಜಲಗಿ
7. ಕೆ.ಹೆಚ್. ಹನುಮೇಗೌಡ
8. ಶ್ರೀರಂಗದೇವರಾಯಲು
9. ಗೋವಿಂದಪ್ಪ ಜುಟ್ಟಲ
10. ಜಿ.ಎಸ್. ಆಚಾರ್
11. ಬಿ.ಹೆಚ್. ಬನ್ನಿಕೋಡ್
12. ಎಂ. ನಾರಾಯಣಸ್ವಾಮಿ
13. ಪ್ರೊ. ನಂಜುಂಡಸ್ವಾಮಿ
14. ಬಿ.ಎ. ಪಾಟೀಲ್